UNIVERSAL LIBRARY
OU_198210
UNIVERSAL LIBRARY

ಮುದ್ರಕರು
ಹೆಚ್. ಎಲ್. ಪ್ರಸಾದ್,
ಟ್ರೌಣ್ ಪ್ರೆಸ್, ಪತ್ರಪ್ಪ ರೋಡ್,
ಬೆಂಗಳೂರು ಸಿಟಿ.
೧೯೪೩.

# ಗಾಂಧೀ ಕತೆಗಳು

ಸಂಪಾದಕ

ಸಿದ್ದವನಹಳ್ಳಿ ಕೃಷ್ಣಶರ್ಮ

ಗಾಂಧೀ ಸಾಹಿತ್ಯ ಭಾಂಡಾರ,

ಬೆಂಗಳೂರು

೧—೪—೦

# ಬಿನ್ನಹ

ಗಾಂಧೀ ಸಾಹಿತ್ಯದ ಎರಡನೆ ಸಂಪುಟ ಈ ಪುಸ್ತಕದಿಂದ ಮೊದಲಾಗುತ್ತದೆ. ಇದರಲ್ಲಿ ಗಾಂಧೀಜಿಯ ನಿತ್ಯಜೀವನದ ಕೆಲವು ರಸಪ್ರಸಂಗಗಳನ್ನು ಪೋಣಿಸಲಾಗಿದೆ. ಈ ಕತೆಗಳೆಲ್ಲ ಹೆಚ್ಚಾಗಿ ಮಹದೇವ ದೇಸಾಯಿ ಬರೆದವೇ. ಈ ಅಂತರಂಗಿಕ ಚಿತ್ರಕ್ಕೆ ಹಿನ್ನೆಲೆಯಾಗಿ ಸೇವಾಗ್ರಾಮದ ಶಬ್ದ ಚಿತ್ರವನ್ನು ಕೊಟ್ಟಿದೆ.

ಗಾಂಧೀ ಸಾಹಿತ್ಯಕ್ಕೆ ದೊರೆತ ಪ್ರೋತ್ಸಾಹ ನನ್ನ ಎಣಿಕೆಗೆ ಮೀರಿದ್ದು. ಅದಕ್ಕಾಗಿ ನಾನು ಕನ್ನಡ ಜನಕ್ಕೆ ಚಿರಕೃತಜ್ಞ.

ಈ ಪುಸ್ತಕದ ಮುದ್ರಣದ ವೆಚ್ಚದ ಸಮಸ್ತ ಭಾರವನ್ನೂ ನನ್ನ ಬಾಲ್ಯಮಿತ್ರರಾದ ಡಾ. ಸುಬ್ಬರಾವ್ ಮೇಲ್ಕೋಟಿ (ಜಿ. ಎಸ್. ಮೇಲುಕೋಟೆ), ಹೈದರಾಬಾದು ಕಾಂಗ್ರೆಸ್ ಅಧ್ಯಕ್ಷರು, ಹೊತ್ತಿದಾರೆ. ಈ ಮಾತನ್ನು ಬಹಿರಂಗವಾಗಿ ತಿಳಿಸಿ ಮೈತ್ರೀದ್ರೋಹ ಮಾಡುತ್ತಿದೇನೇನೋ ಅನಿಸುತ್ತಿದೆ. ಆದರೆ ತಿಳಿಸದೆ ಮನಸ್ಸಿಗೆ ಹಾಯಿಲ್ಲ. ಅವರು ಮಾಡಿದ ಸಹಾಯಕ್ಕೆ ನಾನು ಕೃತಜ್ಞ. ಹೆಚ್ಚು ಹೇಳಲು ಸ್ನೇಹ ಅಡ್ಡಬರುತ್ತದೆ.

ಸಿದ್ದವನಹಳ್ಳಿ ಕೃಷ್ಣಶರ್ಮ.

## ಸೇವಾಗ್ರಾಮ

ಗಾಂಧೀಜೀಗೂ ವೈಸರಾಯ್‌ಗೂ ಇಬ್ಬರಿಗೂ ಅರ್ಥವಾಯಿತು; ಇಬ್ಬರೂ ಬೇರೆ ಬೇರೆ ದಾರಿ ಎಂತ. ಸದ್ಯಕ್ಕಂತೂ ಏಕಾಭಿಪ್ರಾಯ ಸಾಧ್ಯವಿರಲಿಲ್ಲ. ಹೀಗಿರುವಾಗ ಮತ್ತೆ ತಮ್ಮಿಬ್ಬರ ಭೇಟಿಯಾದೀತೆ ಎಂದು ವೈಸರಾಯ್ ಯೋಚಿಸುತ್ತಿದ್ದರು. ಹೊಸದಾಗಿ ಮತ್ತೆ ವಿಚಾರಮಾಡುವ ಸಂಭವವಿಲ್ಲದಿದ್ದರೆ ವೃಥಾ ಕಾಲಹರಣವೇಕೆ? ಆದರೆ ಸಂಧಾನಪ್ರಕರಣ ಹೀಗೆ ಛಟ್ಟನೆ ಹರಿದಂತಾದರೆ ಜನ ಏನೆಂದುಕೊಂಡಾರು? ಮಿಂಚು ಹೊಡೆದಂತಾಗದೆ?

ಕೆಂಡದಂಥ ಸತ್ಯವನ್ನು, ಇದ್ದದ್ದನ್ನು ಇದ್ದಂತೆಯೆ ಲೋಕಕ್ಕೆ ತಿಳಿಸುವುದೆ ಧೀರತೆಯ ಲಕ್ಷಣ; ಜನಕ್ಕೆ ಇಲ್ಲದ ಆಸೆ ಹುಟ್ಟಿಸುವುದಕ್ಕಿಂತ ಅದೇ ಮೇಲು ಎಂದು ವೈಸರಾಯ್ ಕೂಡ ಒಪ್ಪಿಕೊಂಡರು. 'ಹಾಗಾದರೆ ಸೇಗಾಂವಿಗೆ ಯಾವಾಗ ಹೊರಡುತ್ತೀರೋ?' ಎಂದರು ವೈಸರಾಯ್ ಬೆರಗಾಗಿ.

"ಸಾಧ್ಯವಿದ್ದರೆ ಇವೊತ್ತು ಸಂಜೆಗೇ. ನೀವು ಇರಬೇಕೆಂದರೆ ಎಷ್ಟು ದಿನ ಬೇಕಾದರೂ ಇರುತ್ತೇನೆ. ೧೩ನೆ ತಾರೀಕಿನ ತನಕ ಸುಲಭವಾಗಿ ಇರಬಲ್ಲೆ. ಹಾಗೆ ಅಗತ್ಯವಿಲ್ಲದಿದ್ದರೆ ಈಗಲೇ ಸೇಗಾಂವಿಗೆ ಓಡಿಹೋಗುತ್ತೇನೆ. ನನ್ನ ಮನಸ್ಸೆಲ್ಲ ಅಲ್ಲಿಯೆ ಇದೆ. ಎಷ್ಟೋ ಜನ ರೋಗಿಗಳನ್ನು ಬಿಟ್ಟು ಬಂದಿದೇನೆ ಅಲ್ಲಿ. ನನ್ನ ಜೊತೆಗಾರರಲ್ಲಿ ಆಣಿಮುತ್ತಿನಂಥವರು ಅವರು. ಅವರ ಜೊತೆಯಲ್ಲಿದ್ದಾಗ ನನಗಾಗುವಷ್ಟು ಆನಂದ ಮತ್ತೆಲ್ಲೂ ಇಲ್ಲ" ಎಂದರು ಗಾಂಧೀಜೀ.

## ವೈದ್ಯೋತ್ಸಾಹ

ಗಾಂಧೀಜಿಯ ಸಮೀಪ ಪರಿಚಯ ಇಲ್ಲದವರು ಅನ್ನಬಹುದು: 'ಇದೇನೀ ವಿಚಿತ್ರ? ಸಾರ್ವಜನಿಕ ನಾಯಕರು ಯಾರೂ ಇದುವರೆಗೆ ಹೀಗೆ ಮಾತಾಡಿಲ್ಲ.'

ನಿಜ. ಅದೇ ಗಾಂಧೀಜಿಯ ಸಾಮರ್ಥ್ಯ; ದೌರ್ಬಲ್ಯವೂ ಅದೇ. ಮೈಯಾಗಲಿ ಮನಸ್ಸಾಗಲಿ ಯಾರಿಗಾದರೂ ಸ್ವಸ್ಥವಿಲ್ಲದಿದ್ದರೆ ಅವರಿಗೆ ಆರೈಕೆ ಮಾಡುವುದೆಂದರೆ ಗಾಂಧೀಜಿಗೊಂದು ಹುರುಪು. ಇಡೀ ಬಾಳೆಲ್ಲ ಹಾಗೆಯೆ. ಅಂಗಾಂಗ ವಿಚ್ಛೇದನವೆಂದರೆ ಅವರಿಗೆ ಪೂರ್ಣವಿರೋಧ; ಇಲ್ಲದಿದ್ದರೆ ಗಾಂಧೀಜೀ ವೈದ್ಯರಾಗುತ್ತಿದ್ದರೊ ಏನೋ.

ವಕೀಲಿ ಕಸಬನ್ನು ಆರಿಸಿಕೊಂಡರೂ, ಕ್ರಮೇಣ ಅವರ ವೇಳೆಯನ್ನೆಲ್ಲ ಸಾರ್ವಜನಿಕ ಕಾರ್ಯವೆ ನುಂಗಿಹಾಕಿದರೂ ಅವರ ವೈದ್ಯೋತ್ಸಾಹವೇನೊ ಹಾಗೆ ಉಳಿದಿದೆ. ಮೊದಲು ಬರೀ ಚಪಲವಾಗಿದ್ದದ್ದು ಈಗ ಅಧ್ಯಾತ್ಮಿಕ ಅಗತ್ಯವಾಗಿದೆ.

ಮೊನ್ನೆ ಮೊನ್ನೆ ಗುಜರಾತಿಯಲ್ಲಿ ಬರೆದ ಅವರ ಆತ್ಮೀಯ ಲೇಖನ ವೊಂದರಲ್ಲಿ ಗಾಂಧೀಜೀ ಹೀಗೆ ಬರೆದಿದಾರೆ:

'ಸೇವಾಗ್ರಾಮದ ಏಕಾಂತವಾಸ ನನಗೆ ಅಗತ್ಯವಾಗಿತ್ತು. ನನ್ನ ಸ್ವಾಭಾವಿಕ ಸನ್ನಿವೇಶದಲ್ಲಿ, ನಾ ಬದುಕಿ ಬಾಳುವ ಪ್ರದೇಶದಲ್ಲಿ ಮಾತ್ರ ನಾನು ಸ್ಫೂರ್ತಿ ಪಡೆಯಬಲ್ಲೆನೆಂದು ನನಗೆ ಅನುಭವವಾಗಿದೆ. ಸತ್ಯಾಗ್ರಹ ವನ್ನು ಕಂಡುಕೊಂಡಾಗಿನಿಂದ ಆಶ್ರಮವಾಸವನ್ನೆ ಮಾಡುತ್ತಿದೇನೆ: ಅಲ್ಲಿ ನನ್ನ ಸಾಧನೆ ನಡಸಿದೇನೆ. ಆದರೆ ಸೇವಾಗ್ರಾಮಕ್ಕೆ ಆಶ್ರಮವೆಂದು ಹೆಸರಿಡಲು ಬಹಳ ಹಿಂದುಮುಂದು ನೋಡಿದೇನೆ. ಏಕಾಂತವಾಗಿ ಇಲ್ಲಿ ನೆಲೆಸಿ ಕೆಲಸಮಾಡಬೇಕೆಂದು ಮೊದಲು ಆಲೋಚಿಸಿದ್ದೆ.

ನನ್ನ ಮನಸ್ಸು ಹಾಗಿದ್ದರೂ ಇದೊಂದು ಕಟ್ಟುಕಟ್ಟಳೆಯಿಲ್ಲದ ಆಶ್ರಮ ವಾಗಿ ಬಿಟ್ಟಿದೆ. ಇನ್ನೂ ಬೆಳೆಯುತ್ತಲೇ ಇದೆ; ಹೊಸ ಗುಡಿಸಲು ಏಳು ತ್ತಲೇ ಇವೆ. ಇವೊತ್ತು ಅದೊಂದು ಆಸ್ಪತ್ರೆಯಾಗಿದೆ. ವಿನೋದಕ್ಕಾಗಿ ಅದನ್ನು 'ನಿರ್ಬಲರ ಶರಣಾಲಯ'ವೆಂದು ನಾನೇ ಕರೆದಿದೇನೆ. ದೈಹಿಕ ವಾಗಿ, ಮಾನಸಿಕವಾಗಿ ಕೂಡ, ನಾನೊಬ್ಬ ನಿರ್ಬಲ. ನನ್ನ ಹಾಗೆಯೆ ನಿರ್ಬಲರಾದವರ ಗುಂಪೊಂದನ್ನು ಕಲೆಹಾಕಿದೇನೆ.

ಹುಚ್ಚರ ಆಸ್ಪತ್ರೆಗೆ ಕೂಡ ಅದನ್ನು ಹೋಲಿಸಿದೇನೆ ನಾನು. ತಪ್ಪೇನಿಲ್ಲ ಈ ಹೋಲಿಕೆ. ಚರಕಾದಿಂದ ಸ್ವರಾಜ್ಯ ಎಂಬುದು ಹುಚ್ಚನ ಭ್ರಾಂತಿ

ಯಲ್ಲದೆ ಮತ್ತೇನು? ಆದರೆ ಹುಚ್ಚರಿಗೆ ತಾವು ಹುಚ್ಚರೆಂಬುದು ಗೊತ್ತಿಲ್ಲ; ಅವರ ಪುಣ್ಯ. ಅಂತಲೇ ನಾನೂ ವಿವೇಕಶಾಲಿಯೆಂದು ನಾ ತಿಳಿದಿದೇನೆ.'

## ಮಣ್ಣು ಗುಡಿಸಲು

ಇವರೇ, ಈ ರೋಗಿಗಳು ಈ ಅಶಕ್ತರು, ಈ ಹುಚ್ಚರೇ ಗಾಂಧೀಜಿಗೆ ಸ್ಫೂರ್ತಿದಾತರು. ನಮ್ಮ 'ರಾಜಧಾನಿ' ಬಿಟ್ಟು ನಾವೆಲ್ಲಾದರೂ ಪಯಣ ಹೋದಾಗ ಬಂದ ಅಂಚೆಯಲ್ಲಿ ಮೊದಲು ನೋಡಬೇಕಾದ್ದು ಅವರ ಪತ್ರ. ಎಂಥ ಏಕಾಗ್ರವಾದ ಕೆಲಸವಿರಲಿ, ಎಷ್ಟು ಮುಖ್ಯವಾದ ಮಾತುಕತೆಯಿರಲಿ, ಈ ರೋಗಿಗಳ ಆಹಾರದ ವಿಷಯವಾಗಿಯೋ, ಸ್ನಾನ ಔಷಧಗಳ ವಿಷಯ ವಾಗಿಯೋ ಯಾರಾದರೂ ಬಂದು ಸಲಹೆ ಕೇಳಿದರೆ ಮೊದಲು ಅದು - ತರುವಾಯ ಕೆಲಸ, ಮಾತುಕತೆ.

ಈ ವಿಷಯದಲ್ಲಿ ಗಾಂಧೀಜಿಗಿರುವ ಮಮತೆ ಎಲ್ಲರಿಗೂ ಗೊತ್ತಿದೆ. ಆದ್ದರಿಂದಲೇ ಯಾವಾಗಲೋ ಒಂದೆರಡು ಸಲ ಬಿಟ್ಟರೆ ವರ್ಕಿಂಗ್ ಕಮಿಟಿ ಸದಾ ವರ್ಧಾದಲ್ಲೇ ಸೇರುತ್ತದೆ. ಶಾಸ್ತ್ರದ ಸಭಾಸಮಾವೇಶವೇನೊ ವರ್ಧಾ ದಲ್ಲೇ; ಮುಖ್ಯವಾದ ಅಸಲು ಸಭೆಗಳೆಲ್ಲ ಸೇವಾಗ್ರಾಮದಲ್ಲಿ – ಗಾಂಧೀಜಿಯ ಮಣ್ಣುಗುಡಿಸಲಲ್ಲಿ. ಇಡೀ ವಸತಿಯಲ್ಲಿ ಅದೇ ಎಲ್ಲಕ್ಕಿಂತ ಚಿಕ್ಕದ್ದು; ಚಿಕ್ಕ ದಾದರೂ ಚೊಕ್ಕಟವಾದುದು.

ಅಲ್ಲಿಯೇ ಶ್ರೀಮಂತ ಲೋಥಿಯನ್, ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಬಂದು ಅವರೊಡನೆ ಮಾತಾಡಿದ್ದು. ಅಲ್ಲಿ ಕುರ್ಚಿಗಿರ್ಚಿ ಏನೂ ಇಲ್ಲ. ಸೇವಾ ಗ್ರಾಮದಲ್ಲೇ ತಯಾರಾದ ಈಚಲ ಚಾಪೆ. ಚಕ್ಕಳ ಬಕ್ಕಳ ಪದ್ಮಾಸನ ಹಾಕಲಾರದವರಿಗಾಗಿ ಒಂದು ಸ್ಟೂಲು ಇದೆ.

ಆಸನ ಸಾಮಗ್ರಿಯಿಲ್ಲದುದರಿಂದ ನಮಗೆ ಸ್ಥಳ ಸಾಕದಷ್ಟಾದರೂ ೧೦-೧೫ ಜನ ಗುಂಪಾಗಿ ಗಾಂಧೀಜಿಯನ್ನು ನೋಡಲು ಬಂದಾಗ ಮಾತ್ರ ಬಹಳ ಇಕ್ಕಟ್ಟಾಗಿ ಹೋಗುತ್ತದೆ. ಗೋಡೆಯ ಮೇಲೆ ಮಣ್ಣಿನಲ್ಲಿವೆ ತಾಳೆಗಿಡದ ಚಿತ್ರವನ್ನು ಮೂಡಿಸಿದಾಕೆ ಮೀರಾಬೇನ್; ಅದೇ ಅಲಂಕಾರ. ಮೀರಾಬೇನ್‌ಗಾಗಿಯೆ ಮೊದಲು ಈ ಗುಡಿಸಲು ಕಟ್ಟಿದ್ದು. ಆದರೆ ಆಕೆ

ಯುದು ತಿರುಗಲತಿಪ್ಪನ ರಕ್ತ; ಬಹುಕಾಲ ಒಂದು ಗುಡಿಸಲಲ್ಲಿ ಇರಲು ಆ ರಕ್ತ ಬಿಡದು.

ಬಯಸಿದ್ದರೆ ಗಾಂಧೀಜೀ ಅರಮನೆಯನ್ನೆ ಕಟ್ಟಿಕೊಳ್ಳಬಹುದಿತ್ತು. ಸೀತದಾರು ಪರಿವೃತವಾದ ಪರ್ವತಶಿಖರದಲ್ಲಿ ಒಂದು ಭವ್ಯ ಪ್ರಾಸಾದವನ್ನು ಕಟ್ಟಬಹುದಾಗಿತ್ತು. ಆದರೆ ಅವರಿಗೆ ಬೇಕಾದುದು ಬರೀ ಒಂದು ಚಿಕ್ಕ ಗುಡಿಸಲು; ಪರರ ಬೇನೆ ಬೇಸರಿಕೆ ಕಳೆಯಲು ಸಾಕಷ್ಟು ವಿರಾಮ. ಇಡೀ ಭಾರತದ ಸಕಲ ಸಂಪದ್ವೈಭವವೆ ಅವರ ಸುತ್ತಲೂ ಸುಳಿಯಬಹುದಾಗಿತ್ತು; ಆ ಅಲಂಕಾರ, ಆ ಅಟ್ಟಹಾಸ ಎಲ್ಲವೂ ಇರಬಹುದಾಗಿತ್ತು. ಆದರೆ ಗಾಂಧೀಜಿಗೆ ನೂಲುವ ರಾಟೆ, ತೊದಲುವ ಮಕ್ಕಳು ಸಾಕು – ಈ ಸರಲ ಜೀವನವೆ ಗಾಂಧೀಜಿಯ ಬಾಳದಾರಿ. ಮೊದಲು ಏಕಾಂತಕ್ಕಾಗಿ ಸೇವಾಗ್ರಾಮ ಸೇರಿದರಾಗಲಿ, ಅವರ ಗುಡಿಸಲ ಸುತ್ತಲೂ ಆಶ್ರಮ ಬೆಳೆದು ಬಂತು. ಸಕಲ ಜಾತಿ ಜನಾಂಗಕ್ಕೂ ಪರಿಚಿತರಾಗಿ ಎಲ್ಲರಿಗೂ ಬೇಕಾದ ಜೀವ ಏಕಾಂತದಲ್ಲಿರಲು ಹೇಗೆ ತಾನೆ ಸಾಧ್ಯ?

## ಅದು—ಇದು

ಲೋಕದಲ್ಲಿ ಎರಡು ಬಗೆಯ ಜನರಂತೆ, ಕಾರೆಲ್ ಕಾಪೆಕ್ ಹೇಳುತ್ತಾನೆ: ಒಂದು ಬಗೆಯವರಿಗೆ ಅದು–ಇದು, ಸಿಕ್ಕಿದುದನ್ನೆಲ್ಲ ಮನೆ ಹಿಡಿಸಲಾರದಂತೆ ಸಂಗ್ರಹಿಸಿಟ್ಟುಕೊಳ್ಳುವುದು ಬಹು ಇಷ್ಟ; ಇನ್ನೊಂದು ಬಗೆಯವರಿಗೆ ಇದ್ದುದನ್ನು ತೊರೆದು ಆದಷ್ಟು ಹೊರೆ ಕಡಿಮೆಮಾಡಿಕೊಳ್ಳುವ ಬಯಕೆ. ಗಾಂಧೀಜೀ ಉಭಯಕುಲ ಪಿತಾಮಹರು; ಈ ಎರಡೂ ಬಗೆಯ ಸ್ವಭಾವಗಳ ರಸಾಯನ. ತಮಗಾಗಿ ಅವರಿಗೆ ಬೇಕಾದುದು ಅತ್ಯಲ್ಪ; ಆದರೆ ಅದನ್ನು-ಇದನ್ನು ಸಂಗ್ರಹಿಸುವ ರೂಢಿ ಮಾತ್ರ ಹೆಚ್ಚು.

ಅವರ ಜ್ಞಾಪಕಶಕ್ತಿ ವಿಚಿತ್ರವಾದುದು; ಅಗತ್ಯವಾದುದನ್ನು ಮಾತ್ರ ನೆನಪಿಟ್ಟು ಅನಗತ್ಯವಾದುದನ್ನು ಬಿಟ್ಟುಬಿಡುತ್ತಾರೆ. ಅದರ ಹಾಗೆಯೆ ಅವರ ಈ ವಿಚಿತ್ರ ವಸ್ತುಸಂಗ್ರಹ ಕೌಶಲ. ಅವರ ಗುಡಿಸಲಲ್ಲಿ ಕೂಡಿಹಾಕಿದ ಒಂದೊಂದು ಚಿಲ್ಲರೆ ವಸ್ತುವಿಗೂ ಉಪಯೋಗವುಂಟು. ಒಂದು ಮೊಳೆಯೋ, ಗುಂಡು ಸೂಜಿಯೋ, ರಟ್ಟು ಕಾಗದವೋ

ಲಕೋಟಿಯೋ – ಕೆಲಸಕ್ಕೆ ಬಾರದ ಕಾಗದದಿಂದ ಮಾಡಿದ್ದು–, ಅವರಿಗೆ ಬೇಕೆನಿಸಿದರೆ ಕೂಡಲೇ ಅವರ ಕೈ ಸರಿಯಾಗಿ, ಕೊಂಚವೂ ತೊಡಕಿಲ್ಲದಂತೆ ಆ ಪದಾರ್ಥದ ಕಡೆಗೇ ಹೋಗುತ್ತದೆ.

ಆ ಗುಡಿಸಲೋ! ಎಷ್ಟೇ ಜನ ದರ್ಶನಾರ್ಥಿಗಳು ಬರಲಿ, ಎಷ್ಟೇ ಹೊತ್ತು ಮಾತುಕತೆಯಾಗಲಿ ಬೆಳಗಿನಿಂದ ರಾತ್ರಿಯವರೆಗೂ ಆ ಗುಡಿಸಲೇ ಗಾಂಧೀಜಿಯ ಕಾರ್ಯರಂಗ. ಸಮಸ್ತ ಕಾರ್ಯಕಲಾಪವೂ ಅಲ್ಲಿಯೆ. ದಿನವೂ ಮಧ್ಯಾಹ್ನ ೧೧ ಘಂಟೆಗೆ ಅದು ಭೋಜನಶಾಲೆಯಾಗುತ್ತದೆ. ರೋಗಿಗಳ ಆರೈಕೆ ಡಾ. ಸುಶೀಲಾನಾಯರದಾದರೂ ಪಥ್ಯದ ವಿಷಯ ಪೂರ್ಣವಾಗಿ ಗಾಂಧೀಜಿಗೆ ಸೇರಿದ್ದು. ಅವರದೇ ಕಡೆಯ ಮಾತು.

ಆದ್ದರಿಂದ ರೋಗಿಗಳ ಊಟ ಗಾಂಧೀಜಿಯ ಕಣ್ಣೆದುರಿಗೇ ಆಗಬೇಕು. ಅವರು ಎಲ್ಲ ಚಿಲ್ಲರೆ ವಿವರವನ್ನೂ ವಿಚಾರಿಸಬೇಕು. ಅವರ ರೋಗಿಗಳಲ್ಲಿ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ. ಜಯರಾಂದಾಸ್ ದೌಲತ್‌ರಾಂರಂಥ ಪ್ರಸಿದ್ಧ ವ್ಯಕ್ತಿಗಳೂ ಉಂಟು.

## ಮಣ್ಣಿನ ಪೋಲ್ಟೀಸು

ಆಮೇಲೆ ಒಂದು ಗಂಟೆಗೆಲ್ಲ ಆ ಗುಡಿಸಲು ಕಚೇರಿಯಾಗಿ ಬಿಡುತ್ತದೆ. ಆಪೊತ್ತಿನ ಅಂಚೆ, ಪತ್ರಿಕೆ ಬರುತ್ತವೆ. ಪತ್ರಿಕೆಯಲ್ಲಿನ ಮುಖ್ಯಾಂಶಗಳನ್ನು ಕೇಳಿ, ಅಂಚೆಯನ್ನು ತಿರುವಿಹಾಕಿದಮೇಲೆ ಅದೇ ವಿರಾಮಗೃಹವಾಗುತ್ತದೆ. ಅವರು ಮಧ್ಯಾಹ್ನದ ವಿಶ್ರಾಂತಿ ಪಡೆವಾಗ ಅವರ ಜೊತೆಗಾರರಿಗೂ ವಿಶ್ರಾಂತಿ!

ತರುವಾಯ ಲೇಖನ ಕಾರ್ಯ, ಇಲ್ಲವೆ ಸಂದರ್ಶನ-ಸಲ್ಲಾಪ. ಕೆಲವು ಸಲ ಹೊಟ್ಟೆಯ ಮೇಲೆ ಒದ್ದೆಮಣ್ಣಿನ ಪೋಲ್ಟೀಸನ್ನು ಇಟ್ಟುಕೊಂಡು ಹಾಗೆಯೆ ಹಿಂದಕ್ಕೆ ಒರಗಿಕೊಂಡು ಮಲಗಿ ಮಾತಾಡುವುದೂ ಉಂಟು. ರಕ್ತದ ಒತ್ತಡಕ್ಕೆ ಅವರು ಮಾಡುವ ನಿತ್ಯೋಪಚಾರ ಇದು. ಯಾವ ವೈದ್ಯರು ಹೇಳಿದುದೂ ಅಲ್ಲ; ತಮ್ಮ ಸ್ವಂತ ಚುಟುಕ.

ಬೇಸಗೆಯಲ್ಲಿ ಇನ್ನೂ ಒಂದು ಚುಟುಕ ಹೆಚ್ಚು; ತಲೆಯ ಮೇಲೊಂದು ಒದ್ದೆಪಟ್ಟಿ. ಅವರನ್ನು ನೋಡಲು ಬಂದವರು ಈ ಪಟ್ಟಿಯನ್ನು ನೋಡಿ

ಬೇರೆಗಾದರೆ ಅವರಿಗೆ ಮಣ್ಣಿನ ಅದ್ಭುತ ಗುಣಗಳ ಬಗ್ಗೆ ಒಂದು ಉಪನ್ಯಾಸ ಕೊಟ್ಟು ಬಿಡುತ್ತಾರೆ. 'ಅದಕ್ಕಾಗಿಯೇ ಅದನ್ನು ತುಳಿಯುವ ಬದಲು ಹೊಟ್ಟೆಯ ಮೇಲೆ ತಲೆಯ ಮೇಲೆ ಇಟ್ಟುಕೊಂಡಿದೇನೆ' ಎನ್ನುತ್ತಾರೆ.

ಅದಾದಮೇಲೆ ನೂಲುವುದು. ಇದಕ್ಕೂ ಬಂದವರೊಡನೆ ಮಾತುಕತೆಗೂ ಬಹಳ ಗಂಟು. ಒಂದೊಂದು ಸಲ ಹೊಸದಾಗಿ ಬಂದ ರಾಟೆಯ ಮಾದರಿಯನ್ನು ತದೇಕಚಿತ್ತರಾಗಿ ಪರೀಕ್ಷಿಸುತ್ತ, ಅದನ್ನು ಮಾಡಿದ ಶಿಲ್ಪಿಗೆ ಸಲಹೆಕೊಡುತ್ತ ಕೂತಿರುತ್ತಾರೆ.

## ಯರವಡಾ ರಾಟೆ

ಯರವಡಾ ಮಂದಿರದಲ್ಲಿದ್ದಾಗ ಎಷ್ಟೋ ಪ್ರಯೋಗಮಾಡಿ ಮಾಡಿ ಈಗಿನ ಪ್ರವಾಸ ಚರಖಾವನ್ನು ಒಂದು ಪೂರ್ಣಸ್ವರೂಪಕ್ಕೆ ತಂದರು ಗಾಂಧೀಜೀ ಎನ್ನುವದು ಬಹು ಜನಕ್ಕೆ ಗೊತ್ತಿಲ್ಲ. (ಮೊದಲು ಸೂರತ್ತಿನ ಗೆಳೆಯರೊಬ್ಬರು - ಶ್ರೀ. ವಿಮಾವಾಲಾ - ಅದನ್ನು ಕಂಡುಹಿಡಿದರು.) ಆದ್ದರಿಂದ ಅದಕ್ಕೆ ಈ ಹೆಸರು. 'ಯರವಡಾ ಒಪ್ಪಂದ' ಅನ್ನುವದಿಲ್ಲವೆ ಹಾಗೆಯೆ.

ಏನೋ ಹೇಳುತ್ತ ಹೊರಟೆ. ಸಂಜೆ ೫ ಗಂಟೆಗೆ ಆಪ್ರೊತ್ತಿನ ಕೊನೆಯ ಊಟಕ್ಕಾಗಿ ಗಂಟೆಯಾಗುತ್ತದೆ. ರೋಗಿಗಳೆಲ್ಲ ಗುಡಿಸಲಿಗೆ ಬರುತ್ತಾರೆ. ಮತ್ತೆ ಭೋಜನಶಾಲೆ! ಬಾಬು ರಾಜೇಂದ್ರ ಪ್ರಸಾದರು – ಅವರು ಸದಾ ರೋಗಿ, ಉಬ್ಬಸದ ರೋಗಕ್ಕೂ ಅವರಿಗೂ ಬಿಡದ ಗಂಟು - ಯಾವುದೋ ಪ್ರಶ್ನೆಯನ್ನು ಚರ್ಚಿಸಲು ಆಗಾಗ ಬರುತ್ತಾರೆ; ಬಂದವರು ರೋಗಿಗಳ ಪಥ್ಯದೂಟದ ಪಂಗ್ತಿಗೆ ಇದ್ದುಬಿಡುತ್ತಾರೆ.

ಊಟವಾದ ಮೇಲೆ ಎಲ್ಲರೂ ಗಾಳಿಸವಾರಿಗೆ ಹೋಗುತ್ತಾರೆ. ಸಂಜೆಯ ಪ್ರಾರ್ಥನೆ ಮುಗಿದಮೇಲೆ ಆ ಗುಡಿಸಲೂ, ಅದರ ಮುಂದಿನ ಚಪ್ಪರ, ಶಯ್ಯಾಗೃಹವಾಗುತ್ತವೆ.

ಈ ಸಂಜೆ–ಮುಂಜಾನೆಯ ಗಾಳೀ ಸವಾರಿ ಗಾಂಧೀಜಿಯ ನಿತ್ಯ ವಿಧಿ; ಪ್ರಾರ್ಥನೆಯಿದ್ದ ಹಾಗೆ. ಈ ತಿರುಗಾಟದಲ್ಲಿ ಎಷ್ಟೋ ವ್ಯವಹಾರವೂ ನಡೆಯುತ್ತದೆ. ಅಡಿಗೆ ಮನೆಯ ವಿಚಾರಣೆ, ಹೊಲದ ಬೆಳೆಯ ವಿಚಾರ, ಹೊಸದಾಗಿ ಹುಟ್ಟಿದ ಕರುವಿನ ವಿಷಯ – ಆಯಾ ಜನರೊಂದಿಗೆ ಚರ್ಚೆ

ಯಾಗುತ್ತದೆ. ವರ್ಧಾ ಗ್ರಾಮೋದ್ಯೋಗ ಸಂಘದ, ಚರ್ಮಾಲಯದ ಕೆಲಸಗಾರರು ತಮ್ಮ ಮಾತುಕತೆಗೆ ಬೇರೆಯಾಗಿ ಸಮಯ ಬೇಡುವುದಿಲ್ಲ; ಈ ಹೊತ್ತಿನಲ್ಲಿಯೆ ಗಾಂಧೀಜಿಯ ಜೊತೆಗೆ ನಡೆಯುತ್ತ ಮುಗಿಸಿಬಿಡುತ್ತಾರೆ.

ಎಷ್ಟೋ ಸಲ ಗಾಳೀ ಸವಾರಿಯಲ್ಲಿ ಬಹಳ ಗಂಭೀರ ಸಲ್ಲಾಪಗಳೂ ನಡೆಯುವುದುಂಟು. ಅಂಥ ಮಾತುಕತೆಗಾಗಿ ಯಾರೂ ಬಂದಿರದಿದ್ದರೆ, ತಮ್ಮ ಜೊತೆಗೆ ಬಂದ ಮಕ್ಕಳೊಡನೆ ವಿನೋದವಾಡುತ್ತ ಗಾಂಧೀಜೀ ದಿನದ ಆಯಾಸಪರಿಹಾರ ಮಾಡಿಕೊಳ್ಳುತ್ತಾರೆ. ಈ ಮೊಮ್ಮಕ್ಕಳ ದೆಸೆಯಿಂದ ದಿನಕ್ಕೆ ಎಷ್ಟೋ ಸಲ ಗಾಂಧೀಜೀ ನಗೆಯಲ್ಲಿ ತೇಲುತ್ತಾರೆ.

'ಬಾಪೂಜೀ, ನೀವು ದಿಲ್ಲಿಗೆ ಹೋಗುತ್ತೀರಾ?' ಎಳೆಯ ಮೊಮ್ಮಗ ಕೇಳುತ್ತಾನೆ.

'ಹೌದು ಮಗು.'

'ಯಾಕೆ?'

'ವೈಸರಾಯರನ್ನು ನೋಡಲಿಕ್ಕೆ.'

'ಯಾವಾಗಲೂ ನೀವೇ ಹೋಗುತ್ತೀರಿ ವೈಸರಾಯರನ್ನು ನೋಡಲಿಕ್ಕೆ. ಆ ವೈಸರಾಯೇ ನಿಮ್ಮನ್ನು ನೋಡಲಿಕ್ಕೆ ಏಕೆ ಬರುವುದಿಲ್ಲ?' ಅಲ್ಲಿದ್ದವರೆಲ್ಲ ಘೊಳ್ಳೆಂದು ನಗುತ್ತಾರೆ

ಇನ್ನೊಬ್ಬ ಮೊಮ್ಮಗನಿಗಿನ್ನೂ ೧೬ ತಿಂಗಳು. ಗಾಂಧೀಜಿಯ ಊರೆಗೋಲನ್ನು ಹಿಡಿದುಕೊಂಡು ಬಾಪೂಜೀ, ಬಾಬೂಜೀ ಎಂದು ಕರೆಯುತ್ತ, ಅವರ ತಾತ ಮೌನವಾಗಿದ್ದು ಉತ್ತರ ಕೊಡದಿದ್ದರೆ ತಾನು ನಕ್ಕು ಇದ್ದವರನ್ನೆಲ್ಲ ನಗಿಸುತ್ತಾನೆ.

## ಕೆಲಸ ಕೆಲಸ – ಇನ್ನಷ್ಟು ಕೆಲಸ

ಈಚೆಗೆ ಕೆಲಸ ಗುಡ್ಡದ ಹಾಗೆ ಬೆಳೆದು ಇಂಥ ನಗೆಯ ಗಳಿಗೆ ಕಡಮೆಯಾಗುತ್ತಿವೆ. ಸಂದರ್ಶನಾರ್ಥಿಗಳಾದ ಪತ್ರಿಕೋದ್ಯೋಗಿಗಳು ಹಗಲೇನು ಇರುಳೇನು, ಸದಾ ಬರುತ್ತಲೇ ಇರುತ್ತಾರೆ. ಜೆಟ್ಲೆಂಡನ ಹೇಳಿಕೆ ನೋಡಿದಿರಾ? ಲಿನ್‌ಲಿತ್‌ಗೋ ಭಾಷಣ ಓದಿದಿರಾ? ಗಾಂಧೀಜೀ ಅದಕ್ಕೆ ಏನನ್ನುತ್ತಾರೆ ಎಂದು ಅವರ ಕುತೂಹಲ. ತಿರುಗಾಡುವಾಗ ಇವನ್ನು

ಗಾಂಧೀಜಿಗೆ ಓದಿ ಹೇಳಬೇಕು. ಗುಡಿಸಲಿಗೆ ಹಿಂದಿರುಗಿದಾಗ ಅದಕ್ಕೊಂದು ಹೇಳಿಕೆಯನ್ನು ಹೇಳಿ ಬರೆಯಿಸುತ್ತಾರೆ. ಇಲ್ಲದಿದ್ದರೆ ವಿರಾಮ ಸಿಕ್ಕಾಗ ತಾವೇ ಬರೆದು ಬಿಡುತ್ತಾರೆ.

ಕೌತುಕಕ್ಕಾಗಿ ಒಂದು ಸಂಗತಿ ಹೇಳುತ್ತೇನೆ. ಹಿಂದುಸ್ಥಾನದ ಪರಿಸ್ಥಿತಿಯ ಮೇಲೆ ಜೆಟ್ಲೆಂಡ್ ಈಚೆಗೊಂದು ಹೇಳಿಕೆ ಕೊಡಲಿಲ್ಲವೆ. ಅದಕ್ಕೆ ಉತ್ತರ ಬರೆದದ್ದು ಗಾಂಧೀಜೀ ಕ್ಷೌರಮಾಡಿಕೊಂಡು ಮೈಗೆ ಎಣ್ಣೆ ತಿಕ್ಕಿಸಿಕೊಳ್ಳುತ್ತಿದ್ದಾಗ. ಮೊದಲೇ ಗಾಂಧೀಜಿಯ ಕೈಬರಹ ಬ್ರಹ್ಮಲಿಪಿ; ಅವರಲ್ಲೂ ಹೀಗೆ ಮೂರು ಮೂರು ಕೆಲಸ ಒಟ್ಟಿಗೆ ನಡೆದಾಗಂತೂ ದೇವರೇ ಗತಿ. ಟೈಪು ಮಾಡುವವನಿಗೇ ಅಲ್ಲ, ಗಾಂಧೀಜಿಗೂ ಒಮ್ಮೊಮ್ಮೆ ಕಕಮಕವಾಗುತ್ತದೆ.

ಇಂಥ ಪರಿಸ್ಥಿತಿಯಲ್ಲಿ ಏನು ಕೆಲಸಮಾಡಲಿಕ್ಕಾದೀತು? ಸಾಧ್ಯವೆ ಅನಿಸುತ್ತದೆ. ಸಾಧ್ಯ; ಅಷ್ಟೆ ಅಲ್ಲ - ಕೆಲಸ ನಡೆಯುತ್ತಲಿದೆ. ಇದು ಸಾಧ್ಯವಾಗಲು ಕಾರಣ ಗಾಂಧೀಜಿಯ ಏಕಾಗ್ರತೆಯ ಶಕ್ತಿ, ಸಮಚಿತ್ತ. ಇತ್ತ ರೋಗಿಗಳು ಅತ್ತ ಹಸುಗಳು, ಒಂದು ಕಡೆ ಆಶ್ರಮವಾಸಿಯೊಬ್ಬರ ಅಸಮಾಧಾನದ ದೂರು, ಇನ್ನೊಂದು ಕಡೆ ಸಿಮ್ಲಾದ್ದೋ ಲಂಡನ್ನಿನದ್ದೋ ಹೇಳಿಕೆ - ಎಲ್ಲದರಲ್ಲೂ ಸಮವಾದ ಆಸಕ್ತಿ ತೋರಬಲ್ಲವರು ಒಂದನ್ನಾದರೂ ಸರಿಯಾಗಿ ಮಾಡಬಲ್ಲರೇ?

## ಸತ್ಯಾರಾಧಕ

ಇವನ್ನೂ, ಇನ್ನೂ ಹತ್ತನ್ನೂ - ಗಂಭೀರವಾದ್ದು, ಸಾಮಾನ್ಯವಾದ್ದು, ಮುಖ್ಯವಾದ್ದು ಮುಖ್ಯವಲ್ಲದ್ದು - ಗಾಂಧೀಜೀ ಸರಿಯಾಗಿ ತೂಗಿಸಿಕೊಂಡು ಹೋಗುತ್ತಾರೆ. ಎಂಥ ಕುಹಕ ಟೀಕಾಕಾರನಾದರೂ ಇದನ್ನು ಒಪ್ಪಬೇಕು. ತಮ್ಮ ಗಮನಕ್ಕೆ ಬಂದದ್ದು ಯಾವುದೂ ಕೆಲಸಕ್ಕೆ ಬಾರದ ಕೀಳು ವಿಷಯವಲ್ಲ ಅವರಿಗೆ.

ಮೇಲಿನವರಿಂದ ಬರಲಿ ತೀರ ಕೆಳಗಿನವರಿಂದ ಬರಲಿ, ವಿದ್ವಾಂಸರಿಂದಾಗಲಿ ಅವಿದ್ವಾಂಸರಿಂದಾಗಲಿ, ಎಲ್ಲವೂ ಅಷ್ಟೇ ಪವಿತ್ರ. ಸತ್ಯಾರಾಧಕ ತಾನು ಎಂದು ತಿಳಿದವನಿಗೆ ಎಲ್ಲವೂ ಸಮಾನ, ಎಲ್ಲವೂ ಪವಿತ್ರವೆ.

ಏಕೆಂದರೆ – ಪಾಪದಲ್ಲೂ ಪುರುಷೋತ್ತಮನಡಗಿರುವಂತೆ, ಎಷ್ಟೋ ಸಲ ಅಸತ್ಯದಲ್ಲಿ ಸತ್ಯ ಹುದುಗಿರುತ್ತದೆ.

ಇದೇ, ಈ ಸಿದ್ಧಾಂತವೆ ಅವರು ಕೈಗೊಂಡ ಎಲ್ಲ ಕೆಲಸಕ್ಕೂ ಒಂದು ಉದ್ದೇಶ, ಒಂದು ವಾಸ್ತವತೆಯ ಬಣ್ಣ ಕೊಡುತ್ತದೆ. ಅವರಿಗಿರುವ ಪೃಥ್ವೀಸಮ ಸಹನೆ, ಕುಂದಿಲ್ಲದ ಹಾಸ್ಯಪ್ರವೃತ್ತಿ ಅವರಿಗೆ ದೇವರಲ್ಲಿರುವ ಅನಂತ ಭಕ್ತಿಯಿಂದ ಬಂದುದು. ಅಂತೆಯೆ ಮೂರ್ಖರನ್ನು ಕಂಡರೆ ಅವರಿಗೆ ಬೇಸರವಿಲ್ಲ; ಸಂತೋಷವಾಗಿ ಸೈರಿಸುತ್ತಾರೆ. ಜನನಾಯಕರಾದ ಮೋತಿಲಾಲ ನೆಹರುಗಳಿಗಾಗಲಿ ಚಿತ್ತರಂಜನ ದಾಸರಿಗಾಗಲಿ ಅದು ಸಾಧ್ಯವಿರಲಿಲ್ಲ; ಜವಾಹರಲಾಲರಿಗಾಗಲಿ ಸರದಾರರಿಗಾಗಲಿ ಸಾಧ್ಯವಿಲ್ಲ.

ಒಂದು ಸಲ – ಸ್ವಾತಂತ್ರ್ಯ ದಿನ ನಮ್ಮಲ್ಲೊಬ್ಬರು ಗಾಂಧೀಜಿಯ ಬಳಿಗೆ ಹೋಗಿ ಸ್ವಾತಂತ್ರ್ಯ ಪ್ರತಿಜ್ಞೆಯ ಬಗ್ಗೆ ಹತ್ತಾರು ಸವಾಲು ಹಾಕಿದರು. 'ಇಂಥ ನಾನಾ ವ್ಯಾಖ್ಯಾನಗಳ ಪ್ರತಿಜ್ಞೆಯನ್ನೇಕೆ ರಚಿಸಿದಿರಿ ನೀವು? ನಾನೇನು ಮಾಡಲಿ ನೀವೇ ಹೇಳಿ.'

ನಗು ನಗುತ್ತ ಗಾಂಧೀಜೀ ಹೇಳಿದರು: "ವೇದಕ್ಕೆ ಎಷ್ಟು ವ್ಯಾಖ್ಯಾನ ಮಾಡಿದಾರೆ, ಗೊತ್ತಿಲ್ಲವೆ ನಿನಗೆ? ನಮ್ಮ ಪ್ರತಿಜ್ಞೆಯೂ ವೇದಗಳಂತೆ. ಅದನ್ನು ಅರ್ಥಮಾಡಿಕೊಳ್ಳುವ ಬುದ್ಧಿ, ಧೈರ್ಯ ನಿನಗಿದ್ದರೆ ಪ್ರತಿಜ್ಞೆ ಮಾಡು, ಇಲ್ಲದಿದ್ದರೆ ಬಿಡು."

## ಸ್ಫೂರ್ತಿ ಕಾರಣ

ಗಾಂಧೀಜೀ ತಪ್ಪದೆ ಓದುವುದು - ಒಂದೊಂದು ಸಲ ಬೇರೇನನ್ನೂ ಓದಲು ವಿರಾಮವೇ ಇರುವುದಿಲ್ಲ - ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಸಂಪಾದಕೀಯದ ತಲೆಯ ಮೇಲಿರುವ 'ಈ ದಿನದ ವಚನ.' ಒಂದು ದಿನ ಇಂದು ಅಮೃತ ವಚನವನ್ನು ಕೊಟ್ಟಿದ್ದರು. ಅಹಿಂಸೆಯ ಸೂತ್ರದಂತಿತ್ತು ಅದು. ಅಂದಿನಿಂದ ಗಾಂಧೀಜೀ ಅದನ್ನು ಆಚರಿಸುತ್ತ ಬಂದಿದಾರೆ. ಈಗ ಆ ವಚನ ಅವರು ಕೂತಿರುವ ಸ್ಥಳದ ಇದಿರಿಗೆ ಗೋಡೆಯನ್ನು ಅಲಂಕರಿಸಿದೆ:

"ನಿನ್ನ ದಾರಿ ಸರಿಯಾಗಿದ್ದರೆ ನೀನು ಸಹನೆಯಿಂದಿರಬೇಕು; ನಿನ್ನದು ತಪ್ಪಾಗಿದ್ದರೆ ಸಹನೆ ತಪ್ಪದಿರಬೇಕು."

ಗಾಂಧೀಜೀ ಈ ವಚನವನ್ನು ಕೊಂಚ ಬದಲಾಯಿಸಿಕೊಂಡಿದಾರೆ: 'ನಿನ್ನ ಪ್ರತಿಕಕ್ಷಿ ತಪ್ಪುಮಾಡಿದರೆ ನೀನು ಸೈರಿಸಿಕೊಂಡರೇನು ನಷ್ಟವಲ್ಲ; ಪ್ರತಿಕಕ್ಷಿ ಸರಿಯಾದ ದಾರಿಯಲ್ಲಿದ್ದರೆ ನೀನು ಸೈರಣೆ ತಪ್ಪಿದರೆ ಲಾಭವಿಲ್ಲ.'

ಆದ್ದರಿಂದಲೇ ದೊಡ್ಡ ಅಧಿಕಾರಿ ಕೊಟ್ಟ ರೇಗಿಸುವ ಹೇಳಿಕೆಯಾಗಲಿ, ಜನನಾಯಕರು ಮಾಡಿದ ವಿಕೃತ ಭಾಷಣವಾಗಲಿ ಅವರ ಮನಸ್ಸನ್ನು ಕದಲಿಸಲಾರದು; ರೇಗಿಸಲಾರದು. ಭಗವದ್ಗೀತೆಯ ಹಾಗೆಯೆ ತುಲಸೀ ದಾಸನ ರಾಮಾಯಣವೂ ಅವರಿಗೆ ನಿತ್ಯಸ್ಫೂರ್ತಿ ಕಾರಣ; ಅವರ ಪ್ರಾರ್ಥನೆಯಲ್ಲಿ ಅದಕ್ಕಿದ್ದಷ್ಟೆ ಮಹತ್ತ್ವ ಇದಕ್ಕೂ.

ಒಂದು ಪದ್ಯ ಸದಾ ಅವರ ನಾಲಗೆಯ ಮೇಲೇ ಇರುತ್ತದೆ; ಅದು ಅವರ ಜೀವನ ಸೂತ್ರ, ಹೆಮ್ಮಾತು ಎನ್ನಬಹುದು: 'ಚೇತನಾಚೇತನ ಪದಾರ್ಥವನ್ನೆಲ್ಲ ಅದರದರ ಸುಗುಣ ದುರ್ಗುಣಗಳೊಂದಿಗೆ ದೇವರು ಸೃಷ್ಟಿ ಮಾಡಿದಾನೆ. ಹಂಸ ನೀರನ್ನು ಬಿಟ್ಟು ಹಾಲನ್ನು ಮಾತ್ರ ಕುಡಿಯುವಂತೆ ಸಜ್ಜನರು ಒಳ್ಳೆಯದನ್ನು ಮಾತ್ರ ನೋಡುತ್ತಾರೆ.'

'ದುಷ್ಟ ಪದಾರ್ಥದಲ್ಲೂ ಒಳ್ಳೆಯತನದ ಬೀಜ ಇದೆ; ಕಣ್ಣಿಟ್ಟು ಹುಡುಕಿ ನೋಡಿ ಸೇವಿಸಬೇಕು' ಎಂದಿದಾನೆ ಷೇಕ್ಸ್‌ಪಿಯರ್. ಆದರೆ ತುಲಸೀದಾಸ ಹೇಳಿದ್ದರಲ್ಲಿ ವಿಶಿಷ್ಟವಾದ ಸೊಬಗಿದೆ. ಈ ವಿಷಯವಾಗಿ ಕೆಲವು ಕತೆ ಹೇಳುತ್ತೇನೆ.

## ಕತೆಗಳು

ಒಂದು ದಿನ ಸರದಾರ ವಲ್ಲಭಭಾಯಿ ಅವರಿಗೆ ಹೇಳಿದರು: "ಲಿನ್‌ಲಿತ್‌ಗೋ ತನ್ನ ಭಾಷಣದ ಪ್ರತಿ ಒಂದನ್ನು ನಿಮಗೆ ಮೊದಲೇ ಕಳಿಸಿದ್ದನಂತೆ - ಪತ್ರಿಕೆಗಳು ಬರೆದಿವೆ. ಏನು, ಸಲಹೆಗಳಿಗಾಗಿಯೋ ಹೆಚ್ಚುಕಡಮೆ ಮಾಡಲೆಂದೋ?"

"ಸ್ವಾರಸ್ಯವಾದ ಸುಳ್ಳು ಇದು. ಅದಕ್ಕೆ ಸಲಹೆಯೂ ಅಗತ್ಯವಿಲ್ಲ, ಬದಲಾವಣೆಯೂ ಬೇಕಿಲ್ಲ. ಪೂರ್ಣ ನಿರಾಕರಣೆಯೆ."

ಸರದಾರರು ನಕ್ಕರು. "ನಿಮಗೆ ಸರ್ವದೇವ ಸಂತೃಪ್ತಿಮಾಡುವ ಚಾತುರ್ಯವಿದೆ. ಎಲ್ಲರಿಗೂ ಒಳ್ಳೆಯವನು ಎಲ್ಲಪ್ಪ ಎಂಬ ಹಾಗೆ. ಒಂದೇ ಲೇಖನದಲ್ಲಿ ವೈಸ್‌ರಾಯ್ ಭಾಷಣಕ್ಕೂ ಒಂದು ಒಳ್ಳೆ ಮಾತು ಹೇಳಿದೀರಿ; ಜಯಪ್ರಕಾಶ ನಾರಾಯಣ, ಉಳಿದ ಸಮತಾವಾದಿಗಳಿಗೂ ಒಂದು ಒಳ್ಳೆ ಮಾತು ಹೇಳಿದಿರಿ!"

ಅವರ ಜೊತೆಗೆ ತಾವೂ ನಗುತ್ತ ಗಾಂಧೀಜೀ ಹೇಳಿದರು. "ಹೌದು ಅದನ್ನು ನಮ್ಮ ತಾಯಿ ಕಲಿಸಿದರು ನನಗೆ. ಹವೇಲಿಗೂ ಹೋಗೆನ್ನುತ್ತಿದ್ದರು; ಶಿವಾಲಯಕ್ಕೂ ಕಳಿಸುತ್ತಿದ್ದರು. ನನಗೆ ಮದುವೆಯಾದಾಗ ಎಲ್ಲಾ ಹಿಂದೂ ದೇವಾಲಯಗಳಿಗೂ ಜೊತೆಗೆ ಒಂದು ದರಗಾಕ್ಕೂ ಕರೆದು ಕೊಂಡು ಹೋಗಿದ್ದರು ನಮ್ಮನ್ನು - ಆರತಿ ಮಾಡಿಸಲಿಕ್ಕೆ!"

ಒಂದು ದಿನ ಮಧ್ಯಾಹ್ನ ಅಮೆರಿಕದ ಪತ್ರಿಕೋದ್ಯೋಗಿಯೊಬ್ಬ ಗಾಂಧೀಜಿಯನ್ನು ಕಾಣಲು ಬಂದ. ಅವನೂ ಗುಡಿಸಲೊಳಗೆ ಕಾಲಿಟ್ಟ; ಯಾರೋ ಬಿದ್ದಾಬೀಳಾ ಹೊಲದ ನಡುವೆ ಓಡಿಬಂದರು. ಆರ್ಯನಾಯಕಂರ ಚಿಕ್ಕಮಗು ಕಣ್ಣುಮುಚ್ಚಿಕೊಳ್ಳುತ್ತಿದೆ ಎಂದು ಸುದ್ದಿಕೊಟ್ಟರು. ಅರ್ಧ ಗಂಟೆ ಮೊದಲು ಉಳಿದ ಮಕ್ಕಳೊಡನೆ ಆಡುತ್ತಿತ್ತು ಆ ಮಗು. ಈ ಸುದ್ದಿಯನ್ನು ನಾವು ನಂಬುವುದು ಹೇಗೆ?

ಒಡನೆಯೆ ಓಡಿದರು ಗಾಂಧೀಜೀ; ಆ ಹೊಲದ ನಡುವೆಯೆ. ಮಗು ಮೂರ್ಛೆ ಹೋಗಿತ್ತು; ಮತ್ತೆ ಕಣ್ಣುತೆರೆಯಲೆ ಇಲ್ಲ. ತಾಯಿಯನ್ನು ಸಮಾಧಾನ ಮಾಡುತ್ತ ಕೂತರು ಗಾಂಧೀಜೀ. ಆದರೆ ಅಮೆರಿಕದ ದರ್ಶನಾರ್ಥಿಯನ್ನೂ ಅವರು ಮರೆಯಲಿಲ್ಲ ತಾವು ಹಿಂದಿರುಗಿ ಬರುವವರೆಗೆ ಕಾಯುವಂತೆ ಹೇಳಲು ನನಗೆ ಹೇಳಿದರು. ಕೊಯಿನಾ - ಸಕ್ಕರೆ ಮಾತ್ರೆಗಳನ್ನು ಮಿಠಾಯಿಯೆಂದು ತಿಳಿದು ಒಂದು ಸೀಸೆ ತುಂಬಾ ಮಾತ್ರೆಗಳನ್ನು ಆ ಮಗು ತಿಂದಿತ್ತಂತೆ. ಮರುದಿನ ತೀರಿಯಿತು.

## ದುಃಖದಲ್ಲೂ ದರಹಾಸ

ಎಲ್ಲರೂ ದುಃಖದಲ್ಲಿ ಮುಳುಗಿ ಹೋಗಿದ್ದರು. ಕಥೆಯೆಲ್ಲಾ ಮುಗಿಯಿತೆಂದು ತಿಳಿದ ಕೂಡಲೆ ಗಾಂಧೀಜೀ ಹಿಂದಿರುಗಿ ಬಂದು ಆ ಅಮೆರಿಕದ

ಪತ್ರಿಕೋದ್ಯೋಗಿಯನ್ನು ಕರೆಸಿದರು. ಆತ ಪ್ರತ್ಯೇಕವಾದ ಪ್ರಶ್ನೆಯನ್ನೇನೂ ಕೇಳಲಿಲ್ಲ. ಪ್ರಪಂಚದ ಪರಿಸ್ಥಿತಿಯನ್ನು ಪ್ರಸ್ತಾಪಿಸಿದ.

"ನಾನು ಕೂಪಸ್ಥ ಮಂಡೂಕ" ನೇರವಾಗಿ ಬಂತು ಉತ್ತರ. 'ಹಿಂದುಸ್ಥಾನ, ಸೇವಾಗ್ರಾಮವೆ ನನಗೆ ಇಡೀ ಜಗತ್ತು. ನನ್ನ ಜೊತೆಗಾರರು ಕೆಲವರು ಮಾಡಿದ ಹಾಗೆ ನಾನು ವಿಶ್ವವಿಚಾರಗಳ ಅಭ್ಯಾಸಮಾಡುವುದಿಲ್ಲ."

ಮುಂದಿನ ಪ್ರಶ್ನೆ: "ಮುಂದಿನ ಆರು ತಿಂಗಳಲ್ಲಿ ಏನಾದರೂ ಸುದಿ ಬರಬಹುದೆ?"

ಆತನ ಮನಸ್ಸಿನ ಹಿನ್ನೆಲೆ ಗಾಂಧೀಜಿಗೆ ಅರ್ಥವಾಯಿತು. "ಬಾಣಬಿರುಸು ಏನೂ ಇರುವುದಿಲ್ಲ. ನಾವು ಕೊಂಚ ಒತ್ತಾಯ ಮಾಡಬೇಕಾಗಿ ಬರಬಹುದು. ಆದರೆ ಅತಿ ಮೆದುವಾಗಿ ಮಾಡೇವು. ಅಹಿಂಸಾ ಮಾರ್ಗದಲ್ಲಿ ನಾವು ಇಲ್ಲಿ ನಡಸುವ ಕೆಲಸ ಪಶ್ಚಿಮ ದೇಶದಲ್ಲಿ ನಡೆಯುವ ಅಹಿಂಸಾ ಕಾರ್ಯಗಳಲ್ಲಿ ದಶಾಂಶವಾದರೂ ಗದ್ದಲ, ಕಳವಳ ಆಗಲಿಕ್ಕಿಲ್ಲ. ಇನ್ನೊಂದು ಮಾತನ್ನು ಮರೆಯಬೇಡಿ. ನಮಗೆ ರಾಟಿಯೇ ಸಮಸ್ತ ಯುದ್ಧಸಾಮಗ್ರಿ."

"ಹಾಗಾದರೆ ಗಲಾಟೆಯೇನೂ ಇರುವುದಿಲ್ಲವೆ?" ಎಂದು ಕೇಳಿದ ಆತ. ಪತ್ರಿಕೋದ್ಯೋಗಿಗಳಿಗೆ ಗದ್ದಲ, ಅವಾಂತರ ಇಲ್ಲದಿದ್ದರೆ ಎಲ್ಲವೂ ಸಪ್ಪೆ ತಾನೆ.

ಗಾಂಧೀಜೀ ಹೇಳಿದರು: "ಬ್ರಿಟಿಷ್ ಅಧಿಕಾರಿಗಳು ಗಲಾಟೆ ಬೇಕು ಎಂದರೆ ಉಂಟುಮಾಡಬಲ್ಲರು. ನಮ್ಮನ್ನು ಸುಮ್ಮನೆ ತಿವಿದರೆ ಗಲಾಟೆಯಾಗದೆ ಏನು ಮಾಡೀತು? ಅವರಿಗೆ ಗಲಾಟೆ ಬೇಕಿಲ್ಲವೆಂದು ನಾನು ತಿಳಿದಿದೇನೆ. ನನಗಂತೂ ಕುಸ್ತಿಯ ತೀಟೆಯೇನಿಲ್ಲ."

"ತಮ್ಮ ಆರೋಗ್ಯ ಹೇಗಿದೆಯೋ?"

ಒಡನೆಯೆ ಹೇಳಿದರು: "ಮಿಡ್ಲಿಂಗ್ – ಈ ಸೀಸದ ಕಡ್ಡಿಯ ಹಾಗೆ." ಮಿಡ್ಲಿಂಗ್ ಎಂದರೆ ಮಧ್ಯಮ. ಆ ಸೀಸದ ಕಡ್ಡಿಯ ಮೇಲೆ ಮಿಡ್ಲಿಂಗ್ ಎಂದು ಅಚ್ಚಾಗಿತ್ತು!

ಆ ಮಗುವಿನ ಆಕಸ್ಮಿಕ ಮರಣದಿಂದ ಇಡೀ ವಾತಾವರಣ ದುಃಖದಿಂದ ತುಂಬಿದ್ದರೂ ಗಾಂಧೀಜೀ ತಾವು ನಕ್ಕು, ಖಂದವರನ್ನೂ ನಗಿಸಬಲ್ಲ ಬುದಂನ್ನು ಆ ಅಮೆರಿಕದವರೆ ಕಂಡ.

## ಮೌನದ ಮಹಿಮೆ

ಈ ಸಂದರ್ಶನಾರ್ಥಿಗಳ ಕಾಟ, ಸುತ್ತಮುತ್ತಲಿನ ಗದ್ದಲ ಇವನ್ನು ತಪ್ಪಿಸಿಕೊಳ್ಳಲು ಗಾಂಧೀಜೀ ಮೌನದ ಚಿಪ್ಪಿನೊಳಗೆ ಹುದುಗಿಕೊಳ್ಳುತ್ತಾರೆ. ವಿರಸ, ಚಿಂತಾಕರ, ವೇಧಕ ವಿಷಯಗಳಿಂದ ನಿರ್ಲಿಪ್ತರಾಗಿರಲು ಅದೊಂದು ಸಾಧನ ಅವರಿಗೆ; ರಾಮಬಾಣ. ಈಚೆಗೆ ಈ ಕಷ್ಟದ, ತಪಸ್ಸಿನ ದಿನಗಳಲ್ಲಂತೂ ಗಾಂಧೀಜೀ ಚಿರಮೌನಿಯಾಗಿದಾರೆ. ಯಾವಾಗಲಾದರೂ ಮಾತಾಡಿದರೆ ರೋಗಿಗಳಿಗಾಗಿಯೋ ಅತಿ ಮುಖ್ಯವಾದ ಮಾತುಕತೆಗಾಗಿಯೋ; ಅಷ್ಟೆ.

ಇದು ಕೇವಲ ನಿವಾರಣೋಪಾಯವಲ್ಲ; ಎಂದೂ ತಪ್ಪದ ಸ್ಫೂರ್ತಿಬೀಜ. ''ಲೋಕಾಂತದಲ್ಲಿದ್ದರೂ ಏಕಾಂತದಲ್ಲಿದ್ದರೂ, ಮೌನವಾಗಿದ್ದರೂ ಮಾತಾಡುತ್ತಿದ್ದರೂ ಅನಂತದಲ್ಲಿ ಐಕ್ಯವಾಗಿರಬೇಕು. ನಿಜವೆ; ಆದರೆ ಮೌನವಾಗಿದ್ದಾಗ ಅನಂತದೊಡನೆ ಹೆಚ್ಚು ಶ್ರುತಿಗೂಡಿಸಬಲ್ಲೆ ನಾನು'' ಎಂದು ಹೇಳಿದರೊಮ್ಮೆ, ನಿಮ್ಮ ಮೌನದ ಗುಟ್ಟೇನು ಎಂದು ಕೇಳಿದ ಗೆಳೆಯನೊಬ್ಬನಿಗೆ.

''ಮೊದಲು ಕೆಲಸಕ್ಕೆ ತೊಂದರೆಯಾಗದಿರಲಿ ಎಂದು ಇದನ್ನು ಪ್ರಾರಂಭಿಸಿದೆ. ಏಕಾಗ್ರವಾಗಿ ಕೆಲಸಮಾಡಬೇಕಾದಾಗ ಸೋಮವಾರವಾಗಲಿ ಆಗದಿರಲಿ, ಮೌನ ಧರಿಸಿಬಿಡುತ್ತೇನೆ. ಪ್ರಾರಂಭವೇನೊ ಕೇವಲ ವ್ಯವಹಾರ ಸೌಲಭ್ಯಕ್ಕಾಗಿಯೆ ಮಾಡಿದೆನಾಗಲಿ ಈಗದು ದೊಡ್ಡ ಅಧ್ಯಾತ್ಮಿಕ ಸಾಧನವಾಗಿದೆ. ದಿನಗಟ್ಲೆ ನಿರಂತರವಾಗಿ ಮೌನದಲ್ಲಿದ್ದಾಗ ದೇವಸಾನ್ನಿಧ್ಯ ಹೆಚ್ಚುಹೆಚ್ಚಾಗಿ ಅನುಭವವಾಗುತ್ತದೆ.''

**ಮಹದೇವ ದೇಸಾಯಿ.**

ನಂದೀ ಬೆಟ್ಟದಲ್ಲಿದ್ದಾಗ ಕನ್ನಡ ಜನ ಗಾಂಧೀಜಿಯನ್ನು ಹತ್ತಿರ ನಿಂತು ನೋಡಿದರು. ಅವರನ್ನು ಕಂಡು ಮಾತಾಡಿಸಿದರು. ಒಬ್ಬ ಮುಖ್ಯೋಪಾಧ್ಯಾಯರು ಬಂದು ಭಾವೋದ್ರೇಕ ಪರವಶರಾಗಿ, ಹೇ ರಾಷ್ಟ್ರ ಧ್ವಜ, ಆರ್ಯಸಂಸ್ಕೃತಿ ಮೂರ್ತಿ! ಎಂದು ಇಂಗ್ಲೀಷಿನಲ್ಲಿ ಪ್ರಾರಂಭಿಸಿ ಬಿಟ್ಟರು. ಗಾಂಧೀಜೀಗೆ ನಗೆ ಬಂತು. ಈ ಮಹಾಭಕ್ತನ ಮೈಮೇಲೆ ಖಾದಿ ಒಂದು ಗೇಣೂ ಇರಲಿಲ್ಲ. ''ನೀವು ಖಾದಿ ತೊಡದೆ ಇರುವುದು ನಮ್ಮ ರಾಷ್ಟ್ರಕ್ಕೇ ಹಾನಿಯಲ್ಲವೆ?'' ಎಂದರು. ಅವರು ಪೆಚ್ಚುಬಿದ್ದು ''ನಮ್ಮ ಸರಕಾರ ಅಡ್ಡಿಮಾಡರೆಂದು ತಿಳಿಯುವ ತನಕ ಖಾದೀ ಉಡಲು ಸಾಧ್ಯವಿಲ್ಲ'' ಎಂದು ತಲೆತಪ್ಪಿಸಿಕೊಳ್ಳಲು ಯತ್ನಿಸಿದರು. ''ಸರಕಾರದ ಅಡ್ಡಿಯೇನು ಬಂತು? ಅವರೇ ಖಾದಿ ಕೆಲಸ ಮಾಡುತಿದಾರಲ್ಲ. ಮುಖ್ಯ ನೀವು ಮನಸೇ ಮಾಡಿಲ್ಲ'' ಎಂದರು ಗಾಂಧೀಜೀ. ಜೋಲುಮೋರೆ ಮಾಡಿ ಕೊಂಡು ಉಪಾಧ್ಯಾಯರು ಹೊರಡಬೇಕಾಯಿತು.

ಒಂದು ಕುಟುಂಬದ ತಾಯಿ ಮಕ್ಕಳೆಲ್ಲ ಬಂದರು. ಹಿರಿಯ ಮಗಳು ಬೆಂಗಳೂರಲ್ಲಿ ಬಿ.ಎ. ಓದುತ್ತಿದ್ದಳು. ಆಕೆಯ ವಿನಾ ಉಳಿದವರೆಲ್ಲ ಖಾದಿ ಉಟ್ಟಿದ್ದರು.

ಗಾಂಧೀಜೀ ಕೇಳಿದರು: ''ಬಿ.ಎ. ಆದಮೇಲೆ ಏನು ಮಾಡುತ್ತಿ? ಕುರ್ಚಿಯ ಮೇಲೆ ಕೂತುಕೊಳ್ಳುವುದು ತಾನೆ.'' ಉತ್ತರವಿಲ್ಲ.

ಮತ್ತೆ ಕೇಳಿದರು: ಏನು ಮಾಡುತ್ತೀ?''

''ಮನೆಯಲ್ಲಿಯೆ ಇರುತ್ತೇನೆ.''

''ಸರಿ. ಮನೆಯಲ್ಲಿದ್ದೇನು ಮಾಡುತ್ತೀ? ಓದುತ್ತಾ ಇರುವುದೋ?''

ಇಕ್ಕಟ್ಟಿನ ಪ್ರಶ್ನೆ. ಅಂತೂ ಆ ಹುಡುಗಿ ''ನನಗೆ ನೂಲಲು ಬರುತ್ತದೆ. ನೂಲುತ್ತೇನೆ'' ಎಂದಳು.

''ನೂತರೇನಾಯಿತು? ಓದುವುದೇಕೆ ಎಂಬುದನ್ನು ಅರಿತುಕೊಳ್ಳಬೇಡವೆ?'' ಗಾಂಧೀಜೀ ಮಾತಿಗೆ ಬೆರಗಾಗುವ ಪ್ರಾಣಿಯಲ್ಲ.

ಪಾಪ, ಆ ಹುಡುಗಿಗೇನೂ ತೋಚಲಿಲ್ಲ. ಏನು ಹೇಳಬೇಕು. ಮತ್ತೆ ಅದೇ ಮಾತೇ ಹೇಳಿದಳು. ಆದರೆ ತೋರಮಾಣಿಕವೆಂದು ಹಿಡಿದುದು ಭೂರಿ ಕೆಂಡವಾಯಿತು.

ಗಾಂಧೀಜೀ ಕೇಳಿದರು. "ಹಾಗಾದರೆ ಖಾದಿ ಉಟ್ಟಿಲ್ಲವೇಕೆ?"

"ಇದೂ ಸ್ವದೇಶೀ, ಮಹಾತ್ಮಾಜೀ. ಬೆಂಗಳೂರಲ್ಲಿ ಆದದ್ದು. ಮೈಸೂರು ರೇಸಿಮೆ."

"ಹೇಗೆ ಒಪ್ಪುವುದು? ನಾಡಿನ ತುಂಬ ಕೃತ್ರಿಮ ರೇಷ್ಮೆ ಹರಡಿದೆ. ಅದಿರಲಿ. ನೀನು ಪ್ರೌಢಶಿಕ್ಷಣ ಪಡೆಯುತ್ತಿದೀಯೆ. ನಿನ್ನ ಅಕ್ಕತಂಗಿಯರೆಷ್ಟೋ ಜನ ಬಡತನದಲ್ಲಿ ನರಳುತ್ತಿರುವರಲ್ಲ. ನಿನ್ನ ಹಾಗೆ ಅವರೇನು ಶ್ರೀಮಂತರೇ? ನಿನ್ನನ್ನು ನೋಡಿ ಹಾಗೆಯೇ ತಾವೂ ಮಾಡುವ ವಿದ್ಯಾವಿಹೀನರಿಲ್ಲವೆ? ಅವರಿಗೆಲ್ಲ ನೀನು ಮೇಲುಪಂಗ್ತಿಯಾಗಬೇಡವೆ? ನೀನೇ ಖಾದಿ ಉಡದಿದ್ದರೆ ಹೇಗಮ್ಮ?"

"ಹಾಗೇ ಆಗಲಿ ಮಹಾತ್ಮಾಜೀ. ಈ ಬಟ್ಟೆಗಳೆಲ್ಲ ಹರಿದುಹೋದ ಮೇಲೆ ಖಾದಿಯನ್ನೇ ಬಳಸುತ್ತೇನೆ."

ಗಾಂಧೀಜೀ ಗಟ್ಟಿಯಾಗಿ ನಕ್ಕರು. "ನಿನ್ನ ಮನೆಯಲ್ಲಿ ೫೦ ಸಾರಾಯಿ ಬುಡ್ಡಿಗಳಿವೆ ಎನ್ನೋಣ. ಕುಡಿಯುವುದನ್ನು ಬಿಡು ಎಂದು ಹೇಳಿದರೆ, ಸ್ವಲ್ಪ ತಾಳಿ, ಮನೆಯಲ್ಲಿರುವ ೫೦ ಬುಡ್ಡಿಗಳನ್ನೂ ಕುಡಿದಮೇಲೆ ಅದನ್ನು ಬಿಡುತ್ತೇನೆ ಎಂದು ಹೇಳುತ್ತೀಯೂ" ಎಂದರು. ಪಾಪ! ಆ ಹುಡುಗಿಗೆ ಹನಿಗಣ್ಣಾಯಿತು.

*   *   *

ಗಾಂಧೀಜೀಯ ಪ್ರಾರ್ಥನಾಕಾಲ ಒಂದು ಸುಸಂದರ್ಭ, ಅವರನ್ನು ನೋಡಬೇಕೆಂಬ ಜನರಿಗೆ. ಯಾರು ಬೇಕಾದರೂ ಬರಬಹುದು. ಬಂದವರಲ್ಲಿ ಹಾಡು ಬಲ್ಲವರಿದ್ದರೆ 'ಆಗಲಿ' ಎನ್ನುತ್ತಾರೆ ಗಾಂಧೀಜೀ. ನಂದೀ ಬೆಟ್ಟದಲ್ಲಿ ಕನ್ನಡದ ಕುವರಿಯರು ಯಾರಾದರೂ ದಿನವೂ ಇದ್ದೇ ಇರುತಿದ್ದರು. ಕನ್ನಡಿತಿಯರಿಬ್ಬರು ದಿನವೂ ಸಂಜೆಗೆ ಕನ್ನಡದ ಕೃತಿಗಳನ್ನು ಹಾಡುತಿದ್ದರು. ಹಾಡು ಇಂಪಾಗಿರುತಿತ್ತು. ೧೫ ದಿನ ನಡೆಯಿತು ಅವರ ಸೇವೆ. ಆಮೇಲೆ ಒಂದು ದಿನ ಅವರು ಬಂದಿರಲಿಲ್ಲ. ಮರು ದಿನ ಬಂದಾಗ

ನಿನ್ನೆಯೇಕೆ ಬಂದಿರಲಿಲ್ಲವೆಂದು ಗಾಂಧೀಜೀ ವಿಚಾರಿಸಿದರು. "ಮೈಯಲ್ಲಿ ಚೆನ್ನಾಗಿರಲಿಲ್ಲ" ಎಂದರು ಆ ಅಕ್ಕತಂಗಿಯರು. ಗಾಂಧೀಜೀ ಖೊಳ್ಳೆಂದು ನಗುತ್ತ "ಇದೇನಿದು? ನಂದೀದುರ್ಗದಲ್ಲಿ ನಾನೊಬ್ಬನೇ ಆರೋಗ್ಯ ಹೊಂದು ವಂತಿದೆ. ಉಳಿದವರೆಲ್ಲ ಕಾಯಿಲೆ ಬೀಳುತ್ತಿದಾರೆ" ಎಂದರು.

* * *

ಅಮೆರಿಕದ ಪ್ರವಾಸಿಯೊಬ್ಬನನ್ನು ಯಾರೋ ಕೇಳಿದರಂತೆ: "ಹಿಂದು ಸ್ಥಾನದಲ್ಲಿ ಏನೇನು ನೋಡಲು ನೀವು ಬಂದಿರಿ?"

ಅವನು ಹೇಳಿದ: "ಮೂರೇ ಮೂರು ಪದಾರ್ಥ ನೋಡಲು ಬಂದೆ. ಒಂದು ಉತ್ತುಂಗ ಹಿಮಾಲಯ; ಇನ್ನೊಂದು ಅದ್ಭುತ ಶಿಲ್ಪ ತಾಜ ಮಹಾಲು; ಮೂರನೆಯದು ದಿವ್ಯಮೂರ್ತಿ ಗಾಂಧೀಜೀ."

* * *

ಅಮೃತಸರದಲ್ಲಿ ಜಲಿಯನವಾಲಾಬಾಗ್ ತೋಟದಲ್ಲಿ ೧೯೧೯ರಲ್ಲಿ ಜನರಲ್ ಡೈಯರ್ ಎಂಬ ಸೇನಾಧಿಕಾರಿ ನಿರಪರಾಧಿಗಳಾದ, ನಿಸ್ಸಹಾಯ ರಾದ ೨,೦೦೦ ಹಿಂದುಸ್ತಾನೀ ಜನರನ್ನು ಗುಂಡು ಹಾರಿಸಿ ಗಾಯಮಾಡಿ, ಕೆಲವರನ್ನು ಕೊಂದು ದೊಡ್ಡ ರುದ್ರನಾಟಕವನ್ನೇ ಆಡಿದ. ಇದಾದ ಮೇಲೆ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಇದರ ಚರ್ಚೆ ನಡೆದು ನಮ್ಮ ಜನಕ್ಕೆ ಮತ್ತಷ್ಟು ಅವಮಾನವಾಗುವಂತೆ ಆಯಿತು. ಗಾಯಕ್ಕೆ ಉಪ್ಪು ಸುರಿವಂತೆ ಡೈಯರ್ ಮಾಡಿದ ಕೆಲಸ ಮಹಾ ಶೂರತನದ್ದು ಎಂದು ೪ ಲಕ್ಷ ರೂಪಾಯಿ ನಿಧಿ ಕೂಡಿಸಿದರು. ಜನಕ್ಕೆ ರೇಗಿಹೋಗಿತ್ತು.

ಈ ಗಲಾಟೆ ಪ್ರಕರಣದ ವಿಷಯ ವರದಿಮಾಡಲು ಶ್ರೀ ಜಯಕರ್, ಗಾಂಧೀಜೀ ಇಬ್ಬರೂ ಹೋಗಿದ್ದರು. ಡೈಯರ್ ದುರುದ್ದೇಶದಿಂದ ಜನ ರನ್ನು ಆ ತೋಟಕ್ಕೆ ಉಪಾಯವಾಗಿ ಕರೆದುಕೊಂಡು ಹೋಗಿ ಅಲ್ಲಿ ಇವರನ್ನು ಕುರಿಗಳ ತರಿದಂತೆ ತರಿದ ಎಂದು ಜನ ನಂಬಿದ್ದರು. ಹಾಗೆ ನಡೆಯಿತೆಂದು ಜನ ಸತ್ಯವಾಗಿ ಸಾಕ್ಷಿ ಹೇಳಿದರು. ಆ ಉದ್ರೇಕದಲ್ಲಿ ಅದನ್ನೆಲ್ಲ ಸತ್ಯವೆಂದೇ ಹೇಳುವವರು ನಂಬಿದ್ದರು. ಗಾಂಧೀಜೀ ಆ ಸಾಕ್ಷ್ಯ ವನ್ನೆಲ್ಲ ಹೊಡೆದು ಹಾಕಿಬಿಟ್ಟರು. "ಎಲ್ಲಾದರೂ ಉಂಟೆ? ಇದನ್ನು ನಾನು ನಂಬುವುದಿಲ್ಲ. ನಮ್ಮ ವರದಿಯಲ್ಲಿ ಈ ಮಾತಿನ ವಾಸನೆ ಕೂಡ

ಬರಬಾರದು'' ಎಂದರಂತೆ. ಆ ಕಾವಿನ ಗಳಿಗೆಯಲ್ಲಿಯೂ ಗಾಂಧೀಜಿಯ ಸ್ಥಿತಪ್ರಜ್ಞೆ ಅಲ್ಲಾಡಲಿಲ್ಲ. ಅವರ ಸತ್ಯದೃಷ್ಟಿ ಮಸಕಾಗಲಿಲ್ಲ.

ಒಬ್ಬ ದೊಡ್ಡ ಮನುಷ್ಯರು ಬಂದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜೀಗೆ ಅವರು ಪರಿಚಿತರಂತೆ. ಅವರ ಗುರುತು ಗಾಂಧೀಜೀಗೆ ಒಡನೆಯೆ ನೆನಪಾಗಲಿಲ್ಲ.

"ನಾವು ಆಫ್ರಿಕಾದಲ್ಲಿ ಆಡಿದ ಮಾತು ನೆನಪಿಲ್ಲವೆ ನಿಮಗೆ, ಗಾಂಧೀಜೀಗೆ ಒಡನೆಯೆ ನೆನಪಾಗೆಲಿಲ್ಲ.

"ನಾವು ಆಫ್ರಿಕಾದಲ್ಲಿ ಆಡಿದ ಮಾತು ನೆನಪಿಲ್ಲವೆ ನಿಮಗೆ, ಗಾಂಧೀಜೀ?'' ಆತ ಕೇಳಿದ.

"ನನಗೆ ಆಫ್ರಿಕಾ ನೆನಪಿದೆ—''

"ದರ್ಬಾನ್‌ನಲ್ಲಿ ಆ ಹೋಟೆಲು ತೋಟ ನೆನಪಿಲ್ಲವೆ?''

"ಆ ಹೋಟೆಲು ನೆನಪಿದೆ. ಆ ತೋಟದೊಳಗೆ ಕಾಲಿಡುವುದಿಲ್ಲವೆಂದರೇನೇ ಆ ಹೋಟಲಿನಲ್ಲಿ ಹಿಂದೂಗೆ ಅವಕಾಶ; ಹೀಗೆ ನನಗೆ ಅಲ್ಲಿ ಇಂಬು ದೊರಕಿತ್ತು. ಹೋಗಲಿ ಬಿಡಿ. ನಿಮ್ಮನ್ನು ನೋಡಿ ಬಹಳ ಸಂತೋಷವಾಯಿತು. ನಿಮಗೆ ಅವಸರವಿರಬಹುದು, ನಾನು ನಿಮ್ಮನ್ನು ನಿಲ್ಲಿಸಿಕೊಳ್ಳಬಯಸುವುದಿಲ್ಲ—''

ಗಾಂಧೀಜೀಗೆ ಆ 'ಮಾತು' ನೆನಪಿತ್ತೋ ಏನೋ! ಅಂತೂ ಬಂದವನ ಫಜೀತಿ ಯಾರಿಗೂ ಬೇಡ.

* * *

ರವೀಂದ್ರನಾಥರೊಮ್ಮೆ ಸಾಬರಮತಿಗೆ ಬಂದಿದ್ದರು. ೧೮-೧-೩೦ರಲ್ಲಿ. ಆಗ ಅವರಿಗೆ ಮೈ ಕೊಂಚ ದಣಿವಾಗಿತ್ತು. ಸಂಜೆಗೆ ಮಾತಾಡುತ್ತ ಆಡುತ್ತ ರವೀಂದ್ರರೆಂದರು: "ಮಹಾತ್ಮಾಜೀ, ನನಗೀಗ ೭೦ ವರ್ಷ, ನಿಮಗಿಂತ ಬಹಳ ಮುದುಕ ವಯಸ್ಸಿನಲ್ಲಿ ನಾನು.'' ನಗುತ್ತ ಗಾಂಧೀಜೀ ಹೇಳಿದರು: "ಆದರೆ ೬೦ ವರ್ಷದ ಮುದುಕನಿಗೆ ಕುಣಿಯಲು ಸಾಧ್ಯವಿಲ್ಲದಿದ್ದರೂ, ೭೦ ವರ್ಷದ ಯುವಕವಿ ಕುಣಿಯಬಲ್ಲರು, ನಾಟ್ಯವಾಡಬಲ್ಲರು.'' ಗಾಂಧೀಜಿಯ ಮಾತಿಗೆ ಮೆಚ್ಚಿ "ಅದೇನೋ ಸರಿ, ಆದರೆ ನಿಮ್ಮ ಹಾಗೆ ವೃದ್ಧಾಪ್ಯದ

ಆನಂದಕ್ಕೆ ಸಿದ್ಧೌಷಧಿ ನನಗಿಲ್ಲ. ನೀವಾಗಲೇ ಸೆರಮನೆವಾಸದ ಇನ್ನೊಂದು ಯಾತ್ರೆಗೆ ಸಿದ್ಧವಾಗುತಿದೀರಿ. ನನಗೂ ಒಂದು ಯಾತ್ರೆ ಕೊಡಬಾರದೆ ಸರಕಾರದವರು ?''

''ಅದಕ್ಕೂ ತಕ್ಕ ಯೋಗ್ಯತೆ ಸಂಪಾದಿಸಬೇಕು ನೋಡಿ. ನಿಮಗಿಲ್ಲ ಅದು'' ಎಂದರು ಗಾಂಧೀಜೀ. ಕೋಣೆಯ ತುಂಬ ನಗೆ ಅಲೆಯಲೆಯಾಗಿ ಕುಣಿದಾಡಿತು.

* * *

೧೯೩೦ ರಲ್ಲಿ ಸಂಪೂರ್ಣ ಸ್ವಾತಂತ್ರ್ಯದ ತೀರ್ಮಾನ ಆಯಿತು. ಹಿಂದುಸ್ಥಾನ ಯಾವ ವಿಧದಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಧೀನವಾಗ ಬಾರದು; ಸಾಮಂತವಲ್ಲ, ಮಾಂಡಲಿಕವಲ್ಲ ಯಾವ ತರದ ಆಶ್ರಯವೂ ಬೇಡ ಎಂದು ಅದರ ಅರ್ಥ.

ಒಬ್ಬ ಅಮೆರಿಕನ್ ಸುದ್ದಿಗಾರ ಬಂದ. ಆ ಮಾತು ಈ ಮಾತು ಕೇಳಿದ. ಸತ್ಯಾಗ್ರಹ ಮಾಡುತೀರಾ? ಶಾಸನೋಲ್ಲಂಘನ ಮಾಡುತೀರಾ? ಎಲ್ಲ ಆದಮೇಲೆ ''ಎಷ್ಟು ದಿನದಲ್ಲಿ ನೀವು ಗೆಲ್ಲಬಹುದು ಎನಿಸುತ್ತದೆ ನಿಮಗೆ?'' ಎಂದು ಕೇಳಿದ.

ಗಾಂಧೀಜೀ ಶಾಂತವಾಗಿ ಹೇಳಿದರು: ''ಇದನ್ನು ಹೇಳುವುದು ಮನುಷ್ಯ ಮಾತ್ರನಿಗೆ ಸಾಧ್ಯವೇನಯ್ಯ?''

* * *

ಉಪ್ಪಿನ ಸತ್ಯಾಗ್ರಹ. ದಾಂಡಿಯ ದಂಡಯಾತ್ರೆಗೆ ಮೊದಲ ಪಡೆ ಯಲ್ಲಿ ಯಾರು ಯಾರು ಹೋಗಬೇಕೋ ತೀರ್ಮಾನಮಾಡುವುದು ಕಷ್ಟ ಕ್ಕಿಟ್ಟುಕೊಂಡಿತು. ಹಿಂದುಸ್ಥಾನದ ಮೂಲೆ ಮೂಲೆಗಳಿಂದ ನಾನು ತಾನು ಎಂದು ಜನ ಗದ್ದಲಮಾಡತೊಡಗಿದರು ಹೆಂಗಸರು ತಾವು ಬರುತ್ತೇವೆ ಎಂದರು. ಗಾಂಧೀಜೀ ಹೇಳಿದರು. ''ಶತ್ರುವಿಗೇ ಆದರೂ ಸ್ವಲ್ಪ ಕನಿಕರ ತೋರಿಸಬೇಕು. ನಾವು ಕಷ್ಟಪಡಲೆಂದೇ ಹೋಗುತ್ತಿದೇವೆ. ಹಿಂಸೆಯನ್ನೂ ಕೊಡಬಹುದು. ಹೆಂಗಸರನ್ನು ನಾವು ಮುಂದಿಟ್ಟರೆ ಸರಕಾರಕ್ಕೆ ತಾವು ಕೊಡಬೇಕೆಂದಿರುವ ಕಷ್ಟವನ್ನೆಲ್ಲ ನಮಗೆ ಕೊಡಲು ಸ್ವಲ್ಪ ಎಡಸಾದೀತು.

ಅವರು ಇರದಿದ್ದರೆಯೆ ಸರಾಗ. ಈ ಧರ್ಮಸೂಕ್ಷ್ಮಕ್ಕಾಗಿ ಹೆಂಗಸರನ್ನು ಮೊದಲ ಪಡೆಯಲ್ಲಿ ಸೇರಿಸಬಾರದೆನ್ನುತ್ತೇನೆ.''

* * *

ಯಾರು ಸತ್ಯಾಗ್ರಹ ಮಾಡಬೇಕು, ಯಾರು ಮಾಡಬಾರದು ಎಂಬುದಕ್ಕೆ ಕೆಲವು ಖಚಿತವಾದ ನಿಯಮಗಳಿದ್ದವು. ಮೀರಾಬೇನ್, ರೆಜಿನಾಲ್ಡ್ ರೈನಾಲ್ಡ್ಸ್ - ಇಬ್ಬರೂ ಆಶ್ರಮವಾಸಿಗಳು. ಎಲ್ಲ ರೀತಿಯಿಂದಲೂ ಅವರು ಆ ದಳಕ್ಕೆ ಸೇರಲರ್ಹರಾಗಿದ್ದರು. ಗಾಂಧೀಜೀ ಅವರನ್ನು ಬೇಡ ಎಂದರು. ನಿಮಗೆ ಅದಕ್ಕಿಂತ ಹೆಚ್ಚಿನ ಕೆಲಸ ಕಾದಿದೆ. ನೀವು ಇನ್ನೂ ದೊಡ್ಡ ತಪಸ್ಸನ್ನು ಮಾಡಬೇಕು. ಈ ಕಷ್ಟ ಅನುಭವಿಸುವ ಆಸೆಯನ್ನೂ ಬಿಡಬೇಕು. ಹಿಂದೆ ನಿಂತು ಆಶ್ರಮವನ್ನು ನಡೆಸಿಕೊಂಡು ಹೋಗಿ. ಆ ಕೆಲಸ ಮಾಡುವಾಗ ನಿಮ್ಮನ್ನು ಹಿಡಿದರೆ ಏನೂ ಚಿಂತೆಯಿಲ್ಲ. ಒಳ್ಳೆಯದೇ. ಇಲ್ಲದಿದ್ದರೆ ಆಶ್ರಮದ ಗಂಡಸರು ಹೆಂಗಸರೆಲ್ಲ ಈ ಹೊಳೆಯಲ್ಲಿ ಹೋಗಿ, ಆಶ್ರಮದ ಸೊತ್ತನ್ನು ನೋಡಿಕೊಳ್ಳುತ್ತ ಆಶ್ರಮದ ಹುಡುಗ ಹುಡುಗಿಯರನ್ನು ಕಾಪಾಡುತ್ತ ನೀವು ನಿಂತುಕೊಂಡ ದಿನ ಬರಲಿ. ಆ ಸನ್ನಿವೇಶ ನಿಮ್ಮ ಹಿಗ್ಗಿನ ಕಡಲಾಗಲಿ, ಅದು ನಿಮ್ಮ ಹೆಮ್ಮೆಯ ಗುರುತಾಗಲಿ'' ಎಂದರು.

ತಾವು ಹಗೆಯಾಡುತ್ತಿರುವುದು ಇಂಗ್ಲಿಷರೊಡನೆ. ತಮ್ಮ ದೀಕ್ಷೆಯೂ ಬಹಳ ಕಠೋರವಾದುದು. ಮತ್ತೆ ಆಶ್ರಮಕ್ಕೆ ಬರುವ ಸಂಭವ ಬಹಳ ಕಡಮೆ. ಅಂಥ ಹೊತ್ತಿನಲ್ಲಿ ಇಬ್ಬರು ಇಂಗ್ಲೀಷರೇ ತಮ್ಮ ಆಶ್ರಮಕೆ ಯಜಮಾನರಾಗಿರಲಿ ಎಂಬ ಬಯಕೆ ಗಾಂಧೀಜಿಗೆ. ಅಹಿಂಸೆಯ ದಾರಿಯಲ್ಲಿ ಇದೂ ಒಂದು ಸೊಗಸಾದ ಸಂದರ್ಭ.

* * *

ಗಾಂಧೀಜಿಗೂ ಲಾರ್ಡ್ ಸ್ಯಾಂಕಿಗೂ ಮೊದಲು ಭೇಟಿಯಾದದು ಲಂಡನ್ನಿನ ಒಂದು ಹೋಟೆಲಿನಲ್ಲಿ. ಅಲ್ಲಿಗೆ ಗಾಂಧೀಜೀ ಬರುತ್ತಾರೆಂಬ ಸುದ್ದಿ ಊರಲ್ಲೆಲ್ಲ ಹರಡಿ, ಊರಿಗೆ ಊರೇ ಬೀದಿಯಲ್ಲಿ ಕಾದಿತ್ತು. ಗಾಂಧೀಜೀ ಲಘುಕಾಯರು; ಮೂರ್ತಿ ಚಿಕ್ಕದು. ತೊಟ್ಟದ್ದ, ಹೊದೆದಿದ್ದ ವಸ್ತ್ರ ಪೂರಾ ಬಿಳಿಯದು. ನಡಿಗೆಯಲ್ಲಿ ತುಂಬಾ ಗಾಂಭೀರ್ಯವಿತ್ತು. ತಮ್ಮ

ಕೀರ್ತಿಗೌರವಗಳಿಗೆ ತಕ್ಕಂತೆ ಅವರು ನಡೆದಂತಿತ್ತು. ನೋಡಲು ವಿಲಕ್ಷಣ ವಾಗಿ ಕಾಣುತ್ತಿದ್ದರು. ಆದರೆ ನನ್ನನ್ನು ಸಂಪೂರ್ಣವಾಗಿ ಸೆಳೆದದ್ದು ಅವರ ಅಗಲವಾದ ಕಣ್ಣು, ಅದರಲ್ಲಿ ತುಳುಕುತ್ತಿದ್ದ ತೇಜಸ್ಸು. ಆ ತಿಳಿಗಣ್ಣಿ ನಿಂದ ಆ ಜೀವದ ಯೋಚನೆ ವಿಚಾರ, ಅಂತರಂಗ ಒಮ್ಮೊಮ್ಮೆ ಹೊಳೆದು ಬರುತ್ತಿತ್ತು.

ಸ್ಯಾಂಕಿ ಚಕ್ರಗೋಷ್ಠಿ ಸಮಿತಿಯ ಅಧ್ಯಕ್ಷರು. ಗಾಂಧೀಜಿಯೊಡನೆ ನಾಲ್ಕು ಗಳಿಗೆ ಅಲ್ಲಿಯೇ ಏಕಾಂತವಾಗಿ ಮಾತನಾಡಿದರು. ಹಿಂದುಸ್ಥಾನಕ್ಕೆ ಸರಿಯಾದ ಸ್ಥಾನ ದೊರೆತಿಲ್ಲವೆಂದು ಗಾಂಧೀಜೀ ಹೇಳಿದರು. ಅದಕ್ಕಿಂತ ಹೆಚ್ಚಾಗಿ ಆಡಳಿತದ ವೆಚ್ಚ ಅತಿಯಾಗಿ ಬಡವರಿಗೆ ಹೊರಲಾರದ ಭಾರ ವಾಗಿರುವುದನ್ನು ವರ್ಣಿಸಿದರು. ಅವರ ಮಾತಿನ ಪಲ್ಲವಿ ಬಡವರ ಯೋಗ ಕ್ಷೇಮ. ಅದರಲ್ಲಿಯೂ ಹಳ್ಳಿಗಳಲ್ಲಿ ವಾಸವಾಗಿದ್ದವರ ಸುಖದುಃಖ ಅವರ ಮಾತಿನಲ್ಲಿ ಮುಖ್ಯವಾಗಿತ್ತು. ಭಾರೀ ಕಾರಖಾನೆಗಳು ಮಿತಿಮೀರಿ ಬೆಳೆಯು ವುದು ಹಾನಿಕರವೆಂದರು. ಸತ್ಯಾಗ್ರಹವನ್ನು ಸ್ಯಾಂಕಿಗೆ ವಿವರಿಸಿದರು. ದೇಶದ ಸಂರಕ್ಷಣೆಯ ಮಾತು ಬಂದಾಗ ಅಹಿಂಸೆಯನ್ನೇ ಒತ್ತಿಹೇಳಿದರು.

ಆ ದೀರ್ಘ ಸಂಭಾಷಣೆಯಿಂದ ಸ್ಯಾಂಕಿಯ ಮನಸಿನಮೇಲೆ ಕೆಲವು ಅಭಿಪ್ರಾಯ ಖಚಿತವಾಗಿ ಮೂಡಿದವಂತೆ. ಗಾಂಧೀಜೀ ಪ್ರಧಾನವಾಗಿ ಧಾರ್ಮಿಕಜೀವ – ಧರ್ಮಜೀವನವೇ ಅವರ ಸರ್ವಸ್ವ ಎನಿಸಿತಂತೆ ಸ್ಯಾಂಕಿಗೆ.

* * *

ಗಾಂಧೀಜೀ ಚಕ್ರಗೋಷ್ಠಿಯಲ್ಲಿ ನಡೆದುಕೊಂಡ ರೀತಿಯನ್ನು ಸ್ಯಾಂಕಿ ವರ್ಣಿಸಿದಾರೆ. ''೧೪-೯-೩೦ ರ ದಿನ ಮೊದಲಾಯಿತು ಗೋಷ್ಠಿ. ಅದು ಸೋಮವಾರ; ಗಾಂಧೀಜಿಗೆ ಮೌನ ದಿನ. ಒಂದು ಮಾತನ್ನಾದರೂ ಆಡಲಿಲ್ಲ. ಮರುದಿನ ತಮ್ಮ ಪ್ರಥಮ ಭಾಷಣವನ್ನು ಮಾಡಿದರು ಗಾಂಧೀಜೀ. ಬಹಳ ನಿಧಾನವಾಗಿ ಮಿನಿಟಿಗೆ ೫೭ ಶಬ್ದ ಮಾತಾಡಿದರು. ಒಂದು ಗಂಟೆಯ ಹೊತ್ತು ಮಾತಾಡಿದರು. ಏನೂ ಕಾಗದ, ಚೀಟಿ ನೋಡಿ ಕೊಳ್ಳಲಿಲ್ಲ. ಪ್ರಾರಂಭಮಾಡುವ ಮೊದಲು ಕೈಜೋಡಿಸಿ ಪ್ರಾರ್ಥನೆ ಮಾಡಿದ ಹಾಗಿತ್ತು. ನನ್ನ ಪಕ್ಕದಲ್ಲಿಯೆ ಕೂತಿದ್ದರು. ಕಾಲಿಗೆ ಮೆಟ್ಟು, ಸೊಂಟಕ್ಕೆ ತುಂಡುಪಂಚೆ, ಮೈಮೇಲೆ ಬಿಳೀ ದುಪ್ಪಟಿ. ಹಿಂದುಸ್ಥಾನಕ್ಕೆ

ಸ್ವಾತಂತ್ರ್ಯಬೇಕು; ತಮ್ಮ ಹಣ ಕಾಸು, ಸೈನ್ಯಗಳ ಮೇಲ್ವಿಚಾರಣೆ ತಮಗೆ ಬೇಕು ಎಂದು ಕೇಳಿದರು. ಗೋಷ್ಠಿಯ ಆಯಾಸವನ್ನು ಅವರು ಹೇಗೆ ತಡೆದುಕೊಂಡರೋ ನನಗೆ ಆಶ್ಚರ್ಯ! ಎಲ್ಲರಿಗಿಂತ ಮೊದಲುಬರುತ್ತಿದ್ದರು, ಎಲ್ಲರಿಗಿಂತ ಕಡೆಗೆ ಏಳುತ್ತಿದ್ದರು. ಒಂದೊಂದು ದಿನ ೮೦ ಸಾವಿರಶಬ್ದ ಆ ಉಪನ್ಯಾಸಗಳ ಲೆಕ್ಕ."

* * *

ಹೊರೇಸ್ ಅಲೆಗ್ಸಾಂಡರ್ ಹಿಂದುಸ್ಥಾನದ ಪ್ರವಾಸಕ್ಕೆ ಬಂದಿದ್ದರು. ಸಾಬರಮತಿಗೂ ಹೋಗಿದ್ದರು. ಗಾಂಧೀಜಿಯ ಸಂದರ್ಶನವಾಯಿತು. ಬೀಳುಕೊಳ್ಳುವಾಗ "ಇಂಗ್ಲೆಂಡಿಗೆ ಹಿಂದಿರುಗಿ ಹೋದಮೇಲೆ ಅಲ್ಲಿನ ಜನಕ್ಕೆ ಏನು ಹೇಳಲಿ?" ಎಂದು ಕೇಳಿದರು. ಗಾಂಧೀಜೀ ಹೇಳಿದರು: "ನಮ್ಮ ಬೆನ್ನ ಮೇಲಿಂದ ಇಳಿಯಿರಿ ಎಂದು ಇಂಗ್ಲಿಷರಿಗೆ ಹೇಳಿ."

ಎಂಥ ಭಾವಗರ್ಭಿತ ನುಡಿ! ಅದರ ಗುರಿಯೆಷ್ಟು ಸ್ಪಷ್ಟವೋ ಸಾಧನಾ ಮಾರ್ಗವೂ ಅಷ್ಟೇ ಖಚಿತ.

* * *

ಮೂರೂ ಸಂಜೆಯ ಮಿಸುನಿಬೆಳಕು. ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದಲ್ಲಿ. ಹಗಲೆಲ್ಲ ಬಡಬಗ್ಗರ ನಡುವೆ ದುಡಿದು ದುಡಿದು ದಣಿದಿದ್ದ ಗಾಂಧೀಜೀ ಬಯಲಲ್ಲಿ ಬಾನಡಿಯಲ್ಲಿ ಕೂತಿದ್ದರು. ಮೋರೆಯಲ್ಲಿ ಬಳಲಿಕೆ ಕಾಣುತಿತ್ತು. ಅಷ್ಟಾದರೂ ಕಾಯಿಲೆಯಾದ ಮಗುವೊಂದನ್ನು ಮಡಿಲಲ್ಲಿ ಮಲಗಿಸಿಕೊಂಡು ಉಪಚರಿಸುತ್ತಿದ್ದರು. ಆ ಮಗುವಿನ ಪ್ರೀತಿ ಹೇಳ ತೀರದು. ಮರ್ಕಟಕಿಶೋರದಂತೆ ಗಾಂಧೀಜಿಯನ್ನೇ ತಬ್ಬಿಕೊಂಡಿತ್ತು ನೋವಿನಿಂದ, ಒಲವಿನಿಂದ. ಪಕ್ಕದಲ್ಲಿಯೆ ಜೂಲೂ ಹುಡುಗಿಯೊಬ್ಬಳು ಕೂತಿದ್ದಳು. ಆಶ್ರಮದ ಪಕ್ಕದಲ್ಲಿದ್ದ ಗುಡ್ಡದ ಮೇಲಿನ ಶಾಲೆಯ ಹುಡುಗಿ ಅವಳು. ಕತ್ತಲು ಕವಿದಂತೆ 'ಕರುಣಾಳು ಬೆಳಕೆ' ಎಂಬ ಗೀತವನ್ನು ಹಾಡಲು ಹೇಳಿದರು. ಆಗಿನ್ನೂ ಗಾಂಧೀಜೀ ಮುದುಕರಾಗಿರಲಿಲ್ಲ. ಆದರೆ ತಪೋಜೀವನದಿಂದ ಮೈ ಮುದುಡಿತ್ತು. ಒಳಗಿನ ಜೀವ ಮಾತ್ರ ದಿವ್ಯತೇಜಸ್ಸಿನಿಂದ ಮಿರುಗುತಿತ್ತು. ಆಂಡ್ರೂಸರು ಗೀತ ಹೇಳಿ ಮುಗಿಸಿದ

ಮೇಲೆ ಆ ಅಖಂಡಮೌನ ಬಿರಿಯಿತು. ಕೊನೆಯ ನುಡಿಯನ್ನು ಗಾಂಧೀಜೀ ಮೆಲಕು ಹಾಕುತ್ತ ಗುಣುಗುಣಿಸಿದರು.

ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತ.

* * *

ಉರಿಯಾಪ್ರಾಂತದಲ್ಲೊಂದು ಸ್ಥಳ. ಗಾಂಧೀಜಿಯ ಮೈ ಪೂರಾ ಸೋತುಹೋಗಿತ್ತು. ಇದ್ದಕ್ಕಿದ್ದಂತೆ ರಕ್ತದ ವೇಗ ಹೆಚ್ಚಿ ಆರೋಗ್ಯ ಕೆಟ್ಟು, ಮುಂದೇನು ಎನ್ನುವಷ್ಟಾಗಿತ್ತು. ತಂತಿಕೊಟ್ಟು ಆಂಡ್ರೂಸರನ್ನು ಕರೆಸಿಕೊಂಡರು. ಇರುಳೆಲ್ಲ ಪಯಣಮಾಡಿ ಆಂಡ್ರೂಸರು ಅಲ್ಲಿಗೆ ಬಂದಾಗ ಮೂಡುತ್ತಿರುವ ಸೂರ್ಯನಿಗೆ ಅಭಿಮುಖವಾಗಿ ಗಾಂಧೀಜೀ ಮಲಗಿದ್ದರು. ರಾತ್ರಿಯೆಲ್ಲ ನೋವಿನಿಂದ ನಿದ್ದೆಯಿಲ್ಲದೆ ಗಾಂಧೀಜೀ ಸೊಪ್ಪಾಗಿದ್ದರು. ಆಂಡ್ರೂಸರು ಬಂದಹೊತ್ತಿಗೆ ಸರಿಯಾಗಿ ಹರಿಜನ ಒಬ್ಬ—ಅವರಲ್ಲಿಯೂ ಕೀಳು ಕುಲದವನು—ತನ್ನ ಸುಖ ದುಃಖವನ್ನು ಹೇಳಿಕೊಳ್ಳಲು ಅಲ್ಲಿಗೆ ಬಂದ. ಗಾಂಧೀಜಿಗೆ ತಮ್ಮ ನೋವು ಮರೆತುಹೋಯಿತು. ಬಂದು ಶರಣಾಗತನಾದವನ ಅಧೋಗತಿಯ ಕತೆಯಿಂದ ಎದೆಬಿರಿದು, ಆ ಅವಮಾನ ಆ ಸಂಕಟದ ಅನುಭವದಲ್ಲಿ ಮುಳುಗಿಹೋದರು.

* * *

ಗಾಂಧೀಜೀ ವರ್ಧಾದಲ್ಲಿ ಇದ್ದಾಗ ೧೯೩೫ ರಲ್ಲಿ ಜಪಾನ್ ದೇಶದ ರಾಷ್ಟ್ರಕವಿ ಯೋನೆ ನೊಗೂಚಿ ಅವರನ್ನು ನೋಡಲು ಬಂದಿದ್ದರು. ಅವರು ಬಂದಾಗ ಗಾಂಧೀಜೀಗೆ ಮೈ ದಣಿವು. ಸತ್ಯಾಗ್ರಹಾಶ್ರಮದ—ಈಗ ಮಹಿಲಾಶ್ರಮ – ಮಾಳಿಗೆಯಮೇಲೆ ಚಪ್ಪರ ಹಾಕಿ ಅದರ ನೆರಳಲ್ಲಿ ಮಂಚದ ಮೇಲೆ ಅವರನ್ನು ಮಲಗಿಸಿದ್ದರು. ಗಾಂಧೀಜಿಯ ತುಟಿ ಸಾತ್ವಿಕಭಾವ ತುಂಬಿದ ಮುಗುಳುನಗೆಯಿಂದ ಅರೆಬಿರಿದಿತ್ತು. ಹಲ್ಲು ಉದುರಿ ಹೋದುದು ಕಾಣುತ್ತಿತ್ತು. ಕಾಲು ಹಂಚಿಕಡ್ಡಿ ಜೋಡಿಸಿದಹಾಗೆ, ಉಕ್ಕಿನ ತಂತಿಹಾಗೆ ದೃಢ. ಕಾಲು ಚಾಚಿಕೊಂಡಿದ್ದರು; ಯಾರೋ ಎಣ್ಣೆಹಚ್ಚಿ ನೀವುತಿದ್ದರು. ಈ ಬಡಕಲು ಬೈರಾಗಿ, ಈ ಸಾಮಾನ್ಯ ಮನುಷ್ಯನೇಯೆ ಅಖಂಡ ಇಂಗ್ಲೆಂಡಿನ ಅದ್ಭುತ ಜೀವವನ್ನು ನಡುಗಿಸಿದಾತ ಎನಿಸಿತು ಜಪಾನೀ ಕವಿಗೆ. ಗಾಂಧೀ

ಜಿಯ ತಲೆಯಮೇಲೆ ಏನನ್ನೋ ಬಟ್ಟೆಯಲ್ಲಿ ಸುತ್ತಿ ಇಟ್ಟಂತಿತ್ತು. ಅದೇನು ಎಂದು ಕವಿ ಕೇಳಿದರು. ಅದು ಮಣ್ಣಿನ ಪಟ್ಟು, ಪೋಲ್ಟೀಸು. ಎರೆ ಮಣ್ಣನ್ನು ಒದ್ದೆಮಾಡಿ ಹಾಗೆ ತಲೆಯ ಮೇಲೆ ಇಟ್ಟುಕೊಂಡಿದ್ದರು. ಗಾಂಧೀಜೀಗೆ ರಕ್ತದ ವೇಗ ಹೆಚ್ಚು. ಅಂಥವರಿಗೆ ಈ ಪಟ್ಟು ಒಳಿತೆಂದು ವೈದ್ಯರು ಹೇಳಿದ್ದರಂತೆ. ನಗುತ್ತಾ ಗಾಂಧೀಜೀ ಹೇಳಿದರು : "ಹಿಂದುಸ್ಥಾನದ ಮಣ್ಣಿನಲ್ಲಿ ನಾನು ಹುಟ್ಟಿದ್ದೇನೆ. ಹಿಂದುಸ್ಥಾನದ ಮಣ್ಣೇ ಈಗ ನನ್ನ ಕಿರೀಟ."

ಆ ಮಾತಿನಲ್ಲಿ ಎಷ್ಟು ನಗೆಯೋ ಅಷ್ಟು ತತ್ವ.

* * *

ಲಂಡನಿನ ಗಿಲ್ಡ್ ಹೌಸಿನಲ್ಲಿ ಒಂದು ದೊಡ್ಡ ಸಭೆ. ಗಾಂಧೀಜಿಯ ಉಪನ್ಯಾಸ ; ವಿಷಯ : ದಾರಿದ್ರ್ಯದೀಕ್ಷೆ. ಸಾವಿರಾರು ಜನ ಬೀದಿಯಲ್ಲಿ ನಿಂತಿದ್ದರು. ಜನಸಂದಣಿ ಅಷ್ಟು ಹೆಚ್ಚಾಗಿತ್ತು. ಆ ದೀಕ್ಷೆಯನ್ನು ತೆಗೆದುಕೊಂಡು ಆ ಬದುಕನ್ನು ಬಾಳಿದವರ ಬಾಯಿಂದ ಬಂದನುಡಿ. ಉಪನ್ಯಾಸ ಮುಗಿದಮೇಲೆ ಅನೇಕರು ಅನೇಕ ಪ್ರಶ್ನೆ ಕೇಳಿದರು. ಪ್ರಶ್ನೆಗೆ ಸರಿಯಾಗಿ ಅರ್ಥ ಹೊಂದುವಂತೆ ಮಾತಾಡುತ್ತಿದ್ದರು. ಅಸಂಗ್ರಹದ ಮಾತು ಬಂತು. ನಮ್ಮದು ಎಂದು ಏನನ್ನೂ ಇಟ್ಟುಕೊಳ್ಳದೆ ಇರುವುದು ಹೇಗೆ ?

ಗಾಂಧೀಜೀ ಹೇಳಿದರು: "ನಮ್ಮದೆಂದು ಏನೂ ಇಟ್ಟುಕೊಳ್ಳದೆ ಇರುವುದೆಂದರೆ, ನಿಮ್ಮ ಮೈಮೇಲಿನ ಬಟ್ಟೆಗಳನ್ನು ಕಳಚಿಬಿಡುವಹಾಗಲ್ಲ. ನಿಮ್ಮ ಎಲುಬಿನ ಹಂದರಕ್ಕೆ ಅಂಟಿದ ಮಾಂಸವನ್ನೆ ತೆಗೆದಿಟ್ಟಂತೆ. ನೀವು ಹೇಳೀರಿ. 'ಇದೇನಿದು ಹೀಗೆ ಹೇಳುತ್ತೀರಿ ? ನಿಮ್ಮ ಮೈಮೇಲಿನ ಬಟ್ಟೆ ಇದೆಯಲ್ಲ. ಏನೂ ಇಲ್ಲ ಎನ್ನುವುದು ಹೇಗೆ ?' ಅದಕ್ಕೆ ಸಾನಿಷ್ಟೆ ಹೇಳುತ್ತೇನೆ. ಈ ದೇಹವಿರುವತನಕ ಏನಾದರೂ ಅದಕ್ಕೆ ಹೊದಿಸಬೇಕೆಂದು ಕಾಣುತ್ತದೆ. ಆದರೆ"—ನಗುನಗುತ್ತ ಮುಂದರಿಸಿದರು – "ಇಲ್ಲಿರುವವರು ಯಾರಾದರೂ ಬೇಕೆಂದರೆ ಅವನ್ನು ತೆಗೆದುಕೊಳ್ಳಬಹುದು. ನಾನೇನು ಪೋಲೀಸರನ್ನು ಕರೆಯುವುದಿಲ್ಲ !"

ಲಂಡನಿನಲ್ಲಿದ್ದಾಗ ಗಾಂಧೀಜಿಯ ಮೈಗಾವಲಿಗಾಗಿ—?—ಪೋಲೀಸರ ದಳವೊಂದನ್ನು ಬ್ರಿಟಿಷ್ ಸರಕಾರದವರು ಕೊಟ್ಟಿದ್ದರು. ಸಭೆಯಲ್ಲಿ ಅವರೂ

ಇದ್ದರು. ಅವರಿಗೂ ನಗದಿರಲು ಆಗಲಿಲ್ಲ ಈ ಮಾತುಕೇಳಿ.

* * *

ಈ ಸಭೆಯಿಂದ ಮುಂದೆ ಮತ್ತೆಲ್ಲಿಗೋ ಗಾಂಧೀಜೀ ಹೋಗಬೇಕಾಗಿತ್ತು. ಅಲ್ಲಿಗೆ ತನ್ನ ಮೋಟಾರಿನಲ್ಲಿ ಕರೆದುಕೊಂಡುಹೋಗುವುದಾಗಿ ಡಾಕ್ಟರ್ ಮಾಡ್‌ರಾಯಡನ್ ಗಾಂಧೀಜಿಗೆ ಹೇಳಿದ್ದಳು. ಆದರೆ ಸಭೆ ಮುಗಿದು ಹೊರಗೆ ಬಂದಾಗ ಜನರ ಗದ್ದಲವೋ ಗದ್ದಲ. ಆ ಸಮುದ್ರದಲ್ಲಿ ಆಕೆಯ ಮೋಟಾರು ಬೇಗನೆ ಕಣ್ಣಿಗೆಬೀಳಲಿಲ್ಲ. ಲಂಡನಿನ ಮೋಟಾರುಗಳೆಲ್ಲ ತಮ್ಮ ಸಾರಥಿಗೆ ಗಾಂಧೀಜಿಯನ್ನು ಕೂಡಿಸಿಕೊಂಡುಹೋಗುವ ಪುಣ್ಯ ಸಿಗಲಿ ಎಂದು ಅಲ್ಲೇ ಸುಳಿದಾಡಿದವು. ಆಹೊತ್ತು ಕೊಂಚ ಹನಿ ಉದುರಿತ್ತು. ಸ್ವಲ್ಪ ಛಳಿ. ಗಾಂಧೀಜಿಗೆ ಮೈತುಂಬ ಬಟ್ಟೆಯಿಲ್ಲ. ರಾಯಡನ್‌ಗೆ ಗಾಂಧೀಜಿಯನ್ನು ಕಾಯಿಸುವುದು ತಪ್ಪು ಎನಿಸಿ, "ತಾವು ಬೇರೆ ಮೋಟಾರಿನಲ್ಲಿ ಹೊರಡಿ, ನನಗಾಗಿ ಕಾಯಬೇಡಿ" ಎಂದಳು. "ಇಲ್ಲ, ನಿನ್ನ ಗಾಡಿಗಾಗಿ ಕಾಯುತ್ತೇನೆ" ಎಂದರು ಗಾಂಧೀಜೀ ಆಕೆಗಂತೂ ತಲೆಯಮೇಲೊಂದು ಕಿರೀಟ ಇಟ್ಟಂತಾಯಿತು.

* * *

ಶ್ರೀಮತಿ ಮ್ಯೂರಿಯೆಲ್ ಲೆಸ್ಟರ್ ಕೆಲವು ದಿನ ಸಾಬರಮತಿ ಆಶ್ರಮದಲ್ಲಿದ್ದು ಹಿಂದಿರುಗಿ ಹೊರಟಿದಾಳೆ. ಗಾಂಧೀಜಿಯನ್ನು ಬೀಳುಕೊಳ್ಳುವ ಸಂದರ್ಭ.

"ನೀವು ಇಂಗ್ಲೆಂಡಿಗೆ ಬರುತ್ತೀರಾ?" ಲೆಸ್ಟರ್ ಕೇಳುತ್ತಾಳೆ.

"ಬಂದೇನು ಪ್ರಯೋಜನ?" ನಗುತ್ತ ಗಾಂಧೀಜೀ ತಿರುಗಿ ಕೇಳುತ್ತಾರೆ. "ನಮ್ಮ ಜನರ ನಡುವೆ ಇಲ್ಲಿಯೆ ಏನೂ ಮಾಡುವುದಾಗಿಲ್ಲ ನನಗೆ. ಅಲ್ಲಿ ಬಂದು ನಿಮ್ಮ ಜನರಿಗೆ, ಇಂಗ್ಲೆಂಡಿನ ಸಜ್ಜನರಿಗೆ, ನಾನೇನು ತಾನೆ ತಿಳಿಸಲಿ, ಹೇಳಲಿ?"

ಮುಂದೆ ಮಾತಾಡಲು ಬಿಡಲಿಲ್ಲ ಆಕೆ. ಇದೇ ಸಂದರ್ಭ ಗುರುವಿಗೆ ತಿರುಮಂತ್ರ ಹೇಳಲಿಕ್ಕೆ ಎಂದು "ನಮ್ಮವರಿಗೆ ತಿಳಿಸಲಿಕ್ಕೇನು ಬರಬೇಕಾಗಿಲ್ಲ ನೀವು; ತಿಳಿದುಕೊಳ್ಳಲಿಕ್ಕೆ ಬನ್ನಿ" ಎಂದಳು.

ಗಾಂಧೀಜಿಗೆ ಈ ಸೋಲಿನಲ್ಲಿ ತುಂಬ ನಗೆ ಬಂತು. ಧಾರಾಳವಾಗಿ ನಕ್ಕರು.

ಇಂಗ್ಲೆಂಡಿಗೆ ಬರುವುದಾಗಿ ಮಾತುಕೊಟ್ಟರು. ಆದರೆ ಅದಕ್ಕೆ ಒಂದೆರಡು ಕರಾರು ಹಾಕಿದರು. ಇಂಗ್ಲೆಂಡ್ ಸ್ಕಾಟ್ಲೆಂಡುಗಳಲ್ಲಿ ಅಫೀಮು ಸೇವನಗಳ ಮದ್ಯಪಾನ ವಿಷಯವಾಗಿ ಜನಗಳಲ್ಲಿ ಪ್ರಚಾರಮಾಡಬೇಕು. ಹಿಂದುಸ್ಥಾನದ ಮದ್ಯಪಾನ ನಿರೋಧದ ಚಳುವಳಿಗೆ ಭಾರತ ಸರಕಾರ ಅಡ್ಡ ಬಾರದಂತೆ ಆಗಬೇಕು.

ಸುಲಭವಾದ ಕೆಲಸವೇನಲ್ಲ. ಆದರೂ ಲೆಸ್ಟರ್ ಅದನ್ನು ಶಿರದೊಳಾಂತಳು.

* * *

ಇಂಗ್ಲೆಂಡಿಗೆ ಗಾಂಧೀಜೀ ಹೋದರು ಚಕ್ರಗೋಷ್ಠಿಗೆ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಹೋದರು. ಅಲ್ಲಿನ ಪತ್ರಿಕೆಗಳೆಲ್ಲ ಗಾಂಧೀಜೀ ಎಂದರೆ ಒಂದು ವಿಲಕ್ಷಣವ್ಯಕ್ತಿ ಎಂದು ವರ್ಣಿಸುತ್ತಿದ್ದವು. ಏನೋ ಒಂದು ಅದ್ಭುತ! ೧೦-೧೫ ಜನ ಪತ್ರಿಕಾ ಪ್ರತಿನಿಧಿಗಳು ದಿನವೂ ಹೇಳಿಕೆ ಬರೆಸಿಕೊಳ್ಳುತ್ತಿದ್ದರು. ಗಾಂಧೀಜಿಯ ಚಿತ್ರವಂತು ದಿನವೂ ಸರಾಸರಿ ೨೦೦ ಆದಾವು. ಆದರೆ ಸುದ್ದಿ ಮಾತ್ರ ಸತ್ಯವಾಗಿ ಕಳಿಸರು. ಎಲ್ಲರೂ ಏನಾದರೊಂದು ಸುಳ್ಳು ಬರೆಯುತ್ತಿದ್ದರು. ಗೆಳೆಯರಾದ ಸುದ್ದಿಗಾರರು ಕೂಡ ಒಳೊಳ್ಳೆ ಅದ್ಭುತ ಸಂಗತಿಯನ್ನು ಕಲ್ಪಿಸಿ ಬರೆಯುತ್ತಿದ್ದರು.

ಅಮೆರಿಕದ 'ಅಸೋಸಿಯೇಟೆಡ್ ಪ್ರೆಸ್' ಸುದ್ದಿಗಾರ ಗಾಂಧೀಜಿಯ ಪರಿವಾರಕ್ಕೆ ಬಹಳ ಪರಿಚಿತ. ಗಾಂಧೀಜಿಯ ದಿನಚರಿಯನ್ನು ವರ್ಣಿಸುತ್ತ ಕೊಂಚ ಉಪ್ಪುಕಾರ ಹಚ್ಚಿದ. ಗಾಂಧೀಜಿಯ ಪ್ರಾರ್ಥನಾ ಸಭೆಗಳು, ರಾಟೆ - ಎಲ್ಲವನ್ನೂ ವಿವರವಾಗಿ ಬರೆದ; ಅಲ್ಲಿಗೆ ತೃಪ್ತಿಯಾಗಲಿಲ್ಲ, ದಿನವೂ ಗಾಂಧೀಜೀ ತಮ್ಮ ಪಾಲಿನ ಹಾಲಿನಲ್ಲಿ ಸ್ವಲ್ಪ ಒಂದು ಬೆಕ್ಕಿಗೆ ಕೊಡುತ್ತಾರೆ, ತಮ್ಮ ಹತ್ತಿರವೇ ಆ ಬೆಕ್ಕನ್ನು ಮಲಗಿಸಿಕೊಳ್ಳುತ್ತಾರೆ. ಇಂಗ್ಲೆಂಡಿನಲ್ಲಿ ಬಹಳ ಹೆಸರಾದ ಜಾರ್ಜ್ ಸ್ಲೋಕೋಂಬ್ ಕೂಡ ಈ ಚಪಲಕ್ಕೆ ತುತ್ತಾದರು. ಗಾಂಧೀಜಿಯ ವೈಶಾಲ್ಯ ಔದಾರ್ಯಗಳನ್ನು ಚಿತ್ರಿಸಿ, ಪ್ರಿನ್ಸ್ ಆಫ್ ವೇಲ್ಸ್ ಹಿಂದುಸ್ಥಾನಕ್ಕೆ ಬಂದಾಗ ಗಾಂಧೀಜೀ ಆತನಿಗೆ ಸಾಷ್ಟಾಂಗ ನಮ

ಸ್ಕಾರ ಮಾಡಿದಂತೆ ವರ್ಣಿಸಿ ಆ ವೈಶಾಲ್ಯದ ತುದಿಯನ್ನೇ ತೋರಿಸಿದೆನೆಂದು ಕೊಂಡರು.

ಗಾಂಧೀಜಿಗೆ ಬಹಳ ನೋವಾಯಿತು. "ಸ್ಲೋಕೋಂ! ನೀವೂ ಹೀಗೆ ಮಾಡುತೀರಿ ಅನಿಸಿರಲಿಲ್ಲ ನನಗೆ. ನಿಮ್ಮ ಕಾವ್ಯಶಕ್ತಿಗೂ ಇದೇನು ತರವಲ್ಲ. ಕಡುಬಡವನಾದ ಬೀದಿ ಗುಡಿಸುವವನ ಮುಂದೆ, ಹೊಲೆಯನ ಮುಂದೆ ನಾನು ಸಾಷ್ಟಾಂಗ ನಮಸ್ಕಾರ ಮಾಡೇನು; ಸಾವಿರಾರು ವರ್ಷ ಗಳಿಂದ ಅವರನ್ನು ಕೆಳಗೆ ಹಾಕಿ ತುಳಿದುದಕ್ಕಾಗಿ ಅವರ ಕ್ಷಮೆ ಬೇಡಬಲ್ಲೆ; ಅವರ ಕಾಲಧೂಳಿ ನನ್ನ ತಲೆಯಮೇಲೆ ಇಟ್ಟುಕೊಳ್ಳಲೂಬಹುದು. ಆದರೆ ಪ್ರಿನ್ಸ್ ಆಫ್ ವೇಲ್ಸ್ ಅಲ್ಲ, ಚಕ್ರವರ್ತಿಯ ಮುಂದೆ ಕೂಡ ನಮಸ್ಕಾರ ಮಾಡಲಾರೆ; ಆ ಕಲ್ಪನೆ ಕೂಡ ಸಾಧ್ಯವಿಲ್ಲ."

* * *

"ಗಾಂಧೀಜಿಗೆ ಈ ಪ್ರವಾಸದಲ್ಲಿ ಮಾನಮರ್ಯಾದೆ ಎಲ್ಲಿಯೂ ಸಿಗಲಿಲ್ಲ; ಆದ್ದರಿಂದ ಅವರ ಮೋರೆ ಇಳಿದು ಹೋಗಿದೆ" - ಎಂದು ಒಂದು ಪತ್ರಿಕೆ ಬರೆಯಿತು. "ನನಗೆ ಅಸಮಾಧಾನವಾಯಿತು ಎಂದು ನಿನಗೆ ಹೇಗೆ ತಿಳಿಯಿತು? ಬ್ರಿಟಿಷ್ ಸೈನ್ಯಾಧಿಕಾರಿ ನನಗೆ ಕುಪ್ಪಸ ಕಳಿಸಿದ್ದರಲ್ಲಿ ನನಗೆ ರುಚಿಯೇನೂ ತೋರಲಿಲ್ಲ ಎಂದು ನಾನೆಂದರೆ ಅದರಿಂದ ನನಗೆ ಸಿಟ್ಟು ಬಂದಿತೆಂದು ಬರೆದಿದ್ದೀಯಲ್ಲ?" ಎಂದು ಗಾಂಧೀಜೀ ಆ ಪತ್ರಿಕೆಯ ಸುದ್ದಿಗಾರನನ್ನೂ ದಂಡಿಸಿದರು. "ರುಚಿಸಲಿಲ್ಲ ಎಂದರೆ ಸಿಟ್ಟು ಬಂತೆಂದು ತಿಳಿದು ಕೊಂಡೆ" ಎಂದ ಆ ಧೀರ ಸುದ್ದಿಗಾರ. "ಹಾಗಾದರೆ ಕೇಳು. ಇಂಥ ಚಿಲ್ಲರೆ ಮಾತಿಗೆ ಮನಸುಗೊಡಲಾರದಷ್ಟು ಹಾಸ್ಯರಸ ನನಗಿದೆ. ಆ ಅಂತಸ್ಮಿತ ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನನಗೆ ಹುಚ್ಚುಹಿಡಿದು ಹೋಗಬೇಕಾಗಿತ್ತು. ನಿನ್ನ ಈ ಲೇಖನ ನೋಡಿ ಕೆರಳಿ ಕ್ರೋಧೋನ್ಮತ್ತನಾಗಬೇಕಾಗಿತ್ತು. ನೀನು ಬರೆದಿರುವುದೆಲ್ಲ ಶುದ್ಧ ಸುಳ್ಳು, ಇನ್ನುಮೇಲೆ ನನ್ನ ಹತ್ತಿರ ಬರಬೇಡ ಎಂದು ನಾನು ಹೇಳಿದರೂ ಹೇಳಬಹುದು. ಆದರೆ ನಾನು ಹಾಗೆ ಹೇಳುವುದಿಲ್ಲ. ಇಷ್ಟೇ ಅಲ್ಲ, ನೀನು ಬೇಕಾದಾಗ ಬಾ; ನಿನ್ನೊಡನೆ ಮಾತಾಡಲು ಸಿದ್ಧನಾಗಿದೇನೆ" - ಎಂದು ಬುದ್ಧಿಹೇಳಿದರು ಗಾಂಧೀಜೀ.

* * *

ಗಾಂಧೀಜೀ ಲಂಡನ್‌ಗೆ ಹೋದಾಗ ಬಡಬಗ್ಗರ ಕೇರಿಯಲ್ಲಿ, 'ಕಿಂಗ್ಸ್ಲಿ ಹಾಲ್' ಎಂಬ ದೀನಸೇವಾಶ್ರಮದಲ್ಲಿ ತಂಗಿದ್ದರು. ಚಕ್ರಗೋಷ್ಠಿ ನಡೆಯ ಬೇಕಾಗಿದ್ದ ಅರಮನೆ ಅಲ್ಲಿಗೆ ಒಂದು ಗಂಟೆ ಪಯಣ. ಲಂಡನ್‌ನಲ್ಲಿರುವ ಹಿಂದೀಜನರು ಇದ್ದ ಪೇಟೆಯೂ ಅಷ್ಟೇ ದೂರ. ಗಾಂಧೀಜೀ ತಮ್ಮ ನಡುವೆ ಇರಲಿ ಎಂತ ಇವರಿಗೆ. ಇಷ್ಟು ದೂರ ಬೇಡ ಎಂದು ಕೆಲವರಿಗೆ. ಅಂತೂ ಎಳೆದಾಟವಾಯಿತು. ನಮ್ಮಲ್ಲಿ ಬನ್ನಿ, ನಮ್ಮಲ್ಲಿ ಬನ್ನಿ ಎಂದು ಮೇಲಾಟ ಮಾಡಿದರು. "ಹಾಗೆ ಇಲ್ಲಿಂದ ಬೇರೆ ಕಡೆ ಹೋಗುವುದಾದರೆ ಇಂಥದೇ ಮತ್ತೊಂದು ಸ್ಥಳಕ್ಕೆ, ಎಲ್ಲಿ ಬಡವರು ಇದಾರೋ ಅಲ್ಲಿಗೆ ಹೋಗುತ್ತೇನೆ; ತಿಳಿಯಿತೆ?" ಎಂದರು. ಒತ್ತಾಯ ಬಹಳವಾಯಿತು. ಘನಶ್ಯಾಮದಾಸ ಬಿರಲಾ ಬಂದು ಆ ಮಾತೆತ್ತಿದರು. ಗಾಂಧೀಜೀ ಹೇಳಿದರು: "ನೀವೆಲ್ಲರೂ ಏನಾದರೂ ಹೇಳಿ. ಈ ನೆರೆಹೊರೆಯುನ್ನು ಬಿಟ್ಟು ನಾನು ಹೋಗಲಾರೆ. ಇದೇ ನನ್ನ ಪಾಲಿಗೆ ನಿಜವಾದ ಚಕ್ರಗೋಷ್ಠಿ. ಇಲ್ಲೇ ಇಂಗ್ಲೀಷು ಜನರ ಹೃದಯದ ಪರಿಚಯವಾಗಬೇಕಾದರೆ."

* * *

ಕಿಂಗ್ಸ್ಲಿ ಹಾಲ್ ಸಣ್ಣದು. ಗಾಂಧೀಜೀ ಅಲ್ಲಿದ್ದಾಗ ಹಗಲೂ ಇರುಳೂ ಇವರನ್ನು ನೋಡಲು ಬರುವ ಜನಕ್ಕೆ ಮಿತಿಯೇ ಇರಲಿಲ್ಲ. ಅವರ ಕಾರ್ಯಾಲಯ ಅತಿಥಿಗಳ ಕೋಣೆಯಾಯಿತು. ಅಲ್ಲಿನ ಕೆಲಸಗಾರರು ಬಯ ಲಲ್ಲಿ ಮಲಗಬೇಕಾಯಿತು. ಐರ್ಲೆಂಡಿನ ಕವಿ ಎ.ಈ. ಬರಬೇಕಾಗಿದ್ದವರು ಕಾಯಿಲೆಯಾಗಿ ನಿಂತುಬಿಟ್ಟರು. ಮೇಜರ್ ಯೀಟ್ಸ್‌ಬ್ರೌನ್ – ಬೆಂಗಾಲ್ ಲ್ಯಾನ್ಸರ್ ಬರೆದವರು – ಬಂದಿದ್ದರು. ಬ್ರಹ್ಮಜ್ಞಾನ ಸಮಾಜದ ಕೃಷ್ಣ ಮೂರ್ತಿ ಬಂದು ಇದ್ದರು. ಬ್ರೈಯಿಲ್ಸ್‌ಫರ್ಡ್ ಮುಂತಾದ ಪತ್ರಿಕೋ ದ್ಯೋಗಿಗಳಂತೂ ಸರಿಯೇ ಸರಿ. ಶ್ರೀಮತಿ ಎವಿಲಿನ್ ಅಂಡರ್‌ಹಿಲ್ ಕಾಗದ ಬರೆದಿದ್ದಳು: "ಅವರ ಅಮೂಲ್ಯ ಸಮಯವನ್ನು ಕೇಳಲು ನನಗೆ ಅಧಿಕಾರ ಸಾಲದು. ನೋಡಬೇಕೆಂಬ ಆಸೆಯೇನೋ ಇದೆ." "ಅಧಿಕಾರ ವೇಕಿಲ್ಲ? ಇದೆ. ಆಕೆಗೆ ಹಾಗೆ ಬರೆಯಿರಿ" ಎಂದರು ಕಾಗದ ಓದಿದ ಕೂಡಲೆ ಗಾಂಧೀಜೀ. "ಸೆರೆಮನೆಯಲ್ಲಿ ಆಕೆಯ ಕವಿತೆ ಓದಿದೆ. ಓದಿ ಬಹಳ ಆನಂದವಾಯಿತು" ಎಂದರು.

ಕಿಂಗ್ಸ್ಲಿ ಹಾಲಿನ ಪಾದರಿ ಗ್ರೇಟ್‌ಬಾಕ್ ಒಂದು ದಿನ ಬಂದರು. ಅವರು ಬಂದು ಹೋದಮೇಲೆ ಗಾಂಧೀಜೀ ಹೇಳಿದರು. "ಇದು ನೋಡು. ಒಳಗೆ ಬಂದರು, ಮೂರೇ ನಿಮಿಷ ಇದ್ದರು; ಆದರೆ ಅಷ್ಟರಲ್ಲಿ ಅವರು ಹೇಳಬೇಕಾದುದೆಲ್ಲ ಹೇಳಿ ಹೋದರು. ಒಂದು ಮಾತು ಹೆಚ್ಚಿಲ್ಲ, ಒಂದು ಮಾತು ಕಡಮೆಯಿಲ್ಲ. ಮತ್ತೆ ಎಷ್ಟು ನೇರಾದ ಮಾತು, ಎಂಥ ಚಲೋ ಮೆದುವಾದ ರೀತಿ! ನನ್ನ ಮನಸಿಗೇನೋ ಬಹಳ ಮೆಚ್ಚಿಗೆಯಾಯಿತು. ಅವರು ನೋಡು, ನಮ್ಮ ಅತಿಥಿಗಳಲ್ಲಿ ಅರಸು."

* * *

ಒಂದು ದಿನ ಒಂದು ತಂತಿ ಬಂದಿತ್ತು. ಅದನ್ನು ಕೈಯಲ್ಲಿ ಹಿಡಿದು ಕೊಂಡು ಗಾಂಧೀಜೀ ಏನೂ ಅರ್ಥವಾಗದವರಂತೆ ಸೋಜಿಗಗೊಂಡರು. ಅವರ ಸೋಜಿಗವನ್ನು ಕಂಡು ಅವರಿಗೇ ಅಚ್ಚರಿಯಾಗುತ್ತಿತ್ತು. ಸುತ್ತಲೂ ಕೂತಿದ್ದವರಲ್ಲಿ ಯಾರೋ "ಅವನನ್ನೇನು ನೋಡುವುದು ಶುದ್ಧ ನಕಲಿ ಶ್ಯಾಮ" ಎಂದು ತೆಗಳಿ ಮಾತಾಡಿದರು. ಸರಿ, ನೋಡಲು ಸಾಧ್ಯವಿಲ್ಲ ಎಂದು ಉತ್ತರ ಹೇಳಬೇಕು; ಅಷ್ಟರಲ್ಲಿ ಲೆಸ್ಟರ್ ತಂತಿಯನ್ನು ನೋಡಿದಳು.

"ಆ ಹೆಸರು ನಿಮಗೆ ಗೊತ್ತಿಲ್ಲವೆ ಬಾಪು?" ಆಕೆ ಅಚ್ಚರಿಗೊಂಡಳು.

"ಇಲ್ಲವಲ್ಲ" ಗಾಂಧೀಜೀ ಆಕೆಯ ಕಡೆ ನೋಡಿದರು.

"ಚಾರ್ಲಿ ಚಾಪ್ಲಿನ್! ಇಡೀ ಜಗತ್ತಿನ ಅರಗಿಣಿ ಆತ. ನೀವು ಆತನನ್ನು ನೋಡಲೇ ಬೇಕು. ಬಡವರ ಬಾಳೇ ಆತನ ಕಲೆಗೆ ಆಧಾರ. ನಿಮ್ಮ ಹಾಗೆಯೆ ಬಡವರು ಎಂದರೆ ಆತನಿಗೆ ಹುಚ್ಚು. ಆತನ ಚಲಚ್ಚಿತ್ರ ಗಳಲ್ಲಿ ಬಡವರಿಗೆ ಬಹಳ ಆದರ, ಗೌರವ ತೋರಿಸಿದಾನೆ."

ಮೂರು ನಾಲ್ಕು ದಿನದ ತರುವಾಯ ಡಾ. ಕಾತ್ಯಾಳರ ಮನೆಯಲ್ಲಿ ಇಬ್ಬರಿಗೂ ಭೇಟಿಯಾಯಿತು. ಎಷ್ಟು ಗುಪ್ತವಾಗಿಟ್ಟರೂ ಸುದ್ದಿ ಜನಕ್ಕೆ ತಿಳಿಯಿತು. ಬೀದಿಯೆಲ್ಲ ಜನಗಡಲು, ನಗೆಗಡಲು; ಎಲ್ಲೆಲ್ಲೂ ನಗೆ. ಚಾಪಲಿನ್‌ನ ಮೋಟಾರು ಬಂತು. ಮೋಟಾರು ನಿಂತಕೂಡಲೆ ಚಾಪಲಿನ್ ಟಣ್ಣನೆ ನೆಗೆದುಬಂದ; ಟೋಪಿ ಎತ್ತಿ ಜನಕ್ಕೆ ನಮಸ್ಕಾರ ಮಾಡಿದ; ತನ್ನ ಕೈಯನ್ನೇ ತಾನು ಕುಲುಕಿಕೊಂಡ. ಗಾಂಧೀಜೀ ಬಂದರು. ಇವನೂ ನಕ್ಕ, ಅವರೂ ನಕ್ಕರು. ಬೀದಿಯಲ್ಲೆಲ್ಲ ಆನಂದ ಅಲೆಯಾಡಿತು.

ಒಳಗೆ ಹೋಗಿ ಏಕಾಂತವಾಗಿ ಕೂತು ಇಬ್ಬರೂ ಜನರ ಬಗ್ಗೆ, ಬಡವರ ಕೂಲಿಕಾರರ ಯಂತ್ರಗಳ ಸೆರೆಮನೆಗಳ ವಿಷಯ ಎಷ್ಟೋ ಹೊತ್ತು ಮಾತಾಡಿದರು.

* * *

ಕಿಂಗ್ಸ್ಲೀಹಾಲ್‌ನ ಬೀದಿಯಲ್ಲಿ ಒಬ್ಬ ಮನುಷ್ಯ. ಅವನಿಗೆ ಸಂಧಿವಾತ ಬಂದು ಕಾಲುಹಿಡಿದು ಹೆಳವನಾಗಿದ್ದ. ಗಾಂಧೀಜಿಯನ್ನು ನೋಡಬೇಕೆಂದು ಅವನಿಗೆ ತುಂಬ ಆಸೆ. ಅವನ ಹೆಂಡತಿ ಬಾಪೂಗೆ ಆ ಮಾತನ್ನು ತಿಳಿಸಿದಳು. ಮಾರನೆಯ ದಿನ ಬೆಳಗ್ಗೆ ೮ ಗಂಟೆಗೆ ನಾಲ್ಕು ಜನ - ಅವರಿಬ್ಬರು ಗಂಡ ಹೆಂಡತಿ, ಗಾಂಧೀಜೀ, ಶ್ರೀಮತಿ ಲೆಸ್ಟರ್ – ಅವರ ಅಡಿಗೆಯ ಮನೆಯಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತ ಹರಟೆ ಹೊಡೆಯುತ್ತಿದ್ದರು.

ಅಲ್ಲಿನ ಆಸ್ಪತ್ರೆಯಿಂದ ಒಬ್ಬ ಕುರುಡ ಗಾಂಧೀಜಿಗೆ ಕಾಗದ ಬರೆದು ತನ್ನ ನಮಸ್ಕಾರ ತಿಳಿಸಿದ. ಮರುದಿನ ಬೆಳಗ್ಗೆ ೬ ಗಂಟೆಗೇ ಆಸ್ಪತ್ರೆಯಲ್ಲಿ ಸಂಭ್ರಮವೋ ಸಂಭ್ರಮ ; ಗಾಂಧೀಜಿಯನ್ನು ಕಂಡು ಅಲ್ಲಿನವರಿಗೆಲ್ಲ ಅಷ್ಟು ಆನಂದ.

* * *

ಶನಿವಾರ ರಾತ್ರಿ ಕಿಂಗ್ಸ್ಲೀ ಹಾಲಿನಲ್ಲಿ ವಾರವಾರವೂ 'ಆನಂದೋತ್ಸವ' ನಡೆಯುತ್ತದೆ. ನೆರೆಹೊರೆಯವರೆಲ್ಲ ಬಂದು ಆಟಪಾಟ, ಹಾಡು ಕುಣಿತಗಳಲ್ಲಿ ವಿನೋದವಾಗಿ ಕಾಲ ಕಳೆಯುತ್ತಾರೆ. ಗಾಂಧೀಜೀ ಅಲ್ಲಿದ್ದಷ್ಟು ದಿನ ಬಿಡುವು ದೊರೆತಾಗಲೆಲ್ಲ ಆ ಉತ್ಸವಕ್ಕೆ ಬರುತ್ತಿದ್ದರು.

ಒಂದು ದಿನ ಗಾಂಧೀಜೀ ಬಂದಾಗ ಆ ಗುಂಪಿನಲ್ಲಿ ಒಬ್ಬ ಕುರುಡಿ ಇದ್ದಳು. ಎಲ್ಲರಿಗೂ ಗಾಂಧೀಜಿಯನ್ನು ನೋಡಿ ಬಹಳ ಆನಂದವಾಯಿತು. ಆ ಕುರುಡಳಿಗೂ ಗಾಂಧೀ ಬಂದರೆಂಬುದು ತಿಳಿಯಿತಾಗಲಿ ಅವಳಿಗಾ ಆನಂದ ಪೂರ್ಣವಾಗಲಿಲ್ಲ. ಶ್ರೀಮತಿ ಲೆಸ್ಟರ್ ಗಾಂಧೀಜಿಯನ್ನು ಆ ಕುರುಡಿಯ ಬಳಿಗೆ ಕರೆದೊಯ್ದಳು, ಗಾಂಧೀಜೀ ಅವಳ ಮೈಮುಟ್ಟಿ ಆಶೀರ್ವದಿಸಲಿ ಕೈ ಕುಲಕಲಿ ಎಂದು. ಇವರಿಬ್ಬರೂ ಆ ಕಡೆ ಹೊರಳಿ ದೊಡನೆ ಹಾಡು ನಿಂತಿತು, ಆಟ ಮುಗಿಯಿತು, ಎಲ್ಲವೂ ಶಾಂತವಾಯಿತು. ಏನು ನಡೆಯುತ್ತದೆಯೋ ನೋಡೋಣ ಎಂಬ ಕುತೂಹಲ ಎಲ್ಲರಿಗೂ.

ಇದೇನು? ಏಸುವೇ ಇದಿರಿಗೆ ನಿಂತಂತಿದೆ! ಕುರುಡಿಯೊಡನೆ ಗಾಂಧೀಜೀ ಮಾತಾಡುತ್ತಿರಲು ಜನವೆಲ್ಲ ಸುತ್ತುಗಟ್ಟಿ ನಿಂತರು; ಮೆಲ್ಲನೆ, ಸದ್ದಿಲ್ಲದೆ, ಸರಿದು ಬಂದು ನಿಂತರು. ಹರೆಯದ ಹೆಣ್ಣುಗಂಡು ತೀರ ಹತ್ತಿರ ಬಂದು ನಿಂತರು. ಅವರ ಮನಸ್ಸು ಅವರ ಕೈಯಲ್ಲಿರಲಿಲ್ಲ. ಏನೋ ಒಂದು ದಿವ್ಯಭಾವ ಅವರನ್ನು ಮಿಡಿಯುತ್ತಿತ್ತು. ತಾಯಂದಿರು ತಮ್ಮ ಮಕ್ಕಳನ್ನು ಗಾಂಧೀಜಿಯ ಮುಂದೆ ಚಾಚಿದರು, ಆ ಮಹಾತ್ಮ ಕೈಯಾರೆ ಹರಸಲಿ ಎಂದು. ಎಲ್ಲರನ್ನೂ ಹರಸಿ, ಒಂದು ಮಗುವನ್ನು ಎತ್ತಿಕೊಂಡರು ಗಾಂಧೀಜೀ! ವಿಶ್ವವನ್ನು ಕಂಡ ಯಶೋದೆಯ ಮೋರೆಯಲ್ಲಿ ಮಿನುಗಿದ್ದ ಹರ್ಷ ಆಶ್ಚರ್ಯ ಶಾಂತಿ ಎಲ್ಲವೂ ಅಲ್ಲಿ ಮೂಡಿ, ಇಡೀ ಮನೆಯನ್ನ ತುಂಬಿತ್ತು ಆ ರಾತ್ರಿ.

* * *

ಗಾಂಧೀಜಿಗೆ ಮಕ್ಕಳನ್ನು ಕಂಡರೆ ತುಂಬಾ ಪ್ರೀತಿಯಲ್ಲವೆ. ಲಂಡನಿನಲ್ಲಿ ಗಾಂಧೀಜೀ ಬೆಳಗ್ಗೆ ಗಾಳಿಸವಾರಿಗೆ ಹೊರಟರೆ ನೆರೆಹೊರೆಯ ಹುಡುಗರೆಲ್ಲ ಬೀದಿಯಲ್ಲೇ. ಗಾಂಧೀಜೀ ಅವರ ಕಡೆ ನೋಡಿ ಒಂದು ಸಲ ಮುಗುಳು ನಗೆ ನಕ್ಕರೆ ಸಾಕು ಅವರಿಗೆ ಸ್ವರ್ಗವೇ ಸಿಕ್ಕಂತೆ.

ಒಂದು ದಿನ ನೆರೆಹೊರೆಯ ಮಕ್ಕಳನ್ನೆಲ್ಲ ಕರೆದು ಸಭೆ ಸೇರಿಸಿದರು. ಮಕ್ಕಳೆಲ್ಲ ಬಂದು ಗಾಂಧೀಜಿಯ ಸುತ್ತ ನೆರೆದರು. ಆ ಮಾತು ಈ ಮಾತು ಆಡಿ ಗಾಂಧೀಜೀ ಆ ಹುಡುಗರನ್ನು ಕೇಳಿದರು: "ಒಬ್ಬ ಹುಡುಗ ನಿನಗೊಂದು ಏಟು ಕೊಟ್ಟರೆ ನೀನೇನು ಮಾಡುತ್ತೀ?"

ಹುಡುಗರು ಹೇಳಿದುದನ್ನು ಸುಲಭವಾಗಿಯೆ ಊಹಿಸಬಹುದಾಗಿದೆ. ಒಂದಕ್ಕೆರಡು ತಾನೆ ಜಗತ್ತಿನ ರೀತಿ. ಸೇರಿಗೆ ಸವ್ವಾಸೇರೆಂಬುದು ಪ್ರಸಿದ್ಧ.

"ಆಮೇಲೇನು? ಮುಂದೇನಾಗುತ್ತದೆ?"

ಗೊತ್ತೇ ಇದೆ. ಮುಷ್ಟಾಮುಷ್ಟಿ, ಕೇಶಾಕೇಶಿ, ಮಾರಾಮಾರಿ.

ಗಾಂಧೀಜೀ ಮೆದುವಾಗಿ ಹುಡುಗರಿಗೆ ಸವಾಲಿನ ಮೇಲೆ ಸವಾಲು ಹಾಕಿದರು. ಅವರಾಡಿದ ಮಾತಿನಲ್ಲಿ ನಗೆಯಿತ್ತು; ನಾವೀನ್ಯವೂ ಇತ್ತು.

"ಇದನ್ನು ಬಿಟ್ಟು ಬೇರೆ ದಾರಿಯಿಲ್ಲವೆ?"

ಅರಳು ಹುರಿದಂತ ಪಟಪಟ ಉತ್ತರ ಬಂದವು. ಒಂದು ಗಳಿಗೆಯಲ್ಲಿ ಶಾಂತಿಸೇನೆಯೊಂದು ಅಲ್ಲಿ ಕಂಡು ಬಂತು. ಆ ಬೀಜ ಹೇಗೆ ಬೆಳೆದೀತೋ ಯಾರು ಬಲ್ಲರು!

ಆದರೆ ಮೂರು ನಾಲ್ಕು ದಿನದಲ್ಲೇ ಒಬ್ಬ ಗೃಹಸ್ಥ ಹೇಳಿದ ಗಾಂಧೀಜಿಗೆ: ''ನಿಮ್ಮ ಸಂಗಡ ಜಗಳವಾಡಬೇಕಾಗಿದೆ ನಾನು.'' ಗಾಂಧೀಜಿಗೆ ಟೀಕೆ, ನಗೆ ಎಂದರೆ ಬಲು ಪ್ರೀತಿ. ನಗುತ್ತ ಆ ಗೃಹಸ್ಥನ ಕಡೆ ತಿರುಗಿ ''ಅದೇನು, ಅಂಥ ಸಮಾಚಾರ?'' ಎಂದರು.

''ನೋಡಿ; ಇವೊತ್ತು ಬೆಳಗ್ಗೆ ನನ್ನ ಮಗಳು, ನಾಲ್ಕು ವರ್ಷದ್ದು, ನನ್ನ ಹತ್ತಿರ ಬಂದು ಬಲವಾಗಿ ನನ್ನ ತಲೆಗೊಂದು ಏಟುಕೊಟ್ಟು, ನಗೆ ಮೊಗದಿಂದ ನಿಂತು 'ಇಲ್ಲಿ ನೋಡು ಅಪ್ಪ, ನೀನು ತಿರುಗಿ ಹೊಡೆಯು ಬಾರದು ನನ್ನನ್ನು. ಮೊನ್ನೆ ಗಾಂಧೀ ಹೇಳಲಿಲ್ಲವೆ ಹಾಗೆ ಮಾಡಬಾರದು ಎಂತ!' ಎಂದಳು.''

ಈ ತಂದೆ ಆವೊತ್ತು ಮಕ್ಕಳ ಕೂಟಕ್ಕೆ ಬಂದಿದ್ದ. ಗಾಂಧೀಜಿಯೂ ಅವನೂ ಇಬ್ಬರೂ ನಕ್ಕರು.

* * *

ಗಾಂಧೀ ಎಂದರೆ ಚಿಕ್ಕಮಕ್ಕಳಿಗೂ ಪ್ರೀತಿ. ಅವರ ಜೊತೆಗಾರನಂತೆ ಇವರು. ಮೂರು ವರ್ಷದ ಮಗುವೊಂದು ಚಪ್ಪಾಳೆ ಹೊಡೆಯುತ್ತ 'ಗಾಂಧೀ ತಾತ, ಗಾಂಧೀ ತಾತ' ಎನ್ನುತ್ತ ಅಡಿಗೆ ಮನೆಯಲ್ಲಿ ಓಡಾಡುತ್ತಿತ್ತು. 'ಮಗು, ಹಾಗೆಲ್ಲ ಹೇಳಬಾರದು. ಮಹಾತ್ಮಾ ಗಾಂಧೀ ಎನ್ನಬೇಕು. ಮಹಾತ್ಮಾ ಗಾಂಧೀ ಬಹಳ ಒಳ್ಳೆಯವರು'' ಎಂದು ತಾಯಿ ತಿದ್ದಿದಳು.

ಆ ಮಗುವಿಗೆ ಇದು ಸರಿಯಾಗಿ ಕಾಣಲಿಲ್ಲ. ಏನೋ ಅಸಮಾಧಾನವಾದಂತಾಯಿತು. ''ಊಹೂಂ, ಮಹಾತ್ಮಾ ಗಾಂಧೀ ಬೇಡ'' ಎಂದಿತು. ಇದು ಅಷ್ಟು ಸಲಿಗೆಯದಾಗಿ ತೋರಲಿಲ್ಲ. ಒಂದು ಕ್ಷಣದ ತರುವಾಯ ಅದಕ್ಕೆ ಹೊಳೆಯಿತು. ತಾಯ ಬಳಿಗೆ ಬಂದು ''ಅಮ್ಮಾ, ಗಾಂಧೀಕಾಕಾ ಅನ್ನುತ್ತೇನೆ'' ಎಂದ. ಸರಿ, ಮತ್ತೆ ಚಪ್ಪಾಳೆ, ಹೊಸ ಹಾಡು.

* * *

5

ಲಂಡನ್‌ನಲ್ಲಿದ್ದಾಗ ಗಾಂಧೀ ಜಯಂತಿಯ ಸಂದರ್ಭ ಬಂತು. ಕಿಂಗ್ಸ್ಲೆ ಹಾಲ್ ಬೀದಿಯಲ್ಲಿ ಒಂದು ಶಿಶುವಿಹಾರವಿತ್ತು. ಅಲ್ಲಿಯ ಮಕ್ಕಳಿಗೂ ಗಾಂಧೀ ಜಯಂತಿ ಮಾಡಬೇಕೆಂಬ ಆಸೆಯಾಯಿತು. ಅವರಲ್ಲಿ ಹುಟ್ಟಿದ ಹಬ್ಬ ಎಂದರೆ ಬಹಳ ಸಂಭ್ರಮ. ಆಗ ಆಪ್ತೇಷ್ಟರು ಉಡುಗೊರೆ ಕೊಡುತ್ತಾರೆ. ಈ ಮಕ್ಕಳೆಲ್ಲ ಸೇರಿ ಗಾಂಧೀಜಿಗೆ ಹುಟ್ಟಿದ ಹಬ್ಬದ ಉಡುಗರೆ ಏನು ಕೊಡಬೇಕೆಂದು ಚರ್ಚಿಸಿ, ಕೆಲವು ಗೊಂಬೆಗಳನ್ನು ಕಳಿಸಬೇಕೆಂದು ನಿಶ್ಚಯಿಸಿದರು.

ಮಾರನೆ ದಿನ ವರ್ಧಂತಿಗೆ ಶಿಶುವಿಹಾರದಿಂದ ಒಂದು ಕಾಗದ ಬಂತು ಗಾಂಧೀಜಿಗೆ :

"ಪ್ರಿಯ ಗಾಂಧೀ ಕಾಕಾ,

ನಿಮಗೆ ಶುಭ ಜಯಂತಿಯಾಗಲಿ. 'ನಿಮಗೆ ಶುಭ ಜಯಂತಿಯಾಗಲಿ' ಎಂದು ನಾವೆಲ್ಲರೂ ಹಾರೈಯಿಸುತ್ತೇವೆ. ನಿಮ್ಮ ಹೆಸರಿನಲ್ಲಿ ಇವೊತ್ತು ಒಂದು ವರ್ಧಂತಿ ಗೀತೆ ಹಾಡುತ್ತೇವೆ. ನಿಮಗೆ ಒಂದು ಉಡುಗೊರೆ ಕಳಿಸುತ್ತೇವೆ. ನೀವು ನಮ್ಮ ಜೊತೆಯಲ್ಲಿ 'ಜಯಂತೀ ಮಿಠಾಯಿ' - birthday cake - ತಿನ್ನಬೇಕೆಂದು ನಮಗಾಸೆ. ನೀವು ಇಲ್ಲಿಗೆ ಬಂದು ನಿಮ್ಮ ಜಯಂತಿ ಮಾಡಿಕೊಳ್ಳಬೇಕು; ಬರುತ್ತೀರಾ? ನೀವು ಬಂದರೆ ನಾವು ಹಾಡು ಹಾಡುತ್ತೇವೆ; ದೀಪೋತ್ಸವ ಮಾಡುತ್ತೇವೆ. ಪ್ರೀತಿಯಿಂದ—

ಮಾರಿಸ್, ಸ್ಟಾನ್ಲಿ, ಪೀಟರ್, ಜೋನ್, ಜೀನ್, ಏಲಿಸ್, ಜೋನ್, ಬರ್ನಾರ್ಡ್, ಜಾನ್, ವಿಲ್ಲಿ, ಫಿಲಿಸ್, ಡೊರೀನ್, ಡೇವಿಡ್; ಇಲ್ಲಿರುವ ಎಲ್ಲ ಮಕ್ಕಳೂ, ನಾವೆಲ್ಲರೂ."

ಇದರ ಜೊತೆಯಲ್ಲಿ ಒಂದು ಬುಟ್ಟಿಯೊಳಗೆ ಎರಡು ಉಣ್ಣೆಯ ನಾಯಿ ಗೊಂಬೆ, ಮೂರು ಕೆಂಪುಬಣ್ಣದ ಜಯಂತಿ ಮೇಣಬತ್ತಿ, ನೀಲಿ ಸೀಸಕಡ್ಡಿ, ಒಂದು ತಟ್ಟೆ, ಕೆಲವು ಮಿಠಾಯಿ ಕಳಿಸಿದರು.

ಇನ್ನೂ ಎಷ್ಟೋ ಉಡುಗೊರೆ, ಕಾಣಿಕೆ ಬಂದವು. ಗಾಂಧಿಜೀ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ; ಯಾವುದಾದರೂ ಸಂಸ್ಥೆಗೆ ಕೊಟ್ಟುಬಿಡುತ್ತಾರೆ. ಆದರೆ ಮಕ್ಕಳು ಕಳಿಸಿದ ಗೊಂಬೆಗಳನ್ನು ಮಾತ್ರ ತೆಗೆದಿಟ್ಟುಕೊಂಡರು.

ಗಾಂಧೀಜೀ ಲಂಡನ್ನಿನಿಂದ ಹಿಂದಿರುಗಿ ಪಯಣವಾಡಿದಾಗ ಸಾಮಾನು ಬಹಳ, ಗದ್ದಲವೂ ಬಹಳ. ಆದರೆ ಗಾಂಧೀಜಿಗೆ ಒಂದೇ ಚಿಂತೆ. "ಆ ಗೊಂಬೆ ಭದ್ರವಾಗಿವೆಯೋ ಇಲ್ಲವೋ?" ಅವು ಭದ್ರವಾಗಿದ್ದುದು ನೋಡಿ ಹೇಳಿದರು: "ಅದೊಂದೇ ನಾನು ಹಿಂದುಸ್ಥಾನಕ್ಕೆ ಇಲ್ಲಿಂದ ತೆಗೆದುಕೊಂಡುಹೋಗುವುದು ; ಉಳಿದ ಸಾಮಾನೆಲ್ಲ ನಾವು ತಂದಿದ್ದುದೇ."

ಗಾಂಧೀಜೀ ಹಿಂದುಸ್ಥಾನ ಮುಟ್ಟಿದ ಕೆಲವು ದಿನದ ಮೇಲೆ ಅವರನ್ನು ಸೆರೆಹಿಡಿದರು. ಸೆರೆಮನೆಯಿಂದ ಆ ಮಕ್ಕಳಿಗೆ ಗಾಂಧೀಜೀ ಒಂದು ಕಾಗದ ಬರೆದರು. ಅದನ್ನು ಆ ಮಕ್ಕಳು ಕಾದಿಟ್ಟಿದಾರೆ.

"ಮುದ್ದು ಗೆಳೆಯರೆ,

ನಿಮ್ಮನ್ನೂ, ಆ ಹೊತ್ತು ಮಧ್ಯಾಹ್ನ ನಾವೆಲ್ಲರೂ ಕಲೆತಿದ್ದಾಗ ನಾನು ಕೇಳಿದ ಪ್ರಶ್ನೆಗಳಿಗೆ ನೀವು ಕೊಟ್ಟ ಚುರುಕಾದ ಉತ್ತರಗಳನ್ನೂ ಆಗಾಗ ನೆನೆದುಕೊಳ್ಳುತ್ತೇನೆ.

ಲಂಡನಿನಲ್ಲಿದ್ದಾಗ ನೀವು ಕಳಿಸಿದ ಪ್ರೀತಿಯ ಉಡುಗೊರೆಗಾಗಿ ನಿಮ್ಮನ್ನು ವಂದಿಸಲು ನನಗೆ ವಿರಾಮವೇ ಆಗಲಿಲ್ಲ. ಈಗ ಸೆರೆಮನೆಯಿಂದ ಆ ಕೆಲಸ ಮಾಡುತ್ತಿದೇನೆ.

ನೀವು ಕೊಟ್ಟ ಉಡಗೊರೆಯನ್ನು ಆಶ್ರಮದ ಮಕ್ಕಳಿಗೆ ತಲಪಿಸ ಬೇಕೆಂದು ಮಾಡಿದ್ದೆ. ಆದರೆ ನನಗೆ ಆಶ್ರಮಕ್ಕೆ ಹೋಗುವುದೇ ಆಗಲಿಲ್ಲ.

ಸೆರೆಮನೆಯಿಂದ ನಿಮಗೆ ಕಾಗದ ಬರುವುದು ವಿಚಿತ್ರವಲ್ಲವೆ? ಆದರೆ ಸೆರೆಮನೆಯೊಳಗಿದ್ದರೂ ನಾನು ಸೆರೆಯಾಳು ಎಂದನಿಸದು ನನ್ನ ಮನಸಿಗೆ. ನಾನು ಏನೂ ತಪ್ಪುಮಾಡಿದಂತೆ ನನಗನಿಸದು.

ನಿಮ್ಮೆಲ್ಲರಿಗೂ ನನ್ನ ಪ್ರೀತಿ.

ನಿಮ್ಮ - ನೀವು ಕರೆವಂತೆ ಗಾಂಧೀಕಾಕಾ."

* * *

ರೊಮೆ ರೊಲಾರನ್ನು ಕಾಣಲು ಗಾಂಧೀಜೀ ವಿಲಿನೂವ್‌ಗೆ ಹೋಗಿದ್ದರು. ಅದು ಸ್ವಿಟ್ಜರ್ಲೆಂಡಿನಲ್ಲಿ ಒಂದು ಹಳ್ಳಿ. ಅಲ್ಲಿನ ಜನ ಗಾಂಧೀಜಿಗೆ ತೋರಿದ ಆದರ ಮರೆಯಲಾಗದುದು. ಅಲ್ಲೊಬ್ಬ ಮುದುಕ. ಸೋಡಾ ಮಾರಿ ಬದುಕುತ್ತಿದ್ದ ಬಡವ. ಗಾಂಧೀಜೀ ಮನೆಯಿಂದ ಹೊರಗೆ ಹೊರಟಕೂಡಲೆ

ಒಂದು ತುರಾಯಿಪಾರಿ ತಂದುಕೊಡುತ್ತಿದ್ದ. ಅವನ ಗುಡಿಸಲ ಒಂದೆಡೆ ೬ ಮೊಳದ ಪೆಟ್ಟಿಗೆ ಇತ್ತು. ಒಂದು ದಿನ ಅಲ್ಲಿ ನಿಂತು, ಅದನ್ನೆಲ್ಲ ಲೆಸ್ಟರ್‌ಗೆ ತಪ್ಪದೆ ತೋರಿಸಿ, ಸಿಳ್ಳುಹೊಡೆದು ತನ್ನ ಪಕ್ಷಿಗಳನ್ನು ಕರೆದ. ಕೂಡಲೆ ಸುತ್ತಲಿಂದ ನೂರಾರು ಪಕ್ಷಿಗಳು ಹಾರಿ ಬಂದು ತೋಟದಲ್ಲಿ ಕೂತವು.

'ಗಾಂಧೀಜಿಯವರು ಪಕ್ಷಿಸಮೂಹವನ್ನು ನೋಡಿದರೆ ಬಹಳ ಸಂತೋಷಪಡುತ್ತಾರೆ; ನನಗೆ ಗೊತ್ತು' ಎಂದನಂತೆ ಆ ಮುದುಕ.

* * *

ಇಟಲಿಯಲ್ಲಿ ಸಂಚಾರ ಮಾಡುತ್ತಿದ್ದಾಗ. ತಾನಾಗಿ ಸತ್ತ ದನದ ತೊಗಲಿನಿಂದ ಚಪ್ಪಲಿ ಮಾಡುವ ಕಾರಖಾನೆ ತೆಗೆಯುವ ಉದ್ದೇಶವುಳ್ಳವನೊಬ್ಬ ಬಂದ. [illegible] ಮಾತಾಡುತ್ತ ಆತ್ಮಸಂರಕ್ಷಣೆಗಾಗಿ ಪ್ರಾಣಿಹಿಂಸೆ ಮಾಡಬಹುದೇ ಎಂಬ ಮಾತಿನ ಕಡೆ ಹೊರಳಿತು ಚರ್ಚೆ. ಬಾಪೂ ತಮ್ಮ ಅಭಿಪ್ರಾಯ ಹೇಳಿದರು. "ನನ್ನ ಪ್ರಾಣವನ್ನಾದರೂ ಕೊಟ್ಟೇನು, ಪ್ರಾಣಿಯನ್ನು ಕೊಲ್ಲಲಾರೆ; ಹಲ್ಲಿ ಪ್ರಾಣವೂ ಪವಿತ್ರವೇ, ಭಗವದ್ದತ್ತವೇ."

ಇದು ಎಂಥದು ? ಮನುಷ್ಯನ ಪ್ರಾಣವೂ ಹಾವಿನ ಜೀವವೂ ಒಂದೇ ತೂಕವೆ? [illegible]. ಗಾಂಧೀಜಿಯವರ ಪಕ್ಕದಲ್ಲಿ ಹಾವು ಸುಳಿದು ಹೋಗಿದೆ; ಆಫ್ರಿಕದಲ್ಲಿ ಒಂದು ಸಲ ಅವರ ಮೈಮೇಲೆಯೇ ಹಾದುಹೋಗಿದೆ. ಆದರೂ ಅವರಿಗೆ ಏನೂ ಕೇಡೂ ಅಪಾಯವಾಗಿಲ್ಲ. "ಅಪಾಯಕ್ಕೆ ಭಯವೆ ಕಾರಣ: ಅದನ್ನು ಕಂಡು ನೀವು ಭಯಪಟ್ಟರೂ, ನಿಮ್ಮನ್ನು ಕಂಡು ಅದು ಹೆದರಿದರೂ ಆಯಿತು" ಎನ್ನುತ್ತಾರೆ ಬಾಪು. "ತಿಳಿಯದೆ ಅಕಸ್ಮಾತ್ತಾಗಿ ನಾವು ಅದನ್ನು ಹೆದರಿಸಬಹುದು; ಆಗ ನಾವು ಖಂಡಿತ ತಾನೆ ನಮಗೆ?" ಹತ್ತಿರಿದ್ದವರು ಕೇಳಿದರು.

"ಅಂಥ ಸಂದರ್ಭ ಬಹಳ ಅಪರೂಪ; ಸಾವಿರಕ್ಕೊಂದು. ಆದರೆ ಮೋಟಾರು ಪ್ರವಾಸಗಳಲ್ಲಿ ನಮಗಿರುವ ಅಪಾಯಗಳಷ್ಟು ಭಯಂಕರವಾದುದಲ್ಲ ಈ ಅಪಾಯ."

* * *

ರೋಂ ನಗರದಲ್ಲಿ ಪೋಪ್‌ನ ಮಠದಲ್ಲಿ ಕಲಾಸಂಗ್ರಹಾಲಯ ದೊಡ್ಡದು, ಉತ್ತಮವಾದುದು. ಗಾಂಧೀಜಿಗಾಗಿ ಆ ಸದನಾಲೆಗಳನ್ನೆಲ್ಲ ತೆರೆದರು. ಅವರೊಬ್ಬರೇ ಆ ಭವ್ಯ ಸಂಗ್ರಹಾಲಯದಲ್ಲಿ ಬಹಳ ಹೊತ್ತು ಕಳೆದರು. ಆನಂದ ಆಶ್ಚರ್ಯಗಳು ಅವರ ಮೋರೆಯಲ್ಲಿ ಕಾಣುತ್ತಿದ್ದುವು.

ಮನೆಗೆ ಬಂದ ಮೇಲೆ ಹೇಳಿದರು. 'ಅಲ್ಲಿ ಕ್ರಿಸ್ತನ ಪ್ರತಿಮೆಯೊಂದನ್ನು ನೋಡಿದೆ. ಓ, ಎಷ್ಟು ಅದ್ಭುತವಾಗಿದೆಯೋ! ನನಗಂತೂ ಅದನ್ನು ಬಿಟ್ಟು ಬರಲು ಬಹಳ ಕಷ್ಟವಾಯಿತು. ಅದನ್ನು ನೋಡುತ್ತಿದ್ದಂತೆ ಕಣ್ಣಲ್ಲಿ ಹನಿ ತುಂಬಿದವು.' *

* * *

ಟಾಲ್‌ಸ್ಟಾಯಿಯ ಮಗಳು ಗಾಂಧೀಜಿಯವರನ್ನು ನೋಡಲು ಬಂದಳು. ವಯಸ್ಸಾಗಿದ್ದರೂ ಗಟ್ಟಿಮುಟ್ಟು ವ್ಯಕ್ತಿ. ಎಷ್ಟು ಬೇಕೋ ಅಷ್ಟೇ ಮಾತು. ಉಪಚಾರದ ಮಾತು ಆಡದೆ ಬಂದವಳೇ "ನಿಮ್ಮನ್ನು ನೋಡಿ ಬಹಳ ಸಂತೋಷ ಆಗಿದೆ" ಎಂದಳು.

"ನನಗೂ ನಿಮ್ಮನ್ನು ನೋಡಿ ಸಂತೋಷವಾಯಿತು" ಎಂದರು ಗಾಂಧೀಜೀ. ಕನ್ನಡಕದೊಳಗಿಂದ ಕಣ್ಣು ನಗುತ್ತಿದ್ದುದು ಕಾಣುತ್ತಿತ್ತು.

"ನಮ್ಮ ತಂದೆಗೆ ನೀವು ಎಂದರೆ ಎಷ್ಟು ಗೌರವ; ತಮಗೆ ಗೊತ್ತಿಲ್ಲವೆ!"

"ಅವರ ಕಾಗದ ಎಂದರೆ ನನಗೆ ಬಹಳ ಬೆಲೆಯ ಪದಾರ್ಥ. ಯಾರು, ನೀವೋ ನಿಮ್ಮ ತಂಗಿಯೋ ಅವರು ಹೇಳಿದ್ದನ್ನು ಬರೆಯುತ್ತಿದ್ದವರು?"

"ಅವರ ಮಕ್ಕಳೆಲ್ಲರೂ ಅವರಿಗೆ ಎಲ್ಲದರಲ್ಲೂ ಸಹಾಯವಾಗುತ್ತಿದ್ದರು."

ಅಲ್ಲಿಂದ ಮಾತು ಆತ್ಮೀಯವಾಯಿತು.

"ನಮ್ಮ ತಂದೆ ಹೇಳುತ್ತಿದ್ದರು: ನನಗೆ ಅರ್ಥವಾಗದವರೆಂದರೆ ಟಾಲಸ್ಟಾಯ್ ಪಂಥಿಗಳೊಬ್ಬರೇ ನೋಡು. ಜನ ತಮ್ಮ ಹಿಂದೆ ಬರುವುದು ಅವರಿಗೆ ಬೇಕಿರಲಿಲ್ಲ; ಅಹಿಂಸೆಯ ಹಾದಿ ತಿಳಿಯಲಿ ಎಂದು ಇಷ್ಟ.......

---

* ಪ್ರಸಾದ ದೀಕ್ಷೆಯಲ್ಲಿ ಈ ದೃಶ್ಯದ ವರ್ಣನೆಯಿದೆ.

ನಮಗೆ ಸ್ವಲ್ಪ ಭೂಮಿಯಿತ್ತು. ಆ ಭೂಮಿಯನ್ನೂ ಅದರಿಂದ ಬದುಕುತ್ತಿದ್ದ ಜನರನ್ನೂ ಕಂಡರೆ ನಮಗೆ ತುಂಬಾ ಪ್ರೀತಿ........ಅಲ್ಲ, ನಿಮ್ಮ ದಾರಿಯಂಥ ವ್ಯಾವಹಾರಿಕ ದಾರಿಯನ್ನು ನೋಡಿ ನೋಡಿಯೂ ಜನ ನಿಮ್ಮನ್ನು ಕನಸುಗಾರ, ಮೂರ್ಖ, ತಿಳಿಗೇಡಿ ಎನ್ನುತ್ತಾರಲ್ಲ?........ಇಂಗ್ಲಿಷರ ವಿಷಯವಾಗಿ ನಿಮ್ಮಭಿಪ್ರಾಯವೇನೋ ?'' ಏನು ಹೇಳುತ್ತಾರೋ ಎಂದು ಕೇಳಲು ಕಿವಿಗೊಟ್ಟಿದಾಳೆ.

''ಬಹಳ ಸೊಗಸಾಗಿತ್ತು. ಒಳ್ಳೊಳ್ಳೆ ಜನರನ್ನು ನೋಡಿದೆ.''

ಆಕೆಗೆ ಸಮಾಧಾನವಾದಂತಾಯಿತೋ ಏನೋ, ''ಆ! ಬಹಳ ಸಂತೋಷವಾಯಿತು ; ನನಗೆ ಗೊತ್ತಿತ್ತು, ನಿಮಗೆ ಸೊಗಸುತ್ತದೆ ಎಂತ. ಇಂಗ್ಲಿಷರು ಪ್ರಾಮಾಣಿಕರು, ನಿಷ್ಪಕ್ಷಪಾತಿಗಳು" ಎಂದಳು.

ಬಾಪು ಒಂದು ಗಳಿಗೆ ಯೋಚಿಸಿದರು ; ಯೋಚಿಸಿ ಆ ಮಾತನ್ನು ಒಪ್ಪಿದರು. ''ಹೌದು. ಪ್ರಾಮಾಣಿಕರು, ನಿಷ್ಪಕ್ಷಪಾತಿಗಳು ಎನಿಸುತ್ತದೆ.''

''ಆ ಗುಣವೆರಡೂ ಅವರಲ್ಲಿ ಅಷ್ಟಾಗಿ ಕಾಣಬರಲು ಕಾರಣವೇನು ಗೊತ್ತೆ? ಅವರ ಸ್ವಾತಂತ್ರ್ಯ ಪ್ರೀತಿಯೇ ಅದಕ್ಕೆ ಕಾರಣ.''

''ನಿಜ. ಒಳ್ಳೆ ಸ್ವತಂತ್ರಜೀವಿಗಳು; ಅದು ಚೆನ್ನಾಗಿ ಗೊತ್ತಾಗುತ್ತದೆ. ಲಂಕಾಷೈರಿನಲ್ಲೂ ಅಷ್ಟೆ, ಲಂಡನ್‌ನಲ್ಲೂ ಅಷ್ಟೆ; ಕೂಲಿಕಾರರು ಒಳ್ಳೆ ಬುದ್ಧಿವಂತರು ; ಬೇಗನೆ ಅರ್ಥಮಾಡಿಕೊಳ್ಳುತ್ತಾರೆ. ನಿಜವಾಗಿ ನೋಡಿದರೆ ಇಂಡಿಯಾ ಆಫೀಸಿನ ಅಧಿಕಾರಿಗಳಿಗಿಂತ ಅವರೇ ಚೆನ್ನಾಗಿ ಅರ್ಥಮಾಡಿಕೊಂಡರು ಹಿಂದುಸ್ಥಾನದ ಆಶೆ ಆಕಾಂಕ್ಷೆಗಳನ್ನು. ದೊಡ್ಡವರು ಎಷ್ಟೋ ಸಲ ಕೇಳುತ್ತಾರೆ; ಕಿವಿಗೊಡುವುದಿಲ್ಲ. ಬಡವರು ಅರ್ಥಮಾಡಿಕೊಳ್ಳುತ್ತಾರೆ ''

ಅಷ್ಟರಲ್ಲಿ ಏನೋ ಗಲಿಬಿಲಿಯಾಯಿತು. ಅರಮನೆಯಿಂದ ಯಾರೋ ಬಂದರೆಂದು ತಿಳಿಯಿತು. ಕೋಣೆ ಬರಿದಾಯಿತು ; ಇಟಲಿ ದೊರೆಯ ಕಿರಿಯ ಮಗಳು ಮೇರಿಯ ಬಂದಳು. ಬಂದವಳು ಬಾಪೂ ಇದುರಿಗೆ ನೆಲದ ಮೇಲೆ ಕೂತಳು. ಇವರ ಭಾಷೆ ಆಕೆಗೆ ಬಾರದು, ಆಕೆಯ ಮಾತು ಇವರಿಗೆ ತಿಳಿಯದು. ಗಾಂಧೀಜೀ ನೂಲುತ್ತ ಆಕೆಯನ್ನು ನೋಡಿ ನಕ್ಕರು. ಆಕೆಯೂ ನಕ್ಕಳು. ಅರಸುಗುವರಿ ತಾನು ತಂದಿದ್ದ ಹಣ್ಣಿನ ಬುಟ್ಟಿಯನ್ನು

ಬಾಪೂ ಮುಂದಿಟ್ಟು "ಇವು ಹಿಂದುಸ್ತಾನಿ ಅಂಜೂರದ ಹಣ್ಣು. ನಿಮಗೆ ದಾರಿ ಫಲಾಹಾರಕ್ಕಿರಲಿ ಎಂದು ತಂದೆ" ಎಂದಳು.

ಬಾಪು ಬುಟ್ಟಿ ತೆಗೆದುಕೊಂಡು ಆ ಹಣ್ಣನ್ನು ನೋಡಿದರು. ಆಕೆಗೆ ತಮ್ಮ ಸಂತೋಷವನ್ನು ಸೂಚಿಸಿದರು. "ಆದರೆ, ಇವು ಅಂಜೂರದ ಹಣ್ಣಲ್ಲ, ತಂಗಿ" ಎಂದು ಹೇಳಿದರು. ಚಿಲ್ಲರೆ ಮಾತೇ ಆಗಲಿ ಸರಿಯಾಗಿರಬೇಕು, ಸತ್ಯವಾಗಿರಬೇಕು ಅವರಿಗೆ.

"ಏಕೆ? ಅವು ಅಂಜೂರದ ಹಣ್ಣೇ!" ಅರಸುಗುವರಿ ಒತ್ತಿಹೇಳಿದಳು.

ಅರಸುಗುವರಿಯಾಗಲಿ ಅಪ್ಸರ ಕನ್ಯೆಯಾಗಲಿ ಅಸತ್ಯಕ್ಕೆ ಕ್ಷಮೆಯಿಲ್ಲ ಬಾಪೂ ಬಳಿ.

"ನಾವು ಅಂಜೂರ ಎನ್ನುವುದು ಇಂಥ ಹಣ್ಣಲ್ಲ" - ಎಂದವರೆ ಹರೆಯದ ಹೃದಯವನ್ನು ಅರಿತು ಬಾಪು ಹೇಳಿದರು: "ಯಾವ ಹೆಸರಾದರೇನು, ದಾರಿಯಲ್ಲಿ ಫಲಾಹಾರಕ್ಕೆ ಒಳ್ಳೆ ರುಚಿಯಾಗಿರುತ್ತವೆ. ಬಹಳ ಸಂತೋಷ."

"ಮಹಾರಾಣಿ ಸ್ವಂತವಾಗಿ ತಾವೇ ಅದನ್ನು ಕಟ್ಟಿಕೊಟ್ಟರು ನಿಮಗಾಗಿ"; ಅರಸುಗುವರಿಯ ಗೆಳತಿ ಹೇಳಿದಳು.

"ಅವರ ಅಭಿಮಾನಕ್ಕೆ ನಾನು ಕೃತಜ್ಞ."

ಕೊಂಚ ಹೊತ್ತು ಮಾತುಕತೆಯಾದ ಮೇಲೆ ಮೇರಿಯಾ ಹೊರಟು ಹೋದಳು. ಹೋಗುವಾಗ ಬಾಪೂ ಕೈಕುಲುಕಿ "ಗುಡ್‌ಬೈ. ದೇವರು ನಿಮಗೆ ಒಳಿತುಮಾಡಲಿ" ಎಂದಳು.

* * *

ಇಂಗ್ಲೆಂಡಿಗೆ ಹೊರಟಾಗ ಹಡಗು ಲಂಗರು ಕಿತ್ತು ಮುಂದೆ ಸಾಗಿದ ಮೇಲೆ ಗಾಂಧೀಜೀ ತಮ್ಮ ಸಾಮಾನು ನೋಡಿಕೊಳ್ಳಲು ಮೊದಲಿಟ್ಟರು. ಈ ಟ್ರಂಕಿನಲ್ಲೇನಿದೆ? ಅದರಲ್ಲೇನಿದೆ? ವಿಚಾರಣೆಗೆ ಪ್ರಾರಂಭವಾಯಿತು. ಮೀರಾಬೇನ್ ಅದನ್ನೆಲ್ಲ ಏರ್ಪಾಡು ಮಾಡಿದಾಕೆ. 'ಬಾಪೂ, ಇದರೊಳಗೆ ನಿಮ್ಮ ಬಟ್ಟೆಯಿದೆ' ಎಂದಳು. ಗಾಂಧೀಜೀ ಅಂದರು: 'ನನ್ನ ಬಟ್ಟೆಯೆ? ಇಷ್ಟು ದೊಡ್ಡ ಪೆಟ್ಟಿಗೆಯಲ್ಲೆ?' ಮೀರಾ ಹೇಳಿದಳು – 'ಇದರ ತುಂಬ ಏನಿಲ್ಲ.' ಗಾಂಧೀಜೀ - 'ನೀನಿದನ್ನು ತುಂಬಿಸಿ ಬಿಡಬೇಕೆಂತ ಲೆಕ್ಕಹಾಕಿದ್ದ

ಯೇನು? ಹಿಂದುಸ್ಥಾನದಲ್ಲಿ ನನ್ನ ಬಟ್ಟೆಬರೆಗೆ ಟ್ರಂಕು ಗಿಂಕು ಇಲ್ಲದೆಯೆ ನಡೆಯುತ್ತದೆ ಅನ್ನುವುದನ್ನು ಯೋಚಿಸಲೇಬೇಡವೆ?'

ಮೀರಾ ಪೆಟ್ಟಿಗೆ ತೆರೆದು ಅದರೊಳಗಿನ ಸಾಮಗ್ರಿಯನ್ನೆಲ್ಲ ಇದುರಿಗಿಟ್ಟಳು. ಅದನ್ನು ನೋಡಿ ಗಾಂಧೀಜಿಯ ಮುಖ ಕೆಂಪೇರಿತು. ಸಾಮಾನು ಹೆಚ್ಚಾಗೇನಿರಲಿಲ್ಲ. ಆದರೆ ಒಂದೇ ಒಂದು ಕಾಸು ಹೆಚ್ಚಿಗೆ ವೆಚ್ಚವಾದರೂ ಗಾಂಧೀಜೀಗದು ಅಸಹ್ಯ. ಪರಿವಾರವನ್ನು ಚೆನ್ನಾಗಿ ಗದರಿಸಿದರು. ಕೊನೆಗೆ ಇಷ್ಟು ತೀರ್ಮಾನವಾಯ್ತು. ಅಲ್ಪಸ್ವಲ್ಪ ಸಾಮಾನು ವಿನಾ ಉಳಿದುದೆಲ್ಲ ಏಡನ್‌ನಿಂದ ಹಿಂದಿರುಗಿ ಕಳಿಸಬೇಕು. ಗಾಂಧೀಜೀ ಅಂದರು - 'ಇವೊತ್ತಂತೂ ನಾನೀ ಸಾಮಾನು ನೋಡಿ ಗಾಬರಿಯಾಗಿದೇನೆ. ಕಾಗದ ಇಡಲಿಕ್ಕೆ ಕೂಡ ಒಂದು ಪೆಟ್ಟಿಗೆ ತಂದಿದಾರೆ ಇವರು. ಇನ್ನೇನು ನಾನು ನನ್ನ ಹಳೆಯ ರೂಢಿಯೆಲ್ಲ ಬಿಟ್ಟುಬಿಡಬೇಕು ತಾನೆ.'

* * *

ಸಾಮಾನಿನಲ್ಲಿ ಚರ್ಮದ ಪೆಟ್ಟಿಗೆ ಒಂದಿತ್ತು. ಅದನ್ನು ನೋಡಿ ಬರಿ ಖಾದೀ ಚೀಲದಿಂದ "ಹಿಂದುಸ್ಥಾನದಲ್ಲಿ ನಮ್ಮ ಕೆಲಸ ಆಗುವಾಗ ಇಂಗ್ಲೆಂಡಿನಲ್ಲಿ ತಾನೆ ಏಕಾಗಬಾರದು? ಅಲ್ಲಿಯವರೆಲ್ಲ ತಮ್ಮ ಕಾಗದ ಪತ್ರ ಇಂಥ ಚರ್ಮದ ಚೀಲಗಳಲ್ಲಿಯೆ ಇಟ್ಟುಕೊಂಡು ತಿರುಗಾಡುತಾರೆ ಎಂದು ತಿಳಿದುಕೊಂಡಿದೀರೇನು, ತಪ್ಪು; ಶುದ್ಧ ತಪ್ಪು. ಸಾವಕಾರರ ಕೈಯಲ್ಲಿ, ಶ್ರೀಮಂತರ ಕೈಯಲ್ಲಿ, ರಾಜಕೀಯ ನಾಯಕರ ಕೈಯಲ್ಲಿ ಇದ್ದಾವು. ನಿಮ್ಮ ಕೈಗೆ ಅವು ಶೋಭೆಯಲ್ಲ, ಅಸಹ್ಯ" – ಎಂದರು. ಯಾರೋ ಗೆಳೆಯರು ಗಾಂಧೀಜಿಗಾಗಿ ಇರಲಿ ಎಂದು ಒಂದು ಮಡಿಸುವ ಕ್ಯಾನವ್ಯಾಸ್ ಮಂಚ ಕೊಟ್ಟಿದ್ದರು. ಅದು ಅಲ್ಲಿತ್ತು. "ಓಹೋ, ಅದು ಮಡಿಸುವ ಮಂಚವೋ! ಹಾಕೀ ಆಟದ ಸಾಮಾನು ಅಂತ ತಿಳಿದಿದ್ದೆ ನಾನು. ಆ ಹಾಕೀ ಸಾಮಾನನ್ನೂ ಹಿಂದಕ್ಕೆ ಕಳಿಸಿ. ನಾನು ಅಂಥದನ್ನು ಎಂದಾದರೂ ಉಪಯೋಗಿಸಿದೇನೆಯೆ? ನಿಮಗೆ ಗೊತ್ತಿಲ್ಲವೆ?" ಹೀಗನ್ನುತ್ತಿರುವಾಗಿ ಷ್ಯೂಬ್ ಕುರೇಷಿ ಬಂದರು. ಒಡನೆಯೆ ಗಾಂಧೀಜೀ ನಗೆಯಾಟಕ್ಕೆ ಮೊದಲು ಮಾಡಿದರು. "ಷ್ಯೂಬ್, ಒಳ್ಳೆ ಸಮಯಕ್ಕೆ ಬಂದೆ. ಇಲ್ಲಿ ನೋಡು, ನಿಮ್ಮ ನವಾಬರ ಪರಿವಾರದಲ್ಲಿ ಯಾರಿಗಾದರೂ ಕಾಶ್ಮೀರ ಶಾಲು ಬೇಕಾಗಿದ್ದರೆ ನನಗೆ ಹೇಳು.

ನನ್ನ ಗೆಳೆಯರು ನನಗೆ ಕೊಟ್ಟಿರುವ ಶಾಲುಗಳಿಂದ ಒಂದು ಶಾಲಿನಂಗಡಿ ತೆರೆಯಬಹುದು. ೭೦೦ ರೂ. ಕೊಟ್ಟು ಒಬ್ಬ ಸ್ನೇಹಿತ, ಒಂದು ಉಂಗುರದಲ್ಲಿ ತೂರಿಸಿ ಎಳೆಯುವಷ್ಟು ನಯವಾದ ಶಾಲು ಒಂದನ್ನು ಕಳಿಸಿದಾನೆ; ಅದನ್ನು ಚಕ್ರಗೋಷ್ಠಿಯಲ್ಲಿ ನಾನು ಹೊದ್ದುಕೊಂಡು ಹಿಂದುಸ್ಥಾನದ ಕೋಟಿಗಟ್ಟಲೆ ಜನರ ಪ್ರತಿನಿಧಿ ಅಂತ ಚೆನ್ನಾಗಿ ತೋರಿಸಿಕೊಳ್ಳಲಿ ಅಂತ ಕಳಿಸಿದಾನೆ! ಈ ಐಶ್ವರ್ಯ ನನಗೆ ಬೇಡ. ನಿಮ್ಮ ರಾಣಿಗೆ ಹೇಳು; ಬಡವರ ಕೆಲಸಕ್ಕಾಗಿ ೭,೦೦೦ ರೂಪಾಯಿ ಕೊಟ್ಟು ನನಗೀ ಭಾರ ಕಡಮೆ ಮಾಡು ಅಂತ ಹೇಳುತೀಯಾ. ಇನ್ನೇನು ತಾನೆ ಮಾಡಬಲ್ಲ, ಬಡವರ ಪ್ರತಿನಿಧಿ?''

ಗಾಂಧೀಜೀ ಬೈದದ್ದು ವ್ಯರ್ಥವಾಗಲಿಲ್ಲ. ಏಳು ಪೆಟ್ಟಿಗೆ, ಕ್ಯಾಬಿನ್ ಟ್ರಂಕು ಹಿಂದಿರುಗಿದವು.

* * *

ಇಂಗ್ಲೆಂಡಿನಲ್ಲಿ ಗಾಂಧೀಜಿಗೆ ಕೈತುಂಬ ಕೆಲಸವಿತ್ತು. ರಾತ್ರಿ ೧ ಗಂಟೆಗೆ ಮಲಗಿ ಮುಂಜಾನೆ ೪ ಗಂಟೆಗೇ ಏಳುತ್ತಿದ್ದರು. ಅಷ್ಟು ಕೆಲಸ. ಯಾವಾಗ ಕಾಯಿಲೆ ಬೀಳುತ್ತೇನೋ ಎನ್ನುತ್ತಿದ್ದರು. ಒಂದು ದಿನದ ಕಾರ್ಯಕ್ರಮ ಹೀಗಿತ್ತು.

| | |
|---|---|
| ರಾತ್ರಿ ೧ ಗಂಟೆ | ಕಿಂಗ್ಸ್ಲ ಹಾಲ್ ತಲಪಿದ್ದು. |
| ,, ೧—೧.೪೫ | ೧೬೦ ಸುತ್ತು ನೂಲುವುದು. |
| ,, ೧.೪೫ – ೫೦ | ದಿನಚರಿ ಬರೆಯುವುದು. |
| ,, ೨ - ೩.೪೫ | ನಿದ್ದೆ. |
| ,, ೩ ೪೫ – ೫ | ಸ್ನಾನ, ಪ್ರಾರ್ಥನೆ. |
| ಮುಂಜಾನೆ ೫ – ೬ | ನಿದ್ದೆ. |
| ಬೆಳಗ್ಗೆ ೬ – ೭ | ಬೆಳಗಿನ ಗಾಳೀಸವಾರಿ, ಮಾತಾಡ ಬಂದವರೊಡನೆ ಪ್ರಸಂಗ. |
| ,, ೭ – ೮ | ಪ್ರಾತರ್ವಿಧಿ, ಸ್ನಾನ. |
| ,, ೮ – ೮.೩೦ | ಪ್ರಾತಃಭೋಜನ. |
| ,, ೮.೩೦ – ೯.೧೫ | ಕಿಂಗ್ಸ್ಲೆ ಹಾಲಿನಿಂದ ನೈಟ್ಸ್‌ಬ್ರಿಜ್‌ಗೆ. |
| ,, ೯.೧೫–೧೦.೪೫ | ಒಬ್ಬ ಪತ್ರಿಕೋದ್ಯೋಗಿ, ಒಬ್ಬ ಚಿತ್ರಕಾರ, ಒಬ್ಬ ಸೀಟು ಸದಸ್ಯ, ಒಬ್ಬ ವರ್ತಕ ಪ್ರಮುಖ ಇವರೊಡನೆ ಸಂಭಾಷಣೆ. |

,, ೧೦.೪೫ ಸೆಯಿಂಟು ಜೇಮ್ಸ್‌ಗೆ.
,, ೧೧ – ೧ ಸೆಯಿಂಟು ಜೇಮ್ಸ್‌ನಲ್ಲಿ.
ಮಧ್ಯಾಹ್ನ ೧ – ೨.೪೫ ಅಮೆರಿಕನ್ ಔತಣ.
,, ೩ – ೫.೩೦ ಮುಸ್ಲಿಮ್ ಪ್ರತಿನಿಧಿಗಳೊಡನೆ ಮಾತುಕತೆ.
ಸಂಜೆ ೫ ೩೦ – ೭ ಭಾರತ ಮಂತ್ರಿಯೊಡನೆ ಮಾತುಕತೆ.
,, ೭ - ೭.೩೦ ಸಂಜೆಯ ಪ್ರಾರ್ಥನೆ, ಮನೆಗೆ ಊಟಕ್ಕೆ.
ರಾತ್ರಿ ೮ – ೯.೧೦ ಮದ್ಯಪಾನ ನಿಷೇಧ ಸಂಘದ ಸಭೆಗೆ.
"ಭಾರತದ ಮದ್ಯಪಾನ ಸಮಸ್ಯೆಯ ಮೇಲೆ ವ್ಯಾಖ್ಯಾನ."
,, ೯.೧೦ ಭೋಪಾಲ್ ನವಾಬನೊಡನೆ ಮಾತಾಡಲು ಪ್ರಯಾಣ.

* * *

ಅವು ಮಹಾತ್ಮಾಜೀ ಐದು ದಿನ ಉಪವಾಸಮಾಡಿದ ನಂತರದ ನದಿ. ಸರೋಜಿನಿ ನಾಯುಡು ಯರವಡಾ ಮಂದಿರದಿಂದ ಹೊರಗೆ ಬಂದರು. ಅದಕ್ಕೆ ಮೊದಲು 'ಶ್ವೇತ ಪತ್ರಿಕೆ' ಬಂದು ಕೆಲವು ದಿನವಾಗಿತ್ತು. ಆಕೆ ಹೊರಗೆ ಬಂದದ್ದೇ ತಡ, ಪತ್ರಿಕೋದ್ಯೋಗಿಗಳ ಗುಂಪಿಗೆ ಗುಂಪೇ ಆಕೆಯನ್ನು ಮುತ್ತಿತು. 'ಇದೇ ಸೆರೆಯಿಂದ ಬಂದಿದೇನೆ; ನನ್ನ ಮನಸ್ಸೂ ಶ್ವೇತಪತ್ರದಂತೆ ಶುಭ್ರವಾಗಿದೆ; ಏನೂ ಹೇಳಲಾರೆ' ಎಂದಳಾಕೆ. ಆಮೇಲೆ ಗಾಂಧೀಜಿಯ ದರ್ಶನಕ್ಕೆ ಬಂದಳು. ಮೊದಲು ಗಾಂಧೀಜಿಯ ಆರೋಗ್ಯದ ಮಾತು, ತರುವಾಯ ಹರಿಜನೋದ್ಯಮ. ಆಮೇಲೆ 'ಶ್ವೇತಪತ್ರಿಕೆಯ ಬಗ್ಗೆ ನಿಮ್ಮಭಿಪ್ರಾಯವೇನೆಂದು ಸುದ್ದಿಗಾರರು ಪ್ರಾಣ ತೆಗೆಯುತಾ ಇದಾರೆ. ಆ ಶ್ವೇತಪತ್ರಿಕೆಯೆಂಥದೋ ನನಗಿನ್ನೂ ಗೊತ್ತೇ ಇಲ್ಲ' ಎಂದಳು ಸರೋಜಿನಿ.

'ಹಾಗಾದರೆ ಆ ಶ್ವೇತಕುಂತಲ (ಬಿಳಿ ಕೂದಲು) ದ ಬಗ್ಗೆ ಸಂದೇಶವನ್ನೊ ಸದಭಿಪ್ರಾಯವನ್ನೊ ಕೊಟ್ಟರಾಯಿ.ತಲ್ಲ' ಎನ್ನುತ್ತ ಆಕೆಯ ತಲೆಯಲ್ಲಿ ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದ ಬಿಳಿ ಕೂದಲನ್ನು ತೋರಿಸಿ, ಮುಗುಳುನಗೆ ನಕ್ಕರು ಗಾಂಧೀಜೀ.

'ಈ ಬಿಳಿ ಕೂದಲಿಗೆ ನೀವೇ ಕಾರಣ. ನೀವು ಉಪವಾಸ ಮಾಡಿದ ಐದು ದಿನದ ಸಂಕಟದಿಂದಲೇ ಇವು ಬೆಳ್ಳಗಾದುದು' ಎಂದು ಸರೋಜಿನಿ ಸಮಾಧಾನ ಹೇಳಿದಳು.

* * *

ಹಡಗಿನ ಮೇಲೆ ಆದ ಗೆಳೆಯರಲ್ಲಿ ಹುಡುಗರೇ ಮುಖ್ಯ. ಸ್ವದೇಶಕ್ಕೆ ಹಿಂದಿರುಗಿ ಹೋಗುತ್ತಿರುವ ಇಂಗ್ಲಿಷ್ ಕುಟುಂಬಗಳ ಮಕ್ಕಳು. ಮಕ್ಕಳಿಗೆ ಬಣ್ಣವೇನು, ಜಾತಿಯೇನು? ಗಂಡೇನು ಹೆಣ್ಣೇನು? ಗಾಂಧೀಜಿಯ ಹತ್ತಿರ ಧಾರಾಳವಾಗಿ ಬಂದು ಆಡುತ್ತಿದ್ದರು. ಗಾಂಧೀಜೀ ಅವರ ಕಿವಿ ಹಿಂಡಿ ಬೆನ್ನು ತಟ್ಟಿ ವಿನೋದವಾಡುತಿದ್ದರು. ಇವರು ಊಟಕ್ಕೆ ಕೂತಾಗ ಆ ಮಕ್ಕಳು ಬಂದು ಹಣಿಕಿ ಹಾಕುತಿದ್ದವು. "ದ್ರಾಕ್ಷೆಯೋ ಖರ್ಜೂರವೋ?" ಎಂದು ಗಾಂಧೀಜೀ ಕೇಳಬೇಕು; ದ್ರಾಕ್ಷೆಯ ತಟ್ಟೆಯನ್ನು ಹೊತ್ತುಕೊಂಡು ಹೋಗಿ ಬರಿದುಮಾಡಿ ತಂದಿಡಬೇಕು ಹುಡುಗರು. ದಿನವೂ ಹೀಗೆಯೆ.

* * *

ಕೂಲಿಕಾರ ಪಕ್ಷದ (ಪಾರ್ಲಿಮೆಂಟ್) ಸದಸ್ಯರ ಸಭೆ. ಹಿಂದುಸ್ಥಾನದ ಬಡತನ, ಬ್ರಿಟಿಷ್ ಅಧಿಕಾರಿಗಳ ಸಂಬಳದ ದುಂದುಗಾರಿಕೆ ಎಲ್ಲವನ್ನೂ ತಿಳಿಸಿ ಗಾಂಧೀಜೀ ಕೇಳಿದರು: "ನೀವೇ ಹೇಳಿ. ತನ್ನ ಬಟ್ಟೆ ತಾನೇ ನೇದು ಕೊಳ್ಳಲು ಸಾಧ್ಯವಿದ್ದಾಗ ಲಂಕಾಷೈರಿನ ಬಟ್ಟೆಯನ್ನು ಕೊಳ್ಳಬೇಕಾದುದು ನಮಗೆ ಧರ್ಮವಾದೀತೇ? ಹಿಂದುಸ್ಥಾನವನ್ನು ಹಾಳುಮಾಡಿ ತಾನು ಏಳಿಗೆಗೆ ಬಂದ ಲಂಕಾಷೈರು ನಮಗೆ ತೋರಿಸಬೇಕಾದ ಧರ್ಮ ಏನೂ ಇಲ್ಲವೋ" ಯಾರೂ ಉತ್ತರಕೊಡಲಿಲ್ಲ. ಒಬ್ಬ ಸದಸ್ಯ ಹೇಳಿದ: "ನೀವು ನಮ್ಮ ಬಟ್ಟೆ ಬಟ್ಟೆ ಕೊಳ್ಳದೆಹೋದರೆ ನಾವು ನಿಮ್ಮ ಸಣಬನ್ನಾಗಲಿ ಚಾ ಆಗಲಿ ಕೊಳ್ಳುವುದಿಲ್ಲ."

"ಅದಕ್ಕೇನಂತೆ. ನಿಸ್ಸಂದೇಹವಾಗಿ ಹಾಗೆಯೆ ಮಾಡಬಹುದು. ಅದು ನಿಮ್ಮ ಇಷ್ಟ. ನಮ್ಮ ಚಾ, ಸಣಬನ್ನು ಬಲವಂತವಾಗಿ ನಿಮ್ಮ ಕತ್ತಿಗೆ ಕಟ್ಟುವುದಿಲ್ಲ ನಾವು."

* * *

ಲಂಡನ್ ವಿಶ್ವವಿದ್ಯಾಲಯದ ಸಂಸ್ಕೃತ ಪ್ರೊಫೆಸರ್ ಗಾಂಧೀಜಿ ಯನ್ನು ನೋಡಲು ಬಂದರು. 'ನನಗೆ ಹಿಂದುಸ್ಥಾನವೆಂದರೆ ಬಹಳ ಪ್ರೀತಿ. ನಿಮ್ಮನ್ನು ಕಂಡರೆ ತುಂಬ ಗೌರವ. ನಿಮ್ಮ ಕೆಲಸ ಸಫಲವಾಗಲಿ ಎಂದು ದಿನಾ ಹಾರಯಿಸುತ್ತೇನೆ' ಎಂದರು. 'ನೀವು ಒಳ್ಳೆ ಪಂಡಿತರೋ?' ಗಾಂಧೀಜೀ ಕೇಳಿದರು. ಆತ ನಕ್ಕ. ಆತನ ನಾಚಿಕೆಯನ್ನೆಲ್ಲ ಹೋಗ

ಲಾಡಿಸುತ್ತ ಗಾಂಧೀಜೀ ಹೇಳಿದರು: 'ಇಲ್ಲದ ನಾಚಿಕೆಪಡದೆ ಹೇಳಿ: ನೀವು ಮಾಕ್ಸ್‌ಮುಲ್ಲರ್ ಅಷ್ಟು ಪಂಡಿತರೇ ?' 'ನನ್ನ ಸಾಮರ್ಥ್ಯ ನನಗೆ ಗೊತ್ತಿದೆ. ನನಗೇ ನಂಬಿಗೆ ಇರದಿದ್ದರೆ ಈ ಕೆಲಸ ಒಪ್ಪಿಕೊಳ್ಳುತ್ತಲೇ ಇರಲಿಲ್ಲ ನಾನು. ಉಪನಿಷತ್ತು ಚೆನ್ನಾಗಿ ಓದಿಕೊಂಡಿದೇನೆ; ಗೀತೆ ಪೂರಾ ಬಾಯಿಗೆ ಬರುತ್ತದೆ' ಎಂದು ಉಪನಿಷದ್ವಾಕ್ಯವೊಂದನ್ನು ಹೇಳಿದ ಆತ. 'ಅಂತೂ ಸಂಸ್ಕೃತ ಉಚ್ಚಾರದಲ್ಲಿ ಪ್ರೊಫೆಸರ್‌ಗೆ ಇನ್ನೂ ಬೇಕಾದಷ್ಟು ಪಾಠ ಹೇಳಿಕೊಡಬಹುದು ನಾವು' ಎಂದರು ಗಾಂಧೀಜೀ.

* * *

'ಹಿಂದೂಗಳಿಗೆ ಜಂಟಿ ಚುನಾವಣೆ ಪದ್ಧತಿಬೇಕೆಂಬ ಹಟವೇಕೆ?' ಆಕ್ಸ್‌ಫರ್ಡ್ ವಿದ್ಯಾರ್ಥಿಗಳ ಸಭೆಯಲ್ಲಿ ಕೇಳಿದರು. 'ಅವರು ಹುಚ್ಚರು. ಕೇಳಿದ ಕೂಡಲೆ ಪ್ರತ್ಯೇಕ ಚುನಾವಣೆಗೆ ಒಪ್ಪಿಕೊಂಡು ತುರುಕರ ಬಾಯಿ ಮುಚ್ಚಿಸಿಬಿಟ್ಟಿದ್ದರೆ ಚೆನ್ನಾಗಿತ್ತು. ಇದೇನು, ಪ್ರತ್ಯೇಕ ಚುನಾವಣೆಯಲ್ಲಿ ಏನಾದರೂ ಅಪಾಯವಿದೆಯೋ ಹೇಗೆ ಎಂದು ಅವರೇ ಗಾಬರಿಯಾಗುತ್ತಿದ್ದರು!' ಸಭೆಯೆಲ್ಲ ಗೊಳ್ಳೆಂದು ನಗುತಿತ್ತು.

ಇನ್ನೊಬ್ಬ ಕೇಳಿದ: 'ಕುಡಿಯುವವರನ್ನು ಕಂಡರೆ ನಿಮಗೇಕೆ ಅಷ್ಟು ನಿರ್ದಯೆ ?'

'ಇವರು ಕುಡಿದರೆ ಆ ಕಷ್ಟಕ್ಕೆ ಗುರಿಯಾಗುವ ಇತರರ ಮೇಲೆ ನನಗೆ ದಯೆ, ಕನಿಕರ ಆದ್ದರಿಂದ!

* * *

ಆಕ್ಸ್‌ಫರ್ಡಿನಲ್ಲಿ ಒಂದು ಸಭೆಯಲ್ಲಿ ಮಾತಾಡುತ್ತ ಜನರಲ್ ಡೈಯರ್ ಪಂಜಾಬಿನ ಜನರನ್ನು ನೆಲದ ಮೇಲೆ ತೆವಳಿಸಿದ ಸುದ್ದಿ ಪ್ರಸ್ತಾಪ ಮಾಡಿದರು ಗಾಂಧೀಜೀ ಸಭೆಯಲ್ಲಿದ್ದವರಿಗೆಲ್ಲ ಮನಸ್ಸು ಕಲಕಿಹೋಯಿತು. ಲಿಂಡ್ಸೆ ದಂಪತಿಗಳು ಆ ಸಭೆಯಲ್ಲಿದ್ದರು. ಲಿಂಡ್ಸೆಸತಿ ಸಭೆ ಮುಗಿದ ಮೇಲೆ ಗಾಂಧೀಜಿಯ ಬಳಿಗೆ ಬಂದು ಮೆಲುವಾಗಿ 'ಡೈಯರ್ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಐವತ್ತು ಸಲ ನಾವು ತೆವಳುತ್ತೇವೆ. ಸರಿಯೆ ?' ಎಂದಳು. ಗಾಂಧೀಜೀ ಒಡನೆಯೆ ಹೇಳಿದರು: 'ಬೇಡ ಬೇಡ. ಯಾರೂ ತೆವಳಬೇಕಾಗಿಲ್ಲ. ನನಗದು ಬೇಡ. ಸ್ವಚ್ಛಂದವಾಗಿ ನೀವಾಗಲಿ ನಾನಾಗಲಿ ಐವತ್ತು

ಸಲ, ನೂರು ಸಲ ಮಾಡಬಹುದು. ಒಬ್ಬ ಇಂಗ್ಲಿಷ್ ಹುಡುಗಿಯನ್ನು ಬಲವಂತವಾಗಿ ನಾ ತೆಪಳಿಸಲಿ, ಆ ಹುಡುಗಿ ನನಗೆ ಕೆನ್ನೆಗೆ ಕೊಟ್ಟಾಳು. ಅದೇ ಸರಿ. ಆ ಭೀಕರತೆಯ ದೃಷ್ಟಾಂತ ಕೊಟ್ಟೆ, ಅಷ್ಟೆ. ಅವಕ್ಕೆ ಒಂದೇ ಪ್ರಾಯಶ್ಚಿತ್ತ : ಇಂಗ್ಲಿಷರು ತಮ್ಮ ಒಡೆತನ ಬಿಟ್ಟು ಸೇವಕರಂತೆ ಇರಲಿ.'

ಲಿಂಡ್ಸೆ ಸತಿ ಮರುಮಾತಾಡಲಿಲ್ಲ.

* * *

ಗಾಂಧೀಜೀ ಯರವಡಾದಲ್ಲಿದ್ದಾಗ ಕರ್ನಲ್ ಮೆಡಕ್ ಶಸ್ತ್ರವೈದ್ಯ ಮಾಡಿ ಅವರ ಉದರರೋಗ ವಾಸಿಮಾಡಿದ್ದರು. ಆಗ ನಾಡಿಗೆ ನಾಡೇ ಏನಾಗುವದೋ ಏನೋ ಎಂದು ಹೆದರಿದ್ದರು. ದೇವರ ದಯೆ, ವೈದ್ಯರ ಕೌಶಲ್ಯ; ಅಂತೂ ಎಲ್ಲವೂ ಕ್ಷೇಮವಾಗಿ ಕೊನೆಗಂಡಿತು.

ಇಂಗ್ಲೆಂಡಿಗೆ ಬಂದೊಡನೆಯೆ ಮೆಡಕ್ ಎಲ್ಲಿದ್ದಾರೆ ಎಂದು ವಿಚಾರಿಸಿದರು ಗಾಂಧೀಜೀ. ಮೆಡಕ್ ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಬಂದು ನೆಲೆಸಿದ್ದರು. ಗಾಂಧೀಜೀ ಬಂದುದನ್ನು ಕೇಳಿ ಅವರೇ ಒಂದು ದಿನ ಹುಡುಕಿಕೊಂಡು ಬಂದರು. ತಮ್ಮ ಮನೆಗೆ ಬರಬೇಕೆಂದು ಕರೆದರು. 'ಚಲೋ ಹಣ್ಣು ಕಾಯಿ ಹೂ ನಿಮಗಾಗಿ ತೆಗೆದಿಟ್ಟಿದಾಳೆ ನನ್ನ ಹೆಂಡತಿ. ನೀವು ಬಂದೇ ಬರಬೇಕು' ಎಂದರು.

ಪರಸ್ಪರ ನೋಡಿ ೭ ವರ್ಷವಾಗಿತ್ತು. ಸತಿಪತಿಯರಿಬ್ಬರಿಗೂ ಎಷ್ಟು ಸಂತೋಷವೋ ಮನೆಗೆ ಹೋದಾಗ. ಮೆಡಕ್ ಸತಿಗೆ ಗಾಂಧೀಜೀ ಹೇಳಿದರು : 'ನಿಮ್ಮ ಪತಿಯ ಕೌಶಲ್ಯದ ಫಲ ಇದು; ಅಲ್ಲದಿದ್ದರೆ ಇವೊತ್ತು ನಿಮ್ಮನ್ನು ಇಲ್ಲಿ ಒಂದು ನೋಡುವ ಭಾಗ್ಯ ನನಗಿರುತ್ತಿರಲಿಲ್ಲ.'

ಆ ಕೃತಜ್ಞತೆ ಮನಸಾರೆ ಬಂದ ಭಾವ.

* * *

ಚಕ್ರಗೋಷ್ಠಿಯಲ್ಲಿ ಅಲ್ಪಸಂಖ್ಯಾಕರ ಜಗಳ ಬೆಕ್ಕಿನ ಜಗಳದಂತೆ ಆಗಿಹೋಯಿತು. ಲಂಡನ್ ತುಂಬ ಅದೇ ಮಾತಾಯಿತು. ಯಾವದೋ ಒಂದು ಸಭೆಯಲ್ಲಿ ಇದೇನು ನಿಮ್ಮ ಯಾದವೀ ಕಲಹ ಎಂದು ಕೇಳಿದರು. 'ಹಿಂದುಸ್ಥಾನದಲ್ಲಿ ಹಿಂದೂ ಮುಸ್ಲಿಮ್ ಸೀಖ ಜನರಿಗೆಲ್ಲ ಈ ರೋಗ ಬಂದಿದೆ ಎಂದು ತಿಳಿದುಕೊಳ್ಳಬೇಡಿ. ಹಾಗಿದ್ದ ಪಕ್ಷದಲ್ಲಿ ಇಷ್ಟು ದೂರ

ನಮ್ಮ ದೇಶದ ಮಹಾಸಂಸ್ಥೆಯ ಪ್ರತಿನಿಧಿಯಾಗಿ ನಾ ಬರುತಿರಲಿಲ್ಲ. ಈ ಮೂರ್ಖತನ ಬಂದಿರುವದು ಈ ಸಭೆಗೆ' ಎಂದು ವಿವರಿಸಿದರು ಗಾಂಧೀಜೀ.

ಸಭೆಗೆ ಕಣ್ಣು ಕುಕ್ಕಿದಂತಾಯಿತು ಅಷ್ಟರಲ್ಲಿಯೆ ಗಾಂಧೀಜೀ 'ಈ ಸಭೆ ಯೆಂದರೆ ಇದಲ್ಲ, ಈ ಚಕ್ರಗೋಷ್ಠಿ; ಅದರಲ್ಲಿರುವ ಹಿಂದುಸ್ತಾನೀ ಸದಸ್ಯರು, ನಾನೂ ಕೂಡ' ಎಂದು ಅದಕ್ಕೆ ವ್ಯಾಖ್ಯಾನ ಹೇಳಿ ಎಲ್ಲರನ್ನೂ ನಗೆಗಡಲಲ್ಲಿ ಅದ್ದಿದರು.

ಆ ಸಭೆಯಲ್ಲಿ ಒಬ್ಬ ಇಂಗ್ಲಿಷ್ ತರುಣ ಕೇಳಿದ: 'ನಿಮ್ಮ ಹಳ್ಳಿ ಜನಕ್ಕೆ ಕೆಲಸವಿಲ್ಲ ಕೆಲಸವಿಲ್ಲ ಅನ್ನುತ್ತೀರಲ್ಲ. ಅವರೆಲ್ಲ ಪಟ್ಟಣ ಸೇರಿ ಯಾವದಾದರೂ ಉದ್ಯೋಗಕ್ಕೆ ಹೊಂದಿಕೊಳ್ಳಬಾರದೆ?'

ನಗುತ್ತಾ ಹೇಳಿದರು: 'ಸರಕಾರದ ವ್ಯವಸಾಯ ವಿಚಾರಣಾ ಸಮಿತಿ ಕೂಡ ಇಂಥ ಉಪಾಯ ಹೇಳಲಿಲ್ಲವಲ್ಲ.'

ಹಿಂದೀ ಸೇನೆಗೆ ಸೇರಿ ನಾಲ್ಕೆಂಟು ದಿನದಲ್ಲಿ ಹಿಂದುಸ್ಥಾನಕ್ಕೆ ಹೊರಡ ಬೇಕಾಗಿದ್ದ ಇಂಗ್ಲಿಷ್ ಗೆಳೆಯ ಒಬ್ಬಾತ ಕೇಳಿದ: 'ಹಿಂದೂಸ್ಥಾನಕ್ಕೆ ಹೋದ ಮೇಲೆ ಅಲ್ಲಿನ ಜನರೊಡನೆ ಹೇಗೆ ಬೆರೆಯಬೇಕು, ಅವರ ಸೇವೆ ಹೇಗೆ ಮಾಡಬೇಕು?'

'ಮೊದಲ ಕೆಲಸ: ಚಾರ್ಲಿ ಆಂಡ್ರೂಸ್‌ರನ್ನು ಕಾಣುವದು. ಭಾರತ ಸೇವೆಗಾಗಿ ಅವರೇನೇನು ಮಾಡಿದರೋ ಕೇಳಿ ತಿಳಿದುಕೊಳ್ಳುವದು. ಆ ಪ್ರಥಮ ಪಾಠ ಕಲಿತಮೇಲೆ ಸಿಮಲಾ ಗುಡ್ಡಗಳ ಸ್ಟೋಕ್ಸ್‌ನಂತೆ ದೇಶೀ ಜನರಲ್ಲಿ ಬೆರೆತು ಒಂದಾಗಬೇಕು. ಇಂಥ ಜನ ಎಷ್ಟು ಮಂದಿ ಬಂದರೂ ನಮಗೆ ಬೇಕು.'

* * *

ಇಂಗ್ಲೆಂಡಿನ ನಿರುದ್ಯೋಗಿಗಳ ಗುಂಪೂ ಗಾಂಧೀಜಿಯ ಬಳಿಗೆ ಬಂದಿತ್ತು. ಹಿಂದುಸ್ಥಾನದ ಬಹಿಷ್ಕಾರ ಚಳುವಳಿಯ ಬಿಸಿ ತಗಲಿದ್ದು ಅವರಿಗೇ. ಆದರೂ ಅವರ ಮನಸ್ಸು ಕಹಿಯಾಗಿರಲಿಲ್ಲ. ಹಿಂದುಸ್ಥಾನದ ಒಕ್ಕಲುತನ; ಒಕ್ಕಲಿಗನಿಗೆ ಆರು ತಿಂಗಳು ನಿರುದ್ಯೋಗವೇಕೆ, ಬಡತನದ ಬದುಕಿಗೇನು ಕಾರಣ; ಎಲ್ಲಾ ಕೇಳಿದರು. ಅವರಿಗೆ ಕೆಲಸವಿಲ್ಲದಿದ್ದರೂ ಹೊಟ್ಟೆಗಿತ್ತು. ಸರಕಾರ ಅವರಿಗೆ ದಾನ ಬೇರೆ ನೀಡುತ್ತಿತ್ತು; ಗಂಡಾಳಿಗೆ

೧೭ ಷಿಲಿಂಗ್, ಹೆಣ್ಣಾಳಿಗೆ ೧೫, ಕೆಲಸಗಾರಳಲ್ಲದ ಹೆಣ್ಣಾಳಿಗೆ ೯, ಕೂಸಿಗೆ ೨ ಷಿಲಿಂಗ್ ಒಂದು ವಾರಕ್ಕೆ.

'ಇಷ್ಟಾದರೆ ಐಶ್ವರ್ಯವೇ ಆಯಿತು. ಅದಿರಲಿ, ನೀವು ಉಪಾಯ ಶಾಲಿಗಳು. ಬೇರೆ ಉದ್ಯೋಗ, ಬೇರ ಕಸಬು ಕಂಡುಹಿಡಿಯಬಲ್ಲಿರಿ. ಉಪವಾಸದಿಂದ ನರಳುತ್ತಿರುವ ನಮ್ಮ ಶತಕೋಟಿ ಜನಕ್ಕೆ ಬೇರೆ ಕಸಬಿಲ್ಲ. ನಿಮ್ಮಲ್ಲಾರಾದರೂ ಬುದ್ಧಿವಂತರು ಬೇರೆ ಹುಡುಕಿಕೊಟ್ಟರೆ ರಾಟೆಯ ಬದಲು ಅದನ್ನೇ ಅವರಿಗೆ ಹೇಳಿಕೊಡುತ್ತೇನೆ. ನಿಮಗೆ ನಾನೇನು ಆಸೆ ಹೇಳಲಿ. ಹಿಂದುಸ್ಥಾನ ಸ್ವತಂತ್ರವಾದರೆ ನಮಗೆ ಸ್ವದೇಶೀ ಬಟ್ಟೆ ಸಾಲದೆ ಬಂದರೆ ಮತ್ತಾರದನ್ನೂ ಕೊಳ್ಳುವುದಿಲ್ಲ, ನಿಮ್ಮ ಬಟ್ಟೆಯನ್ನೇ ಕೊಳ್ಳುತ್ತೇವೆ' ಎಂದರು ಗಾಂಧೀಜೀ.

ಇದರಿಂದ ಅವರಿಗೇನು ಸಮಾಧಾನವಾಯಿತೋ. 'ಇದರಿಂದ ಏನಾದರೂ ಶುಭವೇ ಆದೀತು. ಶುಭವಾಗದಿದ್ದರೂ ಅಶುಭವಂತೂ ಆಗದು. ಪರಸ್ಪರ ಸೌಹಾರ್ದವೇ ಸದ್ಯಃ ಫಲ' ಎಂದ ಒಬ್ಬ. ಇನ್ನೊಬ್ಬನು ಹೇಳಿದ: 'ನಾನೂ ನಿರುದ್ಯೋಗಿಯೇ. ಆದರೆ ನಾನೇ ಹಿಂದುಸ್ಥಾನದಲ್ಲಿದ್ದಿದ್ದರೆ ಈಗ ಗಾಂಧೀ ಹೇಳುವ ಮಾತೇ ನಾ ಹೇಳುತಿದ್ದೆ.'

* * *

ಶ್ರೀಮತಿ ಮಾಂಟಿಸೋರಿ – ಶಿಶುವಿಹಾರಗಳ ಪ್ರಖ್ಯಾತಿಯ ಮಹಾತಾಯಿ – ಬಂದಿದ್ದರು. 'ನಾವೆಲ್ಲ ಒಂದೇ ಮನೆಯವರಲ್ಲವೆ' ಎಂದು ಸ್ವಾಗತಿಸಿದರು ಗಾಂಧೀಜೀ. 'ಮಕ್ಕಳ ನಮಸ್ಕಾರ ಹೊತ್ತು ತಂದೆ' ಎಂದಳಾಕೆ. 'ನನಗೂ ಮಕ್ಕಳಿದಾರೆ ತಾಯಿ. ನಮ್ಮ ದೇಶದಲ್ಲಿ ಗೆಳೆಯರು ನಿಮ್ಮ ಪದ್ಧತಿ ಅನುಸರಿಸಲು ಹೇಳುತ್ತಾರೆ. ಹಾಗಲ್ಲ, ನಿಮ್ಮ ಪದ್ಧತಿ ಸಿದ್ಧಾಂತಗಳ ತಿರುಳು ತಿಳಿದುಕೋಬೇಕು ಅನ್ನುತ್ತೇನೆ ನಾನು.' ಆಕೆ ಅಂದರು: 'ಗಾಂಧೀಜಿಯ ಹೃದಯಸಾರವನ್ನು ತಿಳಿದುಕೊಳ್ಳಿರಿ ಎಂದು ನಾನು ನಮ್ಮ ಹುಡುಗರಿಗೆ ಹೇಳಿದ ಹಾಗೆ ನಿಮ್ಮ ದೇಶದಲ್ಲಿ ನನ್ನಮೇಲೆ ಬಲು ಪ್ರೀತಿ. 'ಹೌದು! ಹಿಂದುಸ್ಥಾನದಲ್ಲಿ ನಿಮ್ಮ ಶಿಷ್ಯರು ಹೆಚ್ಚಾಗಿದಾರೆ' ಎಂದರು ಗಾಂಧೀಜೀ.

* * *

ಮೋಹನ್‌ದಾಸ್ ಕರಂಚಂದ್ ಗಾಂಧೀ - ಎಂದು ಕೂಗಿದರು ಕಚೇರಿಯಲ್ಲಿ. ತೆಳ್ಳಗೆ ಬಳುಕುತ್ತ ಗಾಂಧೀಜೀ ಅಪರಾಧಿಗಳ ಪಂಜರದಲ್ಲಿ ನಿಂತರು. ನಿಂತು ಎರಡು ತಿಂಗಳ ಶಿಕ್ಷೆ ಪಡೆದರು ಸ್ವಜನಸೇವೆಗಾಗಿ. ಅದಕ್ಕೆ ಮುನ್ನ ಅಲ್ಲಿ ಸೇರಿದ್ದ ನೂರಾರು ಜನರ ಗುಂಪಿಗೆ ಸಂದೇಶ ಕೊಟ್ಟರು.

"ಬೇಕಾದವರು ಬೇಕಾದುದನ್ನಾಲಿ, ನಾನೇನೋ ಮತ್ತೆ ಮತ್ತೆ ಹೇಳುತ್ತೇನೆ: ಇದು ಧರ್ಮಯುದ್ಧ, ಧರ್ಮಸ್ವಾತಂತ್ರ್ಯದ ಕದನ. ಧರ್ಮವೆಂದರೆ ಆಚಾರ ಸಂಪ್ರದಾಯಗಳಲ್ಲ, ರೂಢಧರ್ಮವಲ್ಲ; ಸರ್ವಧರ್ಮಗಳ ಮೂಲ, ದೇವರಿದಿರು ನಮ್ಮನ್ನು ನಿಲಿಸುವ ಧರ್ಮ ಎಂದು ನನ್ನರ್ಥ. ನೀವು ನಿಮ್ಮ ಮನುಷ್ಯತ್ವವನ್ನು ಬಿಟ್ಟರೆ, ಬುದ್ಧಿಪೂರ್ವಕವಾಗಿ ವ್ರತತೊಟ್ಟೊವ್ಯೈ ಬಳಲಿಸಲಾರದೆ ಟ್ರಾನ್ಸ್‌ವಾಲ್‌ನಲ್ಲಿರ ಬಯಸಿ ವ್ರತ ಕೆಟ್ಟರೆ ನಾಸ್ತಿಕರಾದಂತೆ, ದೇವರನ್ನೇ ಕೈಬಿಟ್ಟಂತೆ. ಯೇಸು ಹೇಳಿದ ಮಾತು ಹೇಳುತ್ತೇನೆ: ದೇವರನ್ನು ಹಿಂಬಾಲಿಸುವವರು ಜಗತ್ತನ್ನು ಬಿಡಬೇಕು. ಈ ಪ್ರಸಂಗದಲ್ಲಿ ನನ್ನ ಜನರಿಗೆ ಹೇಳುತ್ತೇನೆ. ಜಗತ್ತು ಬಿಟ್ಟು ದೇವರನ್ನು ಹಿಡಿದುಕೊಳ್ಳಿ; ತಾಯಿ ಎದೆಗೆ ಗಟ್ಟಿಯಾಗಿ ಅವಚಿಕೊಳ್ಳುವ ಮಗುವಿನಂತೆ ದೇವರನ್ನು ಹಿಡಿದುಕೊಳ್ಳಿ."

ಎಂಥ ಧೀರವಾಣಿ. ಧೀರರದಲ್ಲವೆ ದೇವರ ದಾರಿ!

* * *

ಜೋಸೆಫ್ ಡೋಕ್ ದಕ್ಷಿಣ ಆಫ್ರಿಕದಲ್ಲೊಬ್ಬ ಪಾದರಿ: ಭಗವದ್ವಿಧೇಯ, ಗಾಂಧೀಜಿಗೆ ಗೆಳೆಯ. ದಕ್ಷಿಣ ಆಫ್ರಿಕದ ಕದನವನ್ನು ಕಣ್ಣಾರೆ ನೋಡಿದವ. ಸರಕಾರದ ಯಂತ್ರ ಬಲು ಕಠಿನವೆಂದು ಬಲ್ಲವ. ಒಂದು ದಿನ ಗಾಂಧೀಜಿಗೆ ಹೇಳಿದ: 'ಅಣ್ಣ, ಇದು ಬೇಗ ಮುಗಿವ ಕದನವಲ್ಲ; ದೀರ್ಘ ತಪಸ್ಸು. ಇಂಗ್ಲೆಂಡಿಗೆ ನಿರ್ಲಕ್ಷ್ಯ, ಇಲ್ಲಿನ ಸರಕಾರವಂತೂ ಕಲ್ಲು. ಏನಾಗುತ್ತದೋ ಏನೋ!'

ಗಾಂಧೀಜೀ ಸಾವಧಾನವಾಗಿ ಹೇಳಿದರು: ಏನೂ ಚಿಂತೆಯಿಲ್ಲ. ತಪಸ್ಸು ದೀರ್ಘವಾದರೆ ನಮ್ಮ ಜನ ಪರಿಶುದ್ಧರಾದಾರು, ಗೆಲವು ತಪ್ಪದೆ ಕೈಗೂಡೀತು.' ಆಳವಾಗಿ ಮುಳುಗಿದವನಿಗೆ ರತ್ನ.

* * *

ಲಂಡನಿನಲ್ಲಿ ಗಾಂಧೀಜಿಗೆ ಮೋಕೆಹಾಲು ಒದಗಿಸುತ್ತಿದ್ದ ಮನೆಯ ಯಜಮಾನ ಅವರನ್ನು ನೋಡಲು ಬಂದ. ತನ್ನ ಬದುಕಿನ ಕತೆಯನ್ನೆಲ್ಲ ಹೇಳಿದ.

ಗಾಂಧೀಜೀ ಕೇಳಿದರು: 'ನಿನಗೆಷ್ಟು ಜನ ಮಕ್ಕಳು?'

'ಎಂಟು ಜನ; ನಾಲ್ಕು ಗಂಡು ನಾಲ್ಕು ಹೆಣ್ಣು.'

'ನನಗೂ ನಾಲ್ಕು ಗಂಡು. ಪರವಾಯಿಲ್ಲ. ಸಮಕುಸ್ತಿಯಲ್ಲದಿದ್ದರೂ ಅರಪಟ್ಟು ನನ್ನದು—ನಿನ್ನ ಸಂಗಡ' ಎಂದರು ಗಾಂಧೀಜೀ. ಕಿಂಗ್ಸ್ಲಿ ಹಾಲ್ ಗೊಳ್ಳೆಂದು ನಕ್ಕಿತು.

*　　　　*　　　　*

ಗಾಂಧೀಜೀ ಪಾಕಶಾಸ್ತ್ರ ಪ್ರವೀಣರು. ಅವರ ಪಾಕ ನಳಪಾಕವೂ ಅಲ್ಲ, ರಸಪಾಕವೂ ಅಲ್ಲ. ಅದು ಗಾಂಧೀಪಾಕವೇ ಸರಿ. ಸೇವಾಗ್ರಾಮದಲ್ಲಿ ಒಂದು ಸಲ ಗಾಂಧೀಜೀ ಅಡಿಗೆಮನೆ ಯಾಜಮಾನ್ಯ ವಹಿಸಿಕೊಂಡರು. ಒಡನೆ ಮಸಾಲೆ ಮಾಯವಾಯ್ತು. ಸಂಜೆಗೆ ಪಲ್ಯ - ಬೇಯಿಸಿದ ಪಲ್ಯ - ಇಲ್ಲ. ಅದರ ಬದಲು ಭರತ - ಹಸೀ ಕಾಯಿಪಲ್ಯ, ಶಲಾಡ್‌ನಂಥದು – ಪ್ರಾರಂಭವಾಯಿತು. ಬೆಳಗ್ಗೆ ಗೋಧಿನುಚ್ಚಿನ ಗಂಜಿ. ಆಶ್ರಮವಾಸಿಗಳಿಗೆ ಇದು ತಡೆಯಲಿಲ್ಲ. ಒಂದು ದಿನ ಸಭೆ ಸೇರಿಸಿದರು.

ಎಲ್ಲರೂ ತಮತಮಗೆ ತೋಚಿದ ಸೂಚನೆ ಹೇಳಿದರು. ಅವನ್ನೆಲ್ಲ ಕೇಳಿ ಗಾಂಧೀಜೀ ಅಂದರು. ನನ್ನ ಆಯುಷ್ಯವೆಲ್ಲ ಪಾಕಶಾಸ್ತ್ರ ಪ್ರಯೋಗ ದಲ್ಲೇ ಕಳೆದಿದೇನೆ. ಲಂಡನಿನಲ್ಲಿ ಓದುತ್ತಿದ್ದಾಗಲೇ ಪ್ರಾರಂಭವಾಯಿತು ಈ ವಿದ್ಯೆ. ದಕ್ಷಿಣ ಆಫ್ರಿಕದಲ್ಲಿ ಉದ್ದಕ್ಕೂ ಅಡಿಗೆ ಭಟ್ಟನಾಗಿಯೇ ಇದ್ದೆ. ಸಾಬರಮತಿ ಆಶ್ರಮದಲ್ಲೂ ಅಡಿಗೆಗೆ ಕೈಹಾಕುತ್ತಲೇ ಇದ್ದೆ. ಈಗಂತೂ ಮಾದರಿ ಹಳ್ಳಿಜನವಾಗಬೇಕು ನಾವು. ಹೇಗೋ ಹಾಗೆ ಅಡಿಗೆಮಾಡಿ ತಿಂದು ಹೇಗೋ ಕಾಲ ನೂಕಿದರೆ ಆಗದು. ಅವರಿಗೆ ಮಾದರಿ ಆಹಾರ ನಾವು ತೋರಿಸಬೇಕು. ನಮ್ಮ ಹಳ್ಳಿಗಳೆಲ್ಲ ತಿಪ್ಪೆಗುಂಡಿಗಳು ಎಂದಿದಾರೆ ಪ್ರವಾಸಿ ಗಳು. ಅವನ್ನು ಮಾದರಿ ಗ್ರಾಮಗಳಾಗಿ ಮಾಡಬೇಕು. ಸುತ್ತಲೂ ದಿವ್ಯ ವಾದ ಗಾಳಿಯಿದ್ದೂ ನಮ್ಮ ಹಳ್ಳಿಜನಕ್ಕೆ ಗಾಳಿಯಿಲ್ಲ. ಪುಷ್ಟಿಕೊಡುವ

ಆಹಾರ ಬೆಳೆದರೂ ಅವರಿಗೆ ತಿನ್ನುವ ಭಾಗ್ಯವಿಲ್ಲ. ಈ ಹಳ್ಳಿಗಳನ್ನು ಸೊಬಗಿನ ಗಣಿಗೆಳಾಗಿ ಮಾಡಬೇಕು. ಅದಕ್ಕೇ ಆಹಾರದ ವಿಷಯದಲ್ಲಿ ನಾನು ಹೀಗೆ ಪಾದರಿಯಂತೆ ಮಾತಾಡುವದು.''

ಇಷ್ಟಕ್ಕೇ ಮುಗಿಯಲಿಲ್ಲ. ಅಡಿಗೆ ಪಾತ್ರೆ ತೊಳೆಯಲು ಮೊದಲಿಟ್ಟರು. ಸಂಜೆಗೆ ಪ್ರಾರ್ಥನೆ ಮುಗಿದ ಮೇಲೆ ಕಾಳು ಹಸಮಾಡತೊಡಗಿದರು. ಬೀಸುವ ಕಲ್ಲಿನ ಪರೀಕ್ಷೆ ನಡೆಯಿತು. ಅದರಲ್ಲಿ ಏನಾದರೂ ಹೊಸ ಪ್ರಗತಿ ಸಾಧ್ಯವೆ ಎಂಬ ಪ್ರಯತ್ನ ಅದು.

* * *

ಸೇವಾಗ್ರಾಮ ತೀರ್ಥಕ್ಷೇತ್ರವಿದ್ದಂತೆ. ಅಲ್ಲಿ ನಾನಾ ದೇಶದ ಜನ ಸಿಗುತ್ತಾರೆ. ಒಬ್ಬ ಜಪಾನೀ ಭಿಕ್ಷು ಕೆಲವು ದಿನ ಸೇವಾಗ್ರಾಮದಲ್ಲಿ ವಾಸ ವಾಗಿದ್ದರು. ಆತ ನಿಜವಾಗಿಯೂ ಸಾಧು. ಯಂತ್ರದಂತೆ ತನ್ನ ಕೆಲಸ ಮಾಡುತ್ತ ಎಲ್ಲರೊಡನೆಯೂ ಸರಸವಾಗಿ ನಡೆದು, ಆಶ್ರಮ ಜೀವನಕ್ಕೆ ಹೊಂದಿಕೊಂಡು ಈ ಗುಂಪಿನಲ್ಲಿ ಬೆರೆತುಹೋದರು. ಆತನಿಗೊಂದು ಸಲ ಲಂಗೋಟಿಗೆ ಬಟ್ಟೆ ಬೇಕಾಯಿತು. ಅಂಗಡಿಯಲ್ಲಿ ಜಪಾನೀ ಬಟ್ಟೆಯೇ ತಾನೆ ಎಲ್ಲಕ್ಕಿಂತ ಅಗ್ಗ. ಅದನ್ನು ತಂದ.

ಗಾಂಧೀಜಿಯ ಕಣ್ಣಿಗದು ಬಿತ್ತು. ಸಾಧುವನ್ನು ಕರೆದು ಹೇಳಿದರು: ''ನಿನ್ನ ಪಾಲಿಗೆ ಜಪಾನೀ ಬಟ್ಟೆ ಸ್ವದೇಶೀ ಬಟ್ಟೆಯೇ ಸರಿ. ಆದರೆ ಹಿಂದು ಸ್ಥಾನದಲ್ಲಿರುವಾಗ ಹಾಗಲ್ಲ. ಯಾವ ದೇಶದಲ್ಲಿದ್ದರೆ ಆ ದೇಶಾಚಾರದಂತೆ ನಡೆಯಬೇಕು. ಅದನ್ನು ಅರ್ಥಮಾಡಿಕೊಳ್ಳಬೇಕು. ಆಫ್ರಿಕಾದಲ್ಲಿದ್ದಾಗ ಆಫ್ರಿಕಾ ಸಾಮಾನನ್ನೇ ನಾನುಪಯೋಗಿಸುತ್ತಿದ್ದೆ. ನಿನಗೇನಾದರೂ ಆಕ್ಷೇ ಪಣೆಯಿದ್ದರೆ ಉಪಾಯವಿಲ್ಲ; ಇಲ್ಲದಿದ್ದರೆ ಖಾದಿ ಹಾಕು ಎನ್ನುತ್ತೇನೆ. ಖಾದಿ ತುಟ್ಟಿಯೆ ಹೌದು; ಆದರೆ ಬಟ್ಟೆ ಸ್ವಲ್ಪ ಕಡಮೆ ಕೊಂಡರಾಯಿತು.''

ತಂದಿದ್ದ ಬಟ್ಟೆ ಹಿಂದಕ್ಕೆ ಕೊಡಲು ಹೇಳಲಿಲ್ಲವಾದರೂ ಸಾಧು ಕೂಡಲೆ ಅಂಗಡಿಗೆ ಹೋಗಿ ಹಿಂದಕ್ಕೆ ಕೊಟ್ಟು ಬಂದ. ಒಂದಾಣೆ ಕಡಮೆ ಕೊಟ್ಟರೂ ಚಿಂತೆಯಿಲ್ಲ ತೆಗೆದುಕೊಳ್ಳಿ ಎಂದ. ಆ ರಾತ್ರಿ ಆತನ ದಿನಚರಿ ಯಲ್ಲಿ ಹೀಗೆ ಬರೆದಿತ್ತು: ಇವೊತ್ತು ದೊಡ್ಡ ತಪ್ಪುಮಾಡಿದೆ.

* * *

ದಾಂಡಿ ಕೂಚಿನ ಸಂದರ್ಭದಲ್ಲಿ ಸಾಬರಮತಿ ಆಶ್ರಮವನ್ನು ಗಾಂಧೀಜೀ ಬಿಟ್ಟರು. ಸ್ವರಾಜ್ಯ ಸಿಗುವ ತನಕ ಮತ್ತೆ ಅಲ್ಲಿ ಕಾಲಿಡೆನೆಂದು ಪ್ರತಿಜ್ಞೆ ಮಾಡಿದರು. ಮೂರು ನಾಲ್ಕು ವರ್ಷದ ತರುವಾಯ ಸಾಬರಮತಿ ಸೆರೆಮನೆಗೆ ಗಡಿನಾಡಿನ ಗಾಂಧಿಯನ್ನು ನೋಡಲೆಂದು ಬಂದರು. ಇಷ್ಟು ಹೊತ್ತಿಗೆ ಆಶ್ರಮ ಹರಿಜನನಿಲಯವಾಗಿತ್ತು. ಅಲ್ಲಿಂದ ಚಿಕ್ಕ ಹರಿಜನ ಹುಡುಗಿಯರು ಕೆಲವರು ಗಾಂಧೀಜಿಯನ್ನು ನೋಡಲು ಬಂದಿದ್ದರು. ಮಕ್ಕಳನ್ನು ಕಂಡೊಡನೆ ಗಾಂಧೀಜಿ ಆಟಕ್ಕೆ ಮೊದಲು ಮಾಡಿದರು. 'ನಿಮಗೆಷ್ಟು ಜನ ಮೇಷ್ಟರು?' ಎಂದು ಕೇಳಿದರು. ಮಣಿಬೇನ್ ಎಂದಳೊಬ್ಬಳು. ಜಯಾಬೇನ್ ಎಂದಳಿನ್ನೊಬ್ಬಳು. ಆನಂದೀಬೇನ್ ಆಯ್ತು, ಮಾಧುರಿಯಾಯ್ತು. ಹರಿಜನಾಶ್ರಮದಲ್ಲಿದ್ದ ಹಿರಿಯರ ಹೆಸರೆಲ್ಲ ಆದವು.

ಅಲ್ಲಿಯೆ ಕಾಶೀ ವಿದ್ಯಾಪೀಠದ ಆಚಾರ್ಯ ಆನಂದಶಂಕರ ಧ್ರುವರು ನಿಂತಿದ್ದರು. 'ಹೇಗಿದೆ ನೋಡಿದಿರಾ? ನಿಮ್ಮ ವಿದ್ಯಾಪೀಠಕ್ಕಿಂತ ಭಾರಿ ಆಯಿತಲ್ಲವೆ?' ಎಂದರು ಗಾಂಧೀಜೀ. ಆಚಾರ್ಯರೆಂದರು: 'ಅದು ಸರಿ. ಆದರೆ ಇದ್ದವರ ಹೆಸರೆಲ್ಲ ಹೇಳುತ್ತಿದಾರೆ ಹುಡುಗರು. ಇಷ್ಟು ಜನ ಉಪಾಧ್ಯಾಯಿನಿಯರುಂಟೆ?'

'ಹಾಗನ್ನಬೇಡಿ. ಎಷ್ಟಾದರೂ ಇದು ಹಳೆಯ ಸತ್ಯಾಗ್ರಹಾಶ್ರಮ ತಾನೆ' ಎನ್ನುತ್ತ ಗಾಂಧೀಜೀ ಆ ಮಕ್ಕಳನ್ನು ಕೇಳತೊಡಗಿದರು.

'........ಏನು ಹೇಳಿಕೊಡುತ್ತಾಳೆ?'

'ಹಿಂಜುವುದು.'

'........ಅವರೋ?'

'ನೂಲುವುದು.'

'........ಅವರು?'

'ಸಂಗೀತ.'

'ಅವರೋ?'

'ಊಟ.' ಎಲ್ಲರೂ ಬಿದ್ದು ಬಿದ್ದು ನಕ್ಕರು. 'ಒಳ್ಳೇ ಮೇಷ್ಟರಲ್ಲವೆ ಅವರು!' ಎಂದರು ಗಾಂಧೀಜೀ. 'ಹೌದು, ಬಹಳ ಒಳ್ಳೆಯವರು' ಎಂದರು ಹುಡುಗಿಯರು.

'ನಿಮ್ಮಲ್ಲಿ ಯಾರು ತುಂಟರೋ ಹೇಳಿ ನೋಡೋಣ' ಗಾಂಧೀಜೀ ಕೇಳಿದರು.

ಚೆಂಡು ಪುಟಿದಂತೆ ಬಂದವು ಕೆಲವು ಹೆಸರು.

'ನೀವು ಸುಳ್ಳುಹೇಳುತ್ತೀರೋ ಇಲ್ಲವೋ?'

'ಕೆಲಸ ತಪ್ಪಿಸಬೇಕಾದರೆ ಹೇಳುತ್ತೇವೆ.'

'ಯಾರು ಹೇಳುವದು ? ನೀನೋ, ನೀನೋ ?'

'ನಾನು.'

'ತಪ್ಪಲ್ಲವೆ, ಮಗು. ಸುಳ್ಳು ಹೇಳಬಾರದು.'

'ಹೇಳಬಾರದೆಂದು ಪ್ರಯತ್ನಮಾಡುತ್ತೇನೆ. ಆದರೆ ಸಾಧ್ಯವಾಗದು.'

'ಇಲ್ಲಮ್ಮ, ನೀನು ಪ್ರಯತ್ನಮಾಡುವುದಿಲ್ಲ.'

'ಮಾಡುತ್ತೇನೆ; ನಿಜವಾಗಿಯೂ. ಆದರೂ ಹೇಗೋ ಏನೋ ನಾಲಗೆಗೆ ಸುಳ್ಳು ಬಂದು ಬಿಡುತ್ತದೆ. ಅದನ್ನು ಹೇಗೆ ಬಿಡಬೇಕೋ ಗೊತ್ತಿಲ್ಲ.'

'ನಾ ಹೇಳಲೆ? ದಿನವೂ ಬೆಳಗ್ಗೆ ಎದ್ದರೆ ರಾಮನಾಮ ಹೇಳಿಕೋ; ದೇವರೆ, ಸುಳ್ಳಾಡದ ಹಾಗೆ ಮಾಡಪ್ಪ ಎಂದು ಕೇಳಿಕೋ; ದಿನವೂ ರಾತ್ರಿ ಮಲಗುವಾಗ, ದೇವರೆ ಇಷ್ಟುಸಲ ಸುಳ್ಳಾಡಿದೆ. ಇನ್ನಾದರೂ ದಿಟವಾಡು ವುದು ಕಲಿಸು ಎಂದು ಕೇಳಿಕೋ. ಇದನ್ನು ಮಾಡುತ್ತೀಯೋ?'

ಎಲ್ಲರೂ ಕೂಗಿದರು ಒಟ್ಟಾಗಿ; 'ಮಾಡುತ್ತೇವೆ.'

'ಬಹಳ ಸಂತೋಷ. ನೀವೆಲ್ಲ ನಿಮ್ಮ ಮಾತಿನಂತೆ ನಡೆಯಬೇಕು. ಇನ್ನು ನಮ್ಮ ಆಟ ಮುಗಿಯಿತು. ಹೋಗಿ ಬರಲೆ?'

'ಕೂಡದು ಕೂಡದು' ಎಂದು ಕೂಗಿದರು ಕೆಲವು ಹುಡುಗಿಯರು.

'ಯಾಕೆ ? ಏನಾದರೂ ಕೇಳಬೇಕೇನು ? ಹೂಂ, ಕೇಳಿ ಮತ್ತೆ.'

'ನೀವು ನಮ್ಮ ಜೊತೆಯಲ್ಲಿ ಇರಲಿಲ್ಲವಲ್ಲ. ಯಾಕೋ ?'

'ನೀವು ನನ್ನನ್ನು ಬಾ ಎಂದು ಕರೆಯಲಿಲ್ಲ, ಬುಧಭಾಯಿ ಕರೆದಿದ್ದ. ಅಷ್ಟೆ.'

'ನಾವೂ ಕರೆಯುತ್ತಾ ಇದ್ದೆವು. ನೀವು ನಮ್ಮ ಜೊತೆಗೆ ಇರುವುದಿಲ್ಲ ವಂತಲ್ಲ. ಅದು ಯಾಕೋ ?'

'ನೀವು ಸ್ವರಾಜ್ಯ ಸಂಪಾದಿಸಿದ ಮೇಲೆ ನಿಮ್ಮ ಜೊತೆಯಲ್ಲಿ ಇರಲು ಬರುತ್ತೇನೆ.'

ಅವರಲ್ಲೊಬ್ಬ ಹುಡುಗಿ ಹಾಕಿದಳು ಗಾಂಧೀಜಿಗೆ ಚೇಸ್ತು. 'ಇದು ನಿಮ್ಮ ಆಶ್ರಮವಾಗಿದ್ದಾಗ ಆ ಮಾತು ಸರಿ. ಸ್ವರಾಜ್ಯ ಸಿಗುವ ತನಕ ನಿಮ್ಮ ಆಶ್ರಮದಲ್ಲಿ ನೀವು ಕಾಲಿಡುವುದಿಲ್ಲ. ಆದರೆ ಆಶ್ರಮ ಈಗ ನಿಮ್ಮ ದಲ್ಲವಲ್ಲ. ಇದು ಹರಿಜನಾಶ್ರಮ. ಅಂದಮೇಲೆ ನೀವೇಕೆ ನಮ್ಮ ಜೊತೆ ಯಲ್ಲಿರಬಾರದು ?'

ಗಾಂಧೀಜೀ ಈ ಯುಕ್ತಿವಾದ ಕೇಳಿ ಹೊಟ್ಟೆತುಂಬ ನಕ್ಕರು. 'ಸರಿ. ಇನ್ನೊಂದು ಸಲ ನಾನಿಲ್ಲಿ ಬಂದಾಗ ನೀವು ಕರೆಯುವಿರಂತೆ' ಎಂದು ಅದಕ್ಕೆ ಸಮಾಧಾನ ಹೇಳಿದರು.

* * *

ವರ್ಧಾದಲ್ಲಿ ಗಾಂಧೀಜಿ ಇದ್ದಾಗ ಅಲ್ಲಿಯ ಆಶ್ರಮದಲ್ಲಿ ಚರ್ಮಾ ಲಯವೂ ಒಂದಿತ್ತು. ಆದರಲ್ಲಿ ಎಕ್ಕಡದ ಶಾಖೆಗೆ ಒಬ್ಬ ಚಮ್ಮಾರನನ್ನು ಹಿರಿಯನನ್ನಾಗಿ ನೇಮಿಸಿದರು. ಅವನದು ನುರಿತ ಕೈಯಾದರೂ ಅವನಿಗೆ ಬೂಟು, ಜೋಡು ಹೊಲಿದು ಅಭ್ಯಾಸವೇ ಹೊರತು ಎಕ್ಕಡ ಹೊಲಿದು ರೂಢಿಯಿರಲಿಲ್ಲ. ಇಲ್ಲಿ ಬರುವ ಗಿರಾಕಿಯೆಲ್ಲ ಎಕ್ಕಡದ್ದೇ.

ಗಾಂಧೀಜಿಗದು ಗೊತ್ತಾಯಿತು. ಆ ಚಮ್ಮಾರನನ್ನೂ ಅವನ ಸಂಗಾತಿ ಗಳನ್ನೂ ಕರೆಯಿಸಿದರು. ಅವರು ಬರುವ ಹೊತ್ತಿಗೆ ಇವರ ಮುಂದೆ ಒಂದು ಮೋಚಿಯಂಗಡಿ ಹರಡಿತ್ತು. ಸರಿ, ಬಂದವರಿಗೆ ಎಕ್ಕಡ ಹೊಲಿಯುವ ಪಾಠ ಪ್ರಾರಂಭವಾಯಿತು. 'ಇಲ್ಲಿ ಪಟ್ಟಿ ಹಾಕಬೇಕು; ಇಲ್ಲಿ ಹೊಲಿಗೆ. ಹಿಮ್ಮಡಿಯ ಮೇಲೆ ಭಾರ ಬಹಳ; ಬೇಗ ಸವೆಯುವ ಜಾಗ ಅದು; ಅಲ್ಲಿ ಎರಡು ತುಂಡು ಚಕ್ಕಳ ಹಾಕಬೇಕು.' ಮೊದಲಿನ ಹೊಲಿಗೆ ಬಿಚ್ಚಿಸಿ ಹೊಸ ಹೊಲಿಗೆ ಮೊದಲಾಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಜನ ಅಲ್ಲೇ ಇದ್ದರು. ಅವರಿಗೆ ಆತುರ. 'ಎಕ್ಕಡ ಹೊಲಿಯುವ ಗಲಾಟೆಯಲ್ಲಿ ನಮಗೆ ಹೊತ್ತು ಸಾಲದೆ ಬರುತ್ತದೆ' ಎಂದರು ಅವರಲ್ಲೊಬ್ಬರು. 'ಏನೋ ಪಾಠ ಕಲಿಯುತ್ತಿದಾರೆ. ಅವರ ಮೇಲೆ ಅಸೂಯೆ ಬೇಡ. ನೀವೂ ಬೇಕಾದರೆ ನೋಡಿ; ಒಳ್ಳೆ ಎಕ್ಕಡ

ಹೇಗೆ ತಯಾರಾಗುತ್ತದೆಯೋ’ ಎಂದರು ಗಾಂಧೀಜೀ.

ಆಫ್ರಿಕಾದಲ್ಲಿದ್ದಾಗಲೆ ಗಾಂಧೀಜೀ ಎಕ್ಕಡ ಹೊಲಿಯುವುದನ್ನು ಕಲಿತಿದ್ದರು. ಟಾಲ್‌ಸ್ಟಾಯ್ ಕ್ಷೇತ್ರದಲ್ಲಿ ಮೊದಲು ಕಲಿತುದು.

* * *

ಆಶ್ರಮದಲ್ಲಿ ಭಾನುಬಾಪ ಎಂಬವರೊಬ್ಬರಿದ್ದರು. ಅವರು ಶುದ್ಧ ಬೈರಾಗಿ. ಅವರಿಗೆ ಕಾಲಿಗೆ ಮೆಟ್ಟು ಬೇಕಾಗಿತ್ತು ಒಂದು ಸಲ. ಯಾರದಾದರೂ ಹಳೆಯ ಜೊತೆ ಒಂದಿದೆಯೆ ಎಂದು ಗಾಂಧೀಜಿಯನ್ನು ಕೇಳಿದರು.

‘ಹಳೆಯ ಜೊತೆಯೆ ಯಾಕೆ?’ ಗಾಂಧೀಜೀ ಕೇಳಿದರು.

‘ತಿಂದುಳಿದ ಅನ್ನ, ಮೆಟ್ಟಿ ಸವೆದ ಎಕ್ಕಡವೇ ಒಳ್ಳೆಯದಲ್ಲವೆ?’ ಎಂದ ಆತ ವಿನೋದವಾಗಿ.

‘ಒಂದು ಹೊಸ ಜೊತೆಯನ್ನೇ ಮಾಡಿಸಿಕೊಟ್ಟರೋ?’

‘ಅಯ್ಯೋ ನನ್ನ ಪುಣ್ಯವೆ! ನನಗೀ ಹೊಸಕಾಲದ ಮೆಟ್ಟು ಎಕ್ಕಡ ಸರಿಹೋಗುವುದಿಲ್ಲ. ಹೊರಮೈ ಹೊಲಿಗೆಯ ಓಖಾಯಿಮೆಟ್ಟೇ ನನಗೆ ಚೆನ್ನ.’

‘ಆಗಲಿ. ಅದನ್ನೇ ಮಾಡಿಸುವ ನಮ್ಮ ಚರ್ಮಾಲಯದಲ್ಲಿ.’

‘ಅಂಥ ವಿಚಿತ್ರ ಮೆಟ್ಟನ್ನು ಅವರು ಮಾಡಬೇಕಾದರೂ ಹೇಗೆ? ನಾಲವಾಡಿಗೆ ಹೋಗಿ ನಾನೇ ತೋರಿಸಲೇ? ಆದರೆ ಒಂದು ದಿನವೆಲ್ಲ ಅದಕ್ಕಾಗಿ ಕೆಲಸ ಹಾಳಾಗುತ್ತದಲ್ಲ.’

‘ನಿನ್ನ ಕೆಲಸ ನಡೆಯಲಿ. ನೀನೂ ಹೋಗಬೇಡ, ಚಮ್ಮಾರನೂ ಇಲ್ಲಿ ಬರಬೇಡ. ಆ ರಟ್ಟು ಇಲ್ಲಿ ತಾ. ನಾನು ಒಂದು ಮಾದರಿ ಮಾಡಿಕೊಡುತ್ತೇನೆ. ಇದರ ಹಾಗೆ ಮಾಡು ಎಂದು ಹೇಳಿ ಕಳಿಸೋಣ.’

ಗಾಂಧೀಜೀ ಓಖಾಯಿ ಮೆಟ್ಟು ನೋಡಿ ಮೂವತ್ತು ವರ್ಷವಾಗಿತ್ತು. ಅದನ್ನು ನೆನೆದುಕೊಂಡು ಒಂದೆರಡು ಗಳಿಗೆಯಲ್ಲಿ ರಟ್ಟಿನ ಓಖಾಯಿಯೊಂದನ್ನು ಮಾಡಿಟ್ಟರು. ಅಂತೂ ಭಾನುಬಾಪಾಗೆ ಓಖಾಯಿ ಬಂತು.

* * *

ಒಬ್ಬರು ಸೂಟುಬೂಟಿನ ಅತಿಥಿ. ಅವರಿಗೆ ಪದ್ಮಾಸನ ಹಾಕಿ ಕೂಡಲು ಬಾರದು; ಅವಸ್ಥೆಯಾಯಿತು. ಗಾಂಧೀಜೀ ಅದನ್ನು ನೋಡಿದರು. ‘ಆ ಚಾಕಾಯಿ ಪೆಟ್ಟಿಗೆ ಇಲ್ಲಿಡು; ಆ ಸಣ್ಣ ಪೆಟ್ಟಿಗೆ ಅದರ ಹಿಂದಿಡು. ಅದು

ಮೇಜು, ಇದು ಸ್ಟೂಲು; ಸರಿ ತಾನೆ' ಎಂದರು. ಅತಿಥಿಗೆ ಎಷ್ಟೋ ಅನುಕೂಲವಾಯಿತು. ಅದನ್ನು ನೋಡಿ ಗಾಂಧೀಜೀ ಹೇಳಿದರು: 'ನಾನು ಪರಿಚಾರಕನ ಕೆಲಸ ಮಾಡಿದ್ದೇನೆ. ಈ ಉಪಾಯಗಳೆಲ್ಲ ನನಗೆ ಗೊತ್ತು.'

* * *

ಗಾಂಧೀಜಿಯ ಜ್ಞಾನದಾಹ ಬಹಳ ವಿಚಿತ್ರವಾದುದು. ಒಂದು ಸಲ ಅವರಿಗೆ ಸರ್ಪಶಾಸ್ತ್ರದ ಹುಚ್ಚು ಹಿಡಿಯಿತು. ಎಲ್ಲೆಲ್ಲಿಗೋ ಬರೆದು ಆ ಶಾಸ್ತ್ರದ ಬಗ್ಗೆ ವಿಷಯ ಸಂಗ್ರಹಮಾಡಿದರು. ಒಂದು ದಿನ ಅವರಿಗೊಬ್ಬ ಬೈರಾಗಿ ಸಿಕ್ಕ. ಆ ಬೈರಾಗಿ ಸರ್ಪಪ್ರವೀಣ. ಅವನಲ್ಲಿ ಎಷ್ಟೋ ಹಾವು ಕಲೆಹಾಕಿದ್ದ. ಅದರಲ್ಲಿ ಒಂದನ್ನು ಹಿಡಿದುಕೊಂಡು ಬಂದ ಆಶ್ರಮಕ್ಕೆ. ಮಹಾನಾಯಕರೆಲ್ಲ ಇದ್ದರು. ಆ ಬೈರಾಗಿಯನ್ನು ಗಾಂಧೀಜೀ ಏನೇನೋ ಪ್ರಶ್ನೆ ಕೇಳುತ್ತಿರುವುದನ್ನು ನೋಡಿ ಅವರಿಗೆಲ್ಲ ಆಶ್ಚರ್ಯ. ಅವನ ಕೈಯಲ್ಲಿ ಆ ಹಾವು - ವಿಷಸರ್ಪ - ಮಣ್ಣುಹುಳುವಿನಂತೆ ಆಡುತ್ತಿತ್ತು. ನೋಡು ನೋಡುತ್ತಿದ್ದ ಹಾಗೆಯೆ ಅವನು ಗಾಂಧೀಜಿಯ ಕತ್ತಿಗೆ ಆ ಹಾವನ್ನು ಮಾಲೆಯಾಗಿ ಸುತ್ತಿದ. ಎಲ್ಲರೂ ಹೋ ಎಂದರು; ಉಸಿರು ನಿಂತಂತಾಯಿತು. ಗಾಂಧೀಜೀ ಮಾತ್ರ ಗಂಭೀರವಾಗಿ ತಣ್ಣಗೆ ಕೂತಿದ್ದರು. ಇದಾದ ಮೇಲೆ ಬೈರಾಗಿ ಹಾವಿನ ಹಲ್ಲು, ಅದರ ವಿಷದ ಚೀಲ ತೋರಿಸಿ, ಯಾರಾದರೂ ಕಡಿಸಿಕೊಳ್ಳುವುದಾದರೆ ಆ ವಿಷವನ್ನು ಹೊರಗೆ ತೆಗೆಯಲು ತಾನು ಸಿದ್ಧ ಎಂದ. ಗಾಂಧೀಜಿಗೆ ಹೊಸ ಪ್ರಯೋಗವೆಂದರೆ ಬಲು ಇಷ್ಟ. ತಾವು ಕಡಿಸಿಕೊಳ್ಳುವುದಾಗಿ ಹೇಳಿದರು. ಅದರಿಂದ ಬಡವರಿಗೆ ಶಾಸ್ತ್ರಜ್ಞಾನ ಪ್ರಚಾರಮಾಡಬಹುದಲ್ಲ. ಆದರೆ ಸುತ್ತಲಿದ್ದವರಿಗೆ ವಿಪರೀತ ಭಯ. ಎಲ್ಲರೂ ಗದ್ದಲ ಮಾಡಿದರು. ಗಾಂಧೀಜೀ ಬೇಡ, ನಾವು ಕಡಿಸಿಕೊಳ್ಳುತ್ತೇವೆ ಎಂದು ಇಬ್ಬರು ಮುಂದೆ ಬಂದರು. ಯಾರಾದರೇನು, ಅದು ಸತ್ಯಾಗ್ರಹಾಶ್ರಮ. ಆ ಹಾವಿಗೂ ಅದು ಗೊತ್ತಾಯಿತೋ ಏನೋ! ಏನು ಮಾಡಿದರೂ ಅದು ಕಡಿಯಲಿಲ್ಲ.

* * *

ಥಕ್ಕರ್‌ಬಾಪಾರ ದಿನಚರಿ ಎಂದರೆ ಎಲ್ಲರಿಗೂ ಗೊತ್ತು. ಅವರ ಬದುಕಿನ ಕನ್ನಡಿ; ದಿನಚರಿಯು ವರದಿ. ೧೫ ವರ್ಷದಿಂದ ಅವಿಚ್ಛಿನ್ನವಾಗಿ ದಿನಚರಿ ಬರೆಯುತ್ತ ಬಂದಿದ್ದಾರೆ. ಗಾಂಧೀಜಿಗೂ ದಿನಚರಿ ಬರೆಯುವ

ರೂಢಿ ಇದೆ. ಗಾಂಧೀ ಸೇವಾಸಂಘದಲ್ಲಿ ದಿನಚರಿ ಬರೆಯಬೇಕೆಂಬ ನಿಯಮ ವಿದೆ. ಕೆಲಸಗಾರರೆಲ್ಲ ದಿನಚರಿ ಬರೆಯಬೇಕೆಂದು ಗಾಂಧೀಜಿಯ ಅಭಿಪ್ರಾಯ.

ಆದರೆ ಅವರ ಅಭಿಪ್ರಾಯದಂತೆ ದಿನಚರಿ ಬರೆಯುವುದೂ ಬಲು ಬಿಗಿಯಾದ ಕಲೆ. ಸತ್ಯ ಕಷ್ಟಸಾಧ್ಯವಾದ ಗುಣವಲ್ಲವೆ. ದಿನಚರಿ ಒಂದು ಬಗೆಯ ಆತ್ಮಸಾಕ್ಷಿ. ನಾವು ಮಾಡಿದ ಕೆಲಸ, ನಮಗೆ ಬಂದ ಯೋಚನೆ, ಅನಿಸಿದ ವಿಚಾರ, ಆಡಿದ ಮಾತು ಎಲ್ಲದರ ಕನ್ನಡಿಯಾಗಿರಬೇಕು. ಕಾಯಾ ವಾಚಾ ಮನಸಾ ನಮ್ಮ ಬದುಕು ಹೇಗಿತ್ತೋ ಅದು ತಿಳಿಯಬೇಕು. ಬರಿ ವಿಚಾರ ಲಹರಿಯ ಸಂಗ್ರಹವಾಗಬಾರದು. ಒಂದು ದಿನ ಆಶ್ರಮವಾಸಿಗಳ ದಿನಚರಿಯ ಪರೀಕ್ಷೆಯಾಯಿತು. ಕೊನೆಗೆ ಎಲ್ಲರನ್ನೂ ಕುರಿತು ಹೇಳಿದರು :

'ನಿಮ್ಮ ದಿನಚರಿಯಲ್ಲಿ ನಿಮ್ಮ ಆರೋಗ್ಯದ ಸಕಲ ವಿಷಯವೂ ಇರಬೇಕು. ಬೆಳಿಗ್ಗೆ ಮಧ್ಯಾನ್ಹ ಸಂಜೆ ಯಾವ ಹೊತ್ತಿನಲ್ಲಿ ಏನು ಕೆಲಸಮಾಡಿದಿರೋ ಬರೆಯಬೇಕು. ಒಳ್ಳೆಯದಿರಲಿ ಕೆಟ್ಟದಿರಲಿ ನಿಮ್ಮ ವಿಚಾರ-ಸ್ವಪ್ನ, ನಿಮ್ಮ ಕರ್ಮಗಳ ಸಂಪೂರ್ಣ ವರದಿಯಾಗಬೇಕದು. ನಿಮ್ಮ ಮನಸಿನ ಕನ್ನಡಿಯಾಗಬೇಕು. ಈ ಆತ್ಮದರ್ಪಣವು ನಿಮ್ಮ ಆತ್ಮಶುದ್ಧಿಗೆ ಬಹಳ ಸಹಾಯಕಾರಿ. ಆರೋಗ್ಯವಂತರಾಗಿರಬೇಕಾದರೆ – ಮನುಷ್ಯರಿಗೆ – ಕಾಲ ಕಾಲಕ್ಕೆ ಹೊಟ್ಟೆ ತನ್ನ ಕೆಲಸವನ್ನು ಮಾಡಬೇಕಲ್ಲವೆ. ಅದು ದೇಹ ಪರಿಶುದ್ಧಿಯಾಯಿತು. ಈ ದೇಹ ಪರಿಶುದ್ಧಿ ಮೈಗೆ ಹೇಗೆ ಅಗತ್ಯವೋ ಹಾಗೆಯೆ ಆತ್ಮದ ಆರೋಗ್ಯಕ್ಕೆ ಆತ್ಮ ಪರಿಶುದ್ಧಿ ಅಷ್ಟಷ್ಟುಮಟ್ಟಿಗೆ ಅನಗತ್ಯವಾಗುತ್ತದೆ. ಹೀಗೆಂದರೆ ಅರ್ಥ: ಆತ್ಮ ಪರಿಶುದ್ಧಿಯಲ್ಲಿಯೇ ದೇಹಶುದ್ಧಿಯೂ ಸೇರಿದೆ ; ಅದು ಇದ್ದಲ್ಲಿ ಇದು ಇದ್ದೇ ಇರುತ್ತದೆ ಎಂದು. ಯೋಗಿಯ ಮೈಯಿಂದ ಪರಿಮಳ ಸೂಸುತ್ತದೆ ಎಂದು ಕೇಳಿಲ್ಲವೆ ನಾವು ? ದುರ್ವಾಸನೆ ಯಿಲ್ಲದಿರುವುದೇ ಪರಿಮಳ ಎಂದು ಅದಕ್ಕೆ ಅರ್ಥ.'

* * *

ಸತ್ಯವೆಂದರೆ ಬರಿಯ ಅಲಂಕಾರವಲ್ಲ ಗಾಂಧೀಜಿಗೆ; ದಿನ ಬದುಕಿನ ಉಸಿರು. ಮಾತು ಮಾತಿನಲ್ಲಿಯೂ ಕೃತಿ ಕೃತಿಯಲ್ಲಿಯೂ ಸತ್ಯವಂತನ ಸತ್ಯಸಂಧತೆ ಪರಿಮಳಿಸಬೇಕು. ಬಂದದ್ದೆಲ್ಲ ಬರಲಿ, ಎನ್ನ ನಾಲಗೆ ಸುಳ್ಳೊಂದು ಹೇಳದಿರಲಿ ಎಂಬ ಅಸಿಧಾರಾವ್ರತ ಅದು.

೧೯೧೯ರಲ್ಲಿ ಮುಂಬಯಿಯಲ್ಲಿ ಸತ್ಯಾಗ್ರಹ ಸಮಿತಿಯೊಂದು ಏರ್ಪಾಡಾಯಿತು. ಶ್ರೀ. ಶಂಕರಲಾಲ ಬೇಂಕರ್, ಉಮಾರ್ ಸೊಭಾನಿ ಇಬ್ಬರೂ ಕಾರ್ಯದರ್ಶಿಗಳು. ಉಮಾರ್ ಸೊಭಾನಿ ಆಗರ್ಭ ಶ್ರೀಮಂತರು, ಸೇವಾಸಕ್ತರು. ಅವರ ಉತ್ಸಾಹ ಅವರದೇ ಸರಿ; ಬಿರುಗಾಳಿಯಿದ್ದಂತೆ. ಮುಂಬಯಿಯ ಸಾರ್ವಜನಿಕ ಜೀವನಕ್ಕೆ ಅವರೇ ಸೂತ್ರಧಾರರು. ಇವರು ಕಿರೀಟ ತೊಡಿಸಿದರೆ ನಾಯಕ, ಇಲ್ಲದಿದ್ದರೆ ಇಲ್ಲ – ಹೀಗಿತ್ತು. ಆ ಹೊತ್ತಿಗೆ ಗಾಂಧೀಜೀ ಮುಂಬಯಿಯಲ್ಲಿ ತಮ್ಮ ಪ್ರಭಾವ ಬೀರಿದ್ದರು. ಹೋಂ ರೂಲ್ ಲೀಗ್‌ಗೂ, ಸತ್ಯಾಗ್ರಹ ಸಮಿತಿಗೂ ಅವರೇ ಅಧ್ಯಕ್ಷರು.

ಸಮಿತಿಯ ಕೆಲಸಕ್ಕಾಗಿ ಉಮಾರ್ ಸೊಭಾನಿ ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸಬೇಕಾಯಿತು. ಇಂತಿಷ್ಟು ಪ್ರತಿ ಎಂದು ಅದರ ಮೇಲೆ ಅಚ್ಚಿಸಿದುದಕ್ಕಿಂತ ಕೆಲವು ಸಾವಿರ ಪ್ರತಿ ಹೆಚ್ಚಾಗಿ ಅಚ್ಚಿಸಿಕೊಂಡರು. ಅಷ್ಟು ಪ್ರತಿ ಮುಟ್ಟುಗೋಲಾದರೂ ಇವು ಉಳಿಯಲಿ ಎಂಬಾಸೆ. ಗಾಂಧೀಜಿಗೆ ಇದು ತಿಳಿದರೆ ಏನು ಅನರ್ಥವಾದಿತೋ ಎಂದು ಗೆಳೆಯರು ಸೊಭಾನಿಗೆ ತಿಳಿಸಿದರು. ರಾತ್ರೋ ರಾತ್ರಿ ಹೆಚ್ಚಾಗಿ ಅಚ್ಚಿಸಿದ್ದ ಪ್ರತಿಗಳನ್ನು ಸಿವರಿಗೆ * ಒಯ್ದು ಸುಟ್ಟುಹಾಕಿದರು. ಇಷ್ಟಾದರೂ ಗಾಂಧೀಜಿಗೆ ಇದು ತಿಳಿಯಿತು. 'ಹಾಗೆ ಹೆಚ್ಚು ಅಚ್ಚಿಸಿದುದು ತಪ್ಪು; ಪೋಲೀಸ್ ಕಮಿಷನರ್ ಬಳಿ ಹೋಗಿ ಮಾಡಿದ ತಪ್ಪನ್ನು ಒಪ್ಪಿಕೊಳ್ಳಬೇಕು' ಎಂದು ಉಮಾರ್ ಸೊಭಾನಿಗೆ ಗಾಂಧೀಜೀ ಹೇಳಿದರು.

ಉಮಾರ್ ಸೊಭಾನಿ ಬಲು ಗಡುಸು ಮನುಷ್ಯ; ಮುಂಗೋಪಿ ಬೇರೆ. ಆ ಮಾತು ಕೇಳಿ ಎಷ್ಟು ಗೊಣಗಿದನೊ, ಹಾರಾಡಿದನೊ; ಆತನಿಗೇ ಅದು ಸಾಧ್ಯ. ಆದರೇನು ಈ ಆರ್ಭಟ ಗಾಂಧೀಜಿಯ ಮುಂದೆ ನಡೆಯಲಿಲ್ಲ. ಅದು ಸತ್ಯ; ಅದೇ ಸರಿ. ಹಾಗೆ ನಡೆಯದಿದ್ದರೆ ತಮಗೆ ದಳಪತಿತನ ಬೇಡ. ಸೊಭಾನಿಗೆ ಬಾಯಲ್ಲಿ ಬಿಸಿನೊರೆ ಬಂತು. ಆದರೇನು?

ಆ ರಾಜಠೀವಿಯ ಪುರುಷ, ಪರ್ವತೋನ್ನತ ಗಂಭೀರ ವ್ಯಕ್ತಿ ಬಂದು

---

* ಮುಂಬಯಿ ಹೊರಗೆ ಗಿರಣಿಗಳ ಬೀಡು. ೧೯೪೦ರ ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಡೆದ ಸ್ಥಳ.

ತನ್ನದು ತಪ್ಪೆಂದು ಒಪ್ಪಿಕೊಂಡಾಗ ಆ ನೋಟವನ್ನು ನೋಡಿ, ಪೋಲೀಸ್ ಕಮಿಷನರಿಗೆ ಒಂದು ಕಡೆ ಅಚ್ಚರಿ, ಇನ್ನೊಂದು ಕಡೆ ಮುಗುಳು ನಗೆ.

* * *

ಗಾಂಧೀಜಿಯ ಹರಿಜನ ಪ್ರವಾಸ; ಮದರಾಸು. ನಿಮ್ಮ ಹಸ್ತಾಕ್ಷರ ಕೊಡಿಯೆಂದು ಐದು ರೂಪಾಯಿ ಕೊಟ್ಟಳು ಒಬ್ಬ ಹುಡುಗಿ.

'ಊಹುಂ, ಒಂದು ಬಳೆ ಕೊಟ್ಟರೆ' ಎಂದರು ಗಾಂಧಿಜೀ. ಆ ಹುಡುಗಿ ಒಂದಲ್ಲ, ಎರಡು ಬಳೆ ತೆಗೆದುಕೊಟ್ಟಳು; ಐದು ರೂಪಾಯನ್ನೂ ಕೊಟ್ಟಳು.

'ಈ ಬಳೆ ಕೊಡಲಿಕ್ಕೆ ನಿಮ್ಮ ತಂದೆತಾಯಿ ಒಪ್ಪಿದಾರೆಯೆ, ಅವರನ್ನು ಕೇಳಿದೀಯ? ಬೇಕಾದರೆ ಈ ಬಳೆ ಹಿಂದಕ್ಕೆ ತೆಗೆದುಕೊ ತಂಗೀ.'

ನೆನಪಿಗೆ ಗುರುತಾಗಿರಲಿ ಎಂದು ಒಂದು ಬಳೆ ತೆಗೆದುಕೊಂಡಳು ಆ ಹುಡುಗಿ.

'ಹೌದು. ನಿಮ್ಮ ತಂದೆ ತಾಯಿಗೆ ಹೇಳಿ ಹೊಸ ಬಳೆ ಮಾಡಿಸಿ ಕೊಳ್ಳುತೀಯೇನು?'

'ಇಲ್ಲ'; ಉತ್ತರ ದೃಢಕಂಠದಿಂದ ಬಂತು.

'ಹಾಗಾದರೆ ಬಳೆ ನನಗಿರಲಿ.' ಹುಡುಗಿ ನಗುನಗುತ್ತ ಹೊರಟು ಹೋದಳು.

ಇನ್ನೊಬ್ಬ ಹುಡುಗಿ ಹೇಳಿದಳು: 'ನಮ್ಮ ತಾಯಿತಂದೆಯನ್ನು ಕೇಳದೆ ನಾನೇನು ತಾನೆ ಕೊಡಲಿ?'

'ಕೊಡಬೇಕಾಗಿಲ್ಲ. ನೋಡು; ಏನು ಮಾಡಲಿಕ್ಕೂ ಎಲ್ಲ ಸ್ವಾತಂತ್ರ್ಯ ನಿಮ್ಮ ತಂದೆಗೆ, ನಿನಗೇನೂ ಇಲ್ಲೇ ಇಲ್ಲೇನು?'

ಇನ್ನೊಬ್ಬಳು ಹೊಸ ಮದವಣಗಿತ್ತಿ, 'ರೂಪಾಯಿ ಕೊಟ್ಟೇನು, ಒಡವೆ ಮಾತ್ರ ಕೊಡಲಾರೆ. ಅದನ್ನೂ ಕೊಡಬಹುದು; ಕೊಟ್ಟರೆ ಮತ್ತೆ ಮಾಡಿಸಿ ಕೊಳ್ಳುತ್ತೇನೆ, ನಿಮಗದು ಇಷ್ಟವಿಲ್ಲ. ಮತ್ತೆ ಒಡವೆ ತೊಡುವುದಿಲ್ಲ ಅನಿಸಿ ದಾಗ ಒಡವೆ ಕೊಡುತ್ತೇನೆ' ಎಂದಳು.

'ಅದೇ ಸರಿ' ಎಂದರು ಗಾಂಧೀಜೀ. 'ನಿಮ್ಮ ಹಣ ನನಗೆ ಬೇಡ. ಕೇಳಿದರೆ ನಿಮ್ಮ ತಂದೆ ಕೊಡರೆ ನನಗೆ. ನಿಮ್ಮನ್ನು ನಾ ಬೇಡುವುದು ಒಡವೆ. ಅದಕ್ಕೊಂದು ಷರತ್ತುಂಟು; ಕೊಟ್ಟ ಒಡವೆ ಮತ್ತೆ ಮಾಡಿಸಿ

ತೊಡಬಾರದು. ನಿನ್ನ ಮನಸ್ಸು ಹಣ್ಣಾಗಿ ನೀನೇ ಬಂದು ಒಡವೆ ನನ್ನ ಬೊಗಸೆಯಲ್ಲಿ ಹಾಕುವ ದಿನಕ್ಕಾಗಿ, ಎಷ್ಟೇ ಕಾಲವಾಗಲಿ, ತಾಳ್ಮೆಯಿಂದ ಇದಿರು ನೋಡಬಲ್ಲೆ ನಾನು.'

* * *

ಹೆಂಗಸರ ಮೈಮೇಲಿನ ಒಡವೆ ಗಾಂಧೀಜೀ ಸುಲಿದಹಾಗೆ ಯಾರೂ ಸುಲಿದಿಲ್ಲ. ಗಾಂಧೀಜಿಯ ನುಡಿಯಲ್ಲಿ ತಮ್ಮ ಅಖಂಡತ್ಯಾಗ ಶಕ್ತಿಯನ್ನು ಹೆಣ್ಣು ಜೀವಕ್ಕೆ ತೋರಿಸುವ ಮಂತ್ರವಿದೆ. ಅಂಥ ನೋಟ ಬೇರೆ ಬದುಕಿನಲ್ಲಿ ಕಾಣದು. ಕಾಣದವರು ಅದನ್ನು ನಂಬುವುದೂ ಕಷ್ಟ.

ಬಡಗಾರ ಎಂಬುದು ಮಲಬಾರಿನಲ್ಲಿ ಒಂದೂರು. ಅಲ್ಲಿ ಒಂದು ಬಹಿರಂಗ ಸಭೆ. ಜನ ಬಹಳ ನೆರೆದಿದ್ದರು. ಗಾಂಧೀಜೀ ತಮ್ಮ ಮೋಡಿ ಹಾಕಿದರು; ಹಾಕಿ, ಒಡವೆ ಕೊಡಿರೆಂದು ಸೆರಗೊಡ್ಡಿ ಬೇಡಿದರು. ಮಳೆ ಸುರಿದಂತಾಯಿತು ಒಂದು ಗಳಿಗೆ. ಕೌಮುದಿ ಹದಿನಾರು ವರುಷದ ಹುಡುಗಿ. ಬಾಪೂಜಿಯ ಬಳಿಗೆ ಬಂದು ತನ್ನ ಕೈಯ ಬಂಗಾರದ ಬಳೆ ತೆಗೆದು ಅವರಿಗೆ ಕೊಟ್ಟು ಅವರ ಹಸ್ತಾಕ್ಷರ ಬೇಡಿದಳು. ಬಾಪೂ ಬರೆಯ ತೊಡಗಿದಾಗ ಕೌಮುದಿಯ ಇನ್ನೊಂದು ಕೈಯೂ ಬರಿದಾಯಿತು. ಆಕೆಯ ಕೈಗೆ ಇದ್ದುದೇ ಒಂದೊಂದು ಬಳೆ. ಬಾಪೂ ನೋಡಿದರು. 'ಒಂದೇ ಸಾಕಮ್ಮ. ಒಂದಕ್ಕೇ ಹಸ್ತಾಕ್ಷರ ಕೊಡುತ್ತೇನೆ ತಾಯಿ' ಎಂದರು. ಅದಕ್ಕೆ ಉತ್ತರವಾಗಿ ತನ್ನ ಕೊರಲಿಗೆ ಕೈಹಾಕಿದಳು ಹುಡುಗಿ. ಕೊರಲಲ್ಲಿದ್ದ ಬಂಗಾರದ ಸರ ತೆಗೆಯುವುದು ಸುಲಭವಾಗಿರಲಿಲ್ಲ. ಆಕೆಯ ನಿಡಿದಾದ ಜಡೆಯಿಂದ ಅದನ್ನು ಬಿಡಿಸಿ ತೆಗೆಯಬೇಕಾಗಿತ್ತು. ಆ ಮಲಬಾರೀ ಮಗು ಅಷ್ಟು ಜನಸಂದಣಿಯಲ್ಲಿಯೂ ನಾಚದೆ ಅದನ್ನು ತೆಗೆದೇ ಬಿಟ್ಟಳು. ಜನ ಹರುಷದಲ್ಲಿ ಓಲಾಡಿದರು.

ಬಾಪೂಗೆ ಅಚ್ಚರಿಯಾಯಿತು. 'ಅಲ್ಲಮ್ಮ; ನಿಮ್ಮ ತಂದೆ ತಾಯಿಯನ್ನು ಕೇಳಬೇಡವೆ ಮಗು?' ಎಂದರು. ಕೌಮುದಿ ಮರುಮಾತೇ ಆಡಲಿಲ್ಲ. ಆಕೆಯ ತ್ಯಾಗ ಇನ್ನೂ ಮುಗಿದಿರಲಿಲ್ಲವೋ ಏನೋ! ಕಿವಿಗೆ ಕೈಹಾಕಿದಳು. ಜನಕ್ಕೆ ಇದೆಲ್ಲ ಮಿಂಚಿನಂತೆ ಕಣ್ಣು ಕುಕ್ಕಿತು. ಕಲ್ಲುಗೊಂಬೆಗಳಾದರು. ಸಭೆಯೆಲ್ಲ ಒಂದೇ ಉಸಿರು. ಕೌಮುದಿ ಕಿವಿಯ ಓಲೆಯನ್ನೂ ಕಳಚಿದಳು.

ಜನಸ್ತೋಮವೆಲ್ಲ ಒಂದೇಸಲ ಹೋ ಎಂದರು. ಆನಂದದ ಉಬ್ಬರ ತಡೆಯಲಾಗಲಿಲ್ಲ. ಕುಣಿದಾಡಿದರು. ಬಾಪೂಗೆ ಯಾರೋ ಹೇಳಿದರು. ಆ ಒಡವೆಗಳನ್ನೆಲ್ಲ ಹರಾಜು (ಲಿಲಾವು) ಮಾಡುತ್ತ ನಿಂತಿದ್ದಾತನೇ ಕೌಮುದಿಯ ತಂದೆ. ಮಗಳ ಒಡವೆ ಒಂದೊಂದಾಗಿ ಆತನೇ ಹರಾಜು ಮಾಡುತ್ತಿದ್ದ. ಆತನ ಕಣ್ಣಿನಲ್ಲಿ ಒಂದು ಅಲೌಕಿಕಾನಂದದ ಹೊಳಪು ಮಿನುಗುತ್ತಿತ್ತು. ಬಾಪೂಗೆ ತಡೆಯಲಾಗಲಿಲ್ಲ, ಆದರೂ ಕೌಮುದಿಗೆ ಹೇಳಿದರು. 'ಈಗ ಒಡವೆಯೇನೋ ಕೊಟ್ಟೆ ಕೌಮುದಿ. ಮತ್ತೆ ಅವನ್ನು ಎಂದೂ ಇಡದಿದ್ದರೆ ಈ ತ್ಯಾಗಕ್ಕೆ ಬೆಲೆ ತಾಯಿ.' ಕೌಮುದಿಗೆ ವಯಸ್ಸು ಎಳದು. ಆದರೂ ಹೃದಯ ಬೆಳೆದದ್ದು; ದೃಢಕಂಠದಿಂದ ಆ ದೇವತೆ ತಥಾಸ್ತು ಎಂದಳು.

ಇಲ್ಲಿಗೆ ಬಾಪೂಜಿಯ ಮನಸಿನ ಅಣೆಕಟ್ಟು ಒಡೆದು ಹೋಯಿತು. ಹಸ್ತಾಕ್ಷರದ ಪುಸ್ತಕ ಕೌಮುದಿಗೆ ಕೊಡುವಾಗ ಎದೆ ತುಂಬಿ ಬಂತು. 'ಕೌಮುದಿ, ನೀನು ಕಳಚಿಕೊಟ್ಟ ಒಡವೆಗಿಂತ ನಿನ್ನ ತ್ಯಾಗವೇ ಹಿರಿಯ ಒಡವೆ, ತಂಗಿ' ಎಂದರು.

* * *

ತಿರುವಹೀಂದ್ರಪುರದಲ್ಲಿ ದರ್ಶನಕ್ಕೆ ಬಂದ ಜನರ ನಡುವೆ ಹದಿನೇಳು ವರ್ಷದ ಚೆಲುವೆಯೊಬ್ಬಳು ನಿಂತಿದ್ದಳು. ಇದಿರಿಗೆ ಬಂದು ನಿಂತಾಗ ಗಾಂಧೀಜೀ ಕೇಳಿದರು : 'ನೀನಾರು?'

'ಒಬ್ಬ ಚಿಕ್ಕ ಹುಡುಗ'; ಆಕೆಯ ಉತ್ತರ.

'ಚಿಕ್ಕ ಹುಡುಗಿಗೆ ಇಷ್ಟೆಲ್ಲ ಒಡವೆಯೇಕೆ?' ಆಕೆಯ ಮೈಮೇಲಿದ್ದ ಒಡವೆ ನೋಡಿದರು ಗಾಂಧೀಜೀ.

ಮೀನಾಕ್ಷಿ ಹೇಳಿದಳು: 'ನಾನು ಯಾವಾಗಲೂ ಚಿಕ್ಕ ಹುಡುಗಿಯಾಗಿಯೇ ಇರಬೇಕು; ಅದಕ್ಕೆ.'

'ಹಾಗಿದ್ದರಂತು ಒಡವೆ ತೊಡಲೇಬಾರದು. ಕೌಮುದಿಯ ಕತೆ ಕೇಳಿಲ್ಲವೆ?' ಆ ಕತೆಯನ್ನು ತಾವೇ ತಿಳಿಸಿ ಹೇಳಿದರು. 'ನಿನಗೆ ಹದಿನೇಳು, ಕೌಮುದಿಗೆ ಹದಿನಾರು; ನಿನಗಿಂತ ಒಂದು ವರ್ಷ ಚಿಕ್ಕವಳು. ಆದರೂ ತನ್ನ ಒಡವೆಯೆಲ್ಲ ಕೊಟ್ಟಳು.'

ಮೀನಾಕ್ಷಿಯ ಕಣ್ಣು ತಳತಳಿಸಿದವು. 'ನಾನೂ ನಿಮಗೆ ಒಡವೆ ಕೊಡುತ್ತೇನೆ' ಎಂದಳು.

'ನಿಮ್ಮ ತಾಯಿ ತಂದೆಯನ್ನು ಕೇಳು.'

'ಅವರನ್ನು ಒಪ್ಪಿಸುವ ಭಾರ ನನ್ನದು.'

'ಹೌದು, ಮಲಯಾಳಿ ಹುಡುಗಿಯರು ದಿಟ್ಟರು, ಸ್ವತಂತ್ರರು. ಆಗಲಿ, ಒಡವೆ ಕೊಡು. ಒಡವೆ ಬಿಟ್ಟುಬಿಡಲಿ ಎಂದು ಹುಡುಗಿಯರಿಗೆಲ್ಲ ಮೋಡಿ ಹಾಕುತೇನೆ ನಾನು. ಈ ತ್ಯಾಗ ಹುಡುಗಿಯರಿಗೆ ಬಲು ಕಷ್ಟ; ಬಲ್ಲೆ. ಲೋಕದಲ್ಲಿ ನಾನಾತರದ ಅಲಂಕಾರ ಇವೆ, ರೂಢಿ ಇವೆ. ನನ್ನಮಟ್ಟಿಗೆ ಕೈಯಲ್ಲಿದ್ದರೆ ಅರ್ಥ, ಗುಣವಿದ್ದರೆ ಅಲಂಕಾರ.'

'ಹಾಗೇ ಆಗಲಿ. ನೀವು ಹೇಳಿದಂತೆಯೆ ಸರಿ.'

'ಬಲು ಚೆನ್ನ. ಆದರೂ ಈ ರಾತ್ರಿ ಯೋಚನೆಮಾಡಿ ನೋಡು.'

ಮರುದಿನ ಬಂದಾಗ ಮೀನಾಕ್ಷಿಯ ಗುರುತೆ ಸಿಗಲಿಲ್ಲ. ಆಕೆಯ ಮೈಮೇಲಿನ ಒಡವೆಯೆಲ್ಲ ಮಾಯವಾಗಿದ್ದವು. ಮಹದೇವ ದೇಸಾಯಿ ಕೇಳಿದರು: 'ನಿನ್ನ ಒಡವೆಗಳೆಲ್ಲಿ?'

'ಎಲ್ಲಾ ಕೊಟ್ಟುಬಿಟ್ಟೆ.'

'ಗಾಂಧೀಜಿಗೆ?'

'ಅಲ್ಲ; ಅದು ಸಾಧ್ಯವಿರಲಿಲ್ಲ. ನಮ್ಮ ತಂದೆಗೆ ತುಂಬ ಸಾಲ; ನನ್ನ ಒಡವೆ ಬೇರೆಯವರಿಗೆ ಕೊಡಲು ಸಾಧ್ಯವಿಲ್ಲ. ಆದರೆ ಮತ್ತೆಂದೂ ಒಡವೆ ತೊಡೆನೆಂದು ಸಂಕಲ್ಪಮಾಡಿದೇನೆ.'

'ಇದಕ್ಕೆ ನಿಮ್ಮ ತಂದೆ ತಾಯಿ ಏನೆನ್ನುತ್ತಾರೆ?'

'ನಮ್ಮ ತಂದೆಗೆ ಸಮಾಧಾನವೆ; ತಾಯಿಗೆ ಮಾತ್ರ ಸಮಾಧಾನವಿಲ್ಲ.'

ಮಧ್ಯಾಹ್ನ ಆ ಕುಟುಂಬವೆಲ್ಲ ಗಾಂಧೀಜಿಯ ಬಳಿಗೆ ಬಂದರು. ಮೀನಾಕ್ಷಿ ಗಾಂಧೀಜಿಗೆ ಒಂದು ಬಂಗಾರದ ಬಳೆ, ಸರ ಕೊಟ್ಟಳು. ಗಾಂಧೀಜಿಗೆ ಅವಳ ತಂದೆಯ ಸಾಲದ ಸುದ್ದಿ ಗೊತ್ತಿತ್ತು. 'ನೀವೀ ಒಡವೆ ಕೊಡಬೇಡಿ. ಮೀನಾಕ್ಷಿ ಬಿಟ್ಟುಕೊಟ್ಟ ಒಡವೆಗಳಿಂದ ಸಾಲ ತೀರಿಸಿರಿ. ತಿರುಗಿ ಅವಳೆಂದಿಗೂ ಒಡವೆ ಕೇಳುವುದಿಲ್ಲ.'

ಮೀನಾಕ್ಷಿಯ ಕೆನ್ನೆಯ ಮೇಲೆ ಮುತ್ತಿನಹನಿ ಸುರಿಯುತ್ತಿದ್ದವು. ಕಂಠ ಬಿಗಿದು ಬಂದಿತ್ತು. ಜೀವವಾನದ ವ್ರತವನ್ನೆ ತೊಟ್ಟಿದ್ದಳಾಕೆ.

ನಿಮ್ಮ ಮಗಳು ತೊಟ್ಟ ವ್ರತ ಮಹಾವ್ರತ, ತಾಯಿ. ನೀವು ಅವಳನ್ನು ಹರಸಬಾರದೆ?' ಗಾಂಧೀಜೀ ಮೀನಾಕ್ಷಿಯ ತಾಯಿಗೆ ಹೇಳಿದರು.

'ಮದುವೆಯೊಂದಿದೆಯಲ್ಲ. ಒಡವೆಯಿಲ್ಲದ ಹುಡುಗಿಯನ್ನು ಯಾರು ಮದುವೆಯಾಗುತ್ತಾರೆ?'

ಆಕೆಯನ್ನು ಸಮಾಧಾನಮಾಡುತ್ತ ಗಾಂಧೀಜೀ ಹೇಳಿದರು: 'ಮದುವೆ ಚಿಂತೆ ನಿಮಗೇಕೆ ತಾಯಿ. ಒಂದಲ್ಲ, ಐವತ್ತು ವರ ನಾ ತರುತ್ತೇನೆ; ನಿಮಗೆ ಬೇಕಾದವನನ್ನು ಆರಿಸುವಿರಂತೆ.'

ತಾಯಿ ಮೀನಾಕ್ಷಿಯನ್ನು ಹರಸಿದಳು. ಎಂಥ ಮನಕರಗುವ ನೋಟ; ಎಂಥ ದೃಢ ಸಂಕಲ್ಪ. ಇದೇ ಅಲ್ಲವೆ ಬಾಳ ಸವಿ, ಬದುಕಿನ ಭಾಗ್ಯ!'

* * *

ಗಾಂಧೀಜೀ ಪ್ರಾಯೋಪವೇಶಮಾಡಿ ಉಪವಾಸ ಕೈಗೊಂಡಿದ್ದರು. ಇಪ್ಪತ್ತೊಂದು ದಿನದ ದೀರ್ಘೋಪವಾಸ. ಜೀವ ಕಳೆಗೊಂಡಿದ್ದರೂ ಮೈ ದಣಿವಾಗಿದೆ, ವೈದ್ಯರಿಗಾದರೂ ತೋರಿಸೋಣ ಎಂದು ದೀನಬಂಧು ಆಂಡ್ರೂಸ್ ಹೇಳಿದರು. ಗಾಂಧೀಜೀ ಆ ಸಲಹೆಗೆ ಕಿವಿಗೊಡಲಿಲ್ಲ. ದೀನ ಬಂಧು ನಾಲ್ಕಾರು ಸಲ ಹೇಳಿದರು. ಗಾಂಧೀಜೀ ಅವರನ್ನು ಮೂದಲಿಸಿ ಹೇಳಿದರು:

'ದೇವರಲ್ಲಿ ಇಷ್ಟು ಅಪನಂಬಿಗೆಯೆ? ಅವನು ವಾಸಿಮಾಡಲಾರದು ದನ್ನು ವೈದ್ಯರು ಮಾಡಬಲ್ಲರೆ? ಅವನೇ ಅಲ್ಲವೆ ಸರ್ವರೋಗಹರ. ಅವನ ಚಿತ್ತ ಎಂಬ ಶ್ರದ್ಧೆಯಿದ್ದರೆ ಯಾವ ವೈದ್ಯನೂ ಬೇಡ.'

ದೀನಬಂಧುವಿಗೆ ಹೊಸದೊಂದು ಬೆಳಕು ಕಂಡಂತಾಯಿತು.

* * *

ದೆಹಲಿಯಲ್ಲಿ ನಡೆದ ಸಂಗತಿ. ಒಬ್ಬ ಹೆಂಗಸಿಗೆ ತೀರ ಕೊನೆಯ ಕಾಲ. ರೋಗಕ್ಕೆ ಸೋಲದೆ ಹೋರಾಡಿ ಹೋರಾಡಿ ಆಕೆ ತೀರ ಬಳಲಿ ಹೋಗಿದ್ದಳು. ಈ ಲೋಕದ ಸಂಬಂಧ ಹರಿದಂತೆ ಆಗಿತ್ತು. ಮೈಯಲ್ಲಿ ಏನೂ ಉಳಿದಿರಲಿಲ್ಲ; ಬರಿ ಉಸಿರೊಂದು ಆಡುತ್ತಿತ್ತು. ಪರಲೋಕ

ಸೋಪಾನವೆಂದು ರಾಮನಾಮ ಜಪವೊಂದನ್ನು ಮಾತ್ರ ನಡೆಸಿದ್ದಳು. ಕೊನೆಯ ಗಳಿಗೆಗೆ ಗಾಂಧೀಜಿಯ ಪರಕೆ ಪಡೆದು ಕಣ್ಣು ಮುಚ್ಚಬೇಕೆಂದು ಆಕೆಗೆ ತುಂಬ ಆಸೆ. ಅವರ ದರ್ಶನವಾದೀತೆ ಎಂದು ವಿಚಾರಿಸಿದಳು.

ಗಾಂಧೀಜೀ ದೆಹಲಿಯ ಬಳಿ ಎಲ್ಲೂ ಇರಲಿಲ್ಲ. ಅವರ ದರ್ಶನ ಹೇಗೆ ಆಗಬೇಕು. ಈ ಮಾತು ಹೇಳಿದರೆ ಸಾಯುವ ಜೀವ ನೊಂದುಕೊಂಡೀತು ಎಂದು 'ದೇವರ ಚಿತ್ತ ಹಾಗಿದ್ದರೆ ಗಾಂಧೀಜಿಯ ದರ್ಶನವಾದೀತು, ನೋಡೋಣ' ಅಂದರು ಬಳಿಯಿದ್ದವರು.

ಎರಡು ದಿನದಲ್ಲೆ ಸುದ್ದಿ ಬಂತು: ಕಾನ್‌ಪುರದಿಂದ ಅಲಹಾಬಾದಿಗೆ ದೆಹಲಿ ಮಾರ್ಗವಾಗಿಯೆ ಗಾಂಧೀಜೀ ಹೋಗುತ್ತಾರೆ. ಅವರು ಬರುವ ರೈಲು ಬೆಳಗಿನ ಜಾವ ನಾಲ್ಕು ಗಂಟೆಯದು. ಐದು ಗಂಟೆಗೆ ದೆಹಲಿ ಬಿಡಬೇಕು. ಒಂದೇ ಒಂದು ಗಂಟೆಯ ಹೊತ್ತು ಅವಕಾಶ. ಆ ಹೆಂಗಸು ಇದ್ದದ್ದು ದೆಹಲಿಯಿಂದ ಹತ್ತುಮೈಲಿ ದೂರದಲ್ಲಿ. ಒಂದು ಗಂಟೆಯ ಹೊತ್ತಿನಲ್ಲಿ ಆಕೆಗೆ ದರ್ಶನಕೊಟ್ಟು ಮಾತಾಡಿ ಬರುವುದು ಸಾಧ್ಯವಿರಲಿಲ್ಲ.

ಆಗ ಪೂರಾ ಚಳಿಗಾಲ. ದೆಹಲಿಯ ಚಳಿ, ಕೆಟ್ಟಗಾಳಿ ಬೇರೆ. ಗಾಳಿ ತಾಕದ ಪೆಟ್ಟಿಗೆ - ಮೋಟಾರುಗಳು ಆಗ ನಮ್ಮ ದೇಶದಲ್ಲಿರಲಿಲ್ಲ. ಆ ಕೆಟ್ಟ ಗಾಳಿ ಚಳಿಯಲ್ಲಿ ಆ ಬೆಳಗಿನ ಹೊತ್ತು ಇಪ್ಪತ್ತು ಮೈಲಿ ಪಯಣವೆಂದರೆ ಗಾಂಧೀಜಿಯ ಆರೋಗ್ಯಕ್ಕೆ ಅಪಾಯ. ಏನು ಮಾಡಬೇಕು? ಆಕೆಗಂತೂ ಗಾಂಧೀಜೀ ಬರುವ ಸುದ್ದಿಯೂ ತಿಳಿಯದು. ದರ್ಶನವಾಗಬೇಕೆಂಬ ಆಸೆ ಮಾತ್ರ ಮನಸ್ಸಿನಲ್ಲಿ ತುಂಬ ಇತ್ತು. ಆದರೆ ಹೇಗೆ ಮಾಡಬೇಕು?

ಗಾಂಧೀಜೀ ನಾಲ್ಕು ಗಂಟೆಗೆ ಗಾಡಿಯಿಂದ ಇಳಿದರು. ಅಂಜುತಂಜುತ ಶ್ರೀ. ಘನಶ್ಯಾಮದಾಸ ಬಿರ್ಲಾ ಕೇಳಿದರು: 'ಇವೊತ್ತೊಂದು ದಿನ ಇಲ್ಲಿ ನಿಂತರಾದೀತೆ?' ಗಾಂಧೀಜೀ ಹೇಳಿದರು, 'ಬಹಳ ಕಷ್ಟ ನಿಲ್ಲುವುದು.' ಘನಶ್ಯಾಮದಾಸರ ಮೋರೆ ಬಾಡಿತು. ಆಕೆ ಎಷ್ಟು ನಿರಾಶಳಾಗುತ್ತಾಳೊ ಅವರೂ ಬಲ್ಲರು.

ಇದನ್ನು ನೋಡಿ ಗಾಂಧೀಜೀ ಕೇಳಿದರು: 'ನಾನೇಕೆ ನಿಲ್ಲಬೇಕು? ಏನು ಸಮಾಚಾರ?' ಘನ ಶ್ಯಾಮದಾಸರು ಇದ್ದ ಸಂಗತಿ ತಿಳಿಸಿದರು. 'ಚಲೋ, ಅಭಿ ಚಲೊ – ನಡೆ, ಈಗಲೆ ಹೊರಡು' ಎಂದರು ಗಾಂಧೀಜೀ. 'ಚಳಿಗಾಳಿ

ತಣ್ಣಗೆ ಕೊರೆಯುತ್ತಿದೆ, ಈ ಮೋಟಾರಿನಲ್ಲಿ ಇಪ್ಪತ್ತುಮೈಲಿ ಪಯಣ ಹೇಗೆ ಮಾಡಿಸಲಿ?' ಎಂದರು ಬಿರ್ಲಾ. ಗಾಂಧೀಜಿಗೆ ಈ ಕಾಲಹರಣ ಸರಿಕಾಣ ಲಿಲ್ಲ. 'ಅದೆಲ್ಲ ಚಿಂತೆಮಾಡಿ ಏನು ಪ್ರಯೋಜನ? ಮೋಟಾರು ತನ್ನಿ. ಕಾಲಹರಣ ಮಾಡಿದರೆ ಏನು ಲಾಭ?' ಎಂದರು. ಗಾಳಿ ಚಳಿ ಎರಡೂ ಬಲವಾಗಿದ್ದವು; ದಯೆಯೆ ಇರಲಿಲ್ಲ ಅವಕ್ಕೆ. ಹೊತ್ತೂ ಹುಟ್ಟಿರಲಿಲ್ಲ. ಬ್ರಾಹ್ಮ ಮಹೂರ್ತ. ಸುತ್ತಲೂ ಶಾಂತಿ ತುಂಬಿತ್ತು.

ರೋಗಿ ಹೆಂಗಸು ರಾಮನಾಮ ಜಪಮಾಡುತ್ತ ಹಾಸಿಗೆಯಲ್ಲಿ ಬಿದ್ದಿದ್ದಳು. ಗಾಂಧೀಜೀ ಆಕೆಯ ಹೊರಸಿನ ಬಳಿ ಹೋದರು. 'ಗಾಂಧೀಜೀ ಬಂದಿದಾರಮ್ಮ' ಎಂದು ಘನಶ್ಯಾಮದಾಸರು ಕೂಗಿದರು. ಆಕೆ ಮೊದಲು ನಂಬಲಿಲ್ಲ. ಎಲ್ಲಾದರೂ ಉಂಟೆ? ಮಾನವಜೀವದ ಬಯಕೆ ಎಷ್ಟೇ ಶುದ್ಧವಿದ್ದರೂ ಹೀಗೆ ಸುಲಭವಾಗಿ ಈಡೇರುವುದುಂಟೆ? ಆಕೆ ಸ್ತಿಮಿತಳಾಗೆ ಇದ್ದಳು. ಬಳಿಕ ಪ್ರಯತ್ನಪೂರ್ವಕವಾಗಿ ಎದ್ದು ಕೂಡಲು ಬಯಸಿದಳು. ಮೈಯಲ್ಲಿ ತ್ರಾಣವೆ ಇರಲಿಲ್ಲ. ಕಣ್ಣಿಂದ ಎರಡು ಹನಿ ಉರುಳಿದವು. ತನ್ನ ಕರ್ತವ್ಯ ನೆರವೇರಿತೆಂದು ಆಕೆಗೆ ಬಲು ಹರುಷವಾಯಿತು. ಆ ಕಣ್ಣಿನಲ್ಲಿ ಆನಂದ ಹೊಳೆಯಿತು.

ಹಿಂದಿರುಗಿ ಬರುವ ಹೊತ್ತಿಗೆ ರೈಲು ಹೊರಟು ಹೋಗಿತ್ತು. ಮೋಟಾರಿನಲ್ಲೇ ಮುಂದಿನ ನಿಲುಮನೆಗೊಯ್ದು ಅಲ್ಲಿ ಗಾಡಿ ಹತ್ತಿಸಿದುದಾಯಿತು. ಗಾಂಧೀಜಿಗೆ ತುಂಬ ಆಯಾಸವಾಗಿತ್ತು. ಸಾವಿನ ಮಡಿಲಲ್ಲಿದ್ದ ಆ ಜೀವಕ್ಕೆ ಶಾಂತಿ ಸಮಾಧಾನ ದೊರೆಯಿತಲ್ಲ ಎಂಬ ಉತ್ಸಾಹದಲ್ಲಿ ಅವರು ಅದನ್ನು ಮರೆತರು.

ಸ್ವಲ್ಪ ಕಾಲದಲ್ಲೇ, ಈ ಶಾಂತಿಯಿಂದ ಅಖಂಡ ಶಾಂತಿಗೆ ಆಕೆ ಪಯಣವಾದಳು.

*   *   *

ಗಾಂಧೀಜಿ ನಿದ್ರೆಯನ್ನು ಗೆದ್ದಿದ್ದಾರೆ. ಬೇಕೆನಿಸಿದಾಗ ಮಲಗಬಲ್ಲರು; ಬೇಕೆನಿಸಿದಷ್ಟೆ ಹೊತ್ತು ಮಲಗಬಲ್ಲರು. ಸುತ್ತಲೂ ಕಾಂಗ್ರೆಸಿನ ಗದ್ದಲ ಮೊಳಗುತ್ತಿರುವಾಗ ವೇದಿಕೆಯ ಮೇಲೆ ಕೂತೇ ಐದು - ಹತ್ತು ನಿಮಿಷ ಲೆಕ್ಕ

ಇಟ್ಟು ನಿದ್ದೆಹೋಗುವುದುಂಟು. ರೈಲಿನಲ್ಲಿ ಕಾರಿನಲ್ಲಿ ಹಾಯಾಗಿ ನಿದ್ದೆ ಮಾಡುತ್ತಾರೆ.

ಗಾಂಧೀ – ಇರ್ವಿನ್ ಒಪ್ಪಂದದ ಸಮಯದಲ್ಲಿ ಕೆವಲರು ಇಂಗ್ಲಿಷು ಜನ ಗಾಂಧೀಜಿಯನ್ನು ಕಾಣಲು ಬರುವುದಾಗಿ ಗೊತ್ತುಮಾಡಿಕೊಂಡಿದ್ದರು. ಅವರು ಬರುವ ವೇಳೆಗೆ ಹದಿನೈದು ನಿಮಿಷ ಮುಂಚೆ ಗಾಂಧೀಜೀ ತಮ್ಮ ಬಿಡಾರಕ್ಕೆ ಬಂದರು. 'ನನಗೆ ಇವೊತ್ತು ನಿದ್ದೆ ಬೇಕು. ಸ್ವಲ್ಪ ಮಲಗುತ್ತೇನೆ' ಎಂದರು ಗಾಂಧೀಜೀ. ಆ ಜನ ಬರಲಿಕ್ಕೆ ಹದಿನೈದೆ ನಿಮಿಷ ಇದೆ. ಈಗೆಲ್ಲಿ ನಿದ್ದೆ' ಎಂದರು ಘನಶ್ಯಾಮದಾಸರು. 'ಹದಿನೈದೆ ನಿಮಿಷ ಸಾಕು ನನಗೆ' ಎಂದು ಹಾಗೆಯೆ ಮಂಚದ ಮೇಲೆ ಒರಗಿದರು ಗಾಂಧೀಜೀ. ಒಡನೆಯೆ ನಿದ್ದೆ ಬಂದಿತ್ತು. ಹದಿನೈದು ನಿಮಿಷಕ್ಕೆ ಸರಿಯಾಗಿ ತಾವಾಗಿ ಎದ್ದರು. ಮುಂದೆ ಆ ಗೆಳೆಯರ ಭೇಟಿ ಹೊತ್ತಿಗೆ ಸರಿಯಾಗಿ ಆಯಿತು.

'ನಿಮ್ಮ ನಿದ್ರಾಶಕ್ತಿ ಅದ್ಭುತವಾದದ್ದು' ಎಂದರಂತೆ ಘನಶ್ಯಾಮದಾಸರು ಒಮ್ಮೆ.

'ನಿದ್ದೆಯ ನನ್ನ ಚಳಕ ಹೋದರೆ ನನಗೆ ಕೊನೆಗಾಲ ಬಂದಂತೆ' ಎಂದರು ಗಾಂಧೀಜೀ.

* * *

ಚಕ್ರಗೋಷ್ಠಿಗಾಗಿ ಗಾಂಧೀಜೀ ಲಂಡನಿಗೆ ಹೋಗುತ್ತಿದ್ದರು. ಹಡಗಿನಲ್ಲಿ ಒಬ್ಬ ಯೂರೋಪಿಯನ್ ಪ್ರಯಾಣಿಕ ಇದ್ದ. ದಿನವೂ ಗಾಂಧೀಜಿಯನ್ನು ಬಯ್ಯುವುದೇ ಅವನಿಗೆ ಕೆಲಸ. ಒಂದು ದಿನ ಅವರ ಬಗ್ಗೆ ಅಣಕವಾಡೊಂದನ್ನು ಬರೆದು ಅವರ ಕೈಗೆ ತಂದುಕೊಟ್ಟ. ಗಾಂಧೀಜೀ ಅದನ್ನು ತೆಗೆದುಕೊಂಡು ಒಂದು ಅಕ್ಷರವನ್ನಾದರೂ ಓದದೆ, ಒಂದು ಮಾತನ್ನಾದರೂ ಆಡದೆ ಆ ಹಾಳೆಗಳನ್ನೆಲ್ಲ ಹರಿದು ಕಸದ ಬುಟ್ಟಿಗೆ ಹಾಕಿ, ಅದಕ್ಕೆ ಚುಚ್ಚಿದ್ದ ಗುಂಡುಸೂಜಿಯನ್ನು ಮಾತ್ರ ತಮ್ಮ ಡಬ್ಬಿಯಲ್ಲಿಟ್ಟುಕೊಂಡರು. ಆ ಯೂರೋಪಿಯನ್‌ಗೆ ಮುಖಭಂಗವಾದಂತಾಯಿತು. 'ಹೀಗೇಕೆ ಮಾಡುತ್ತೀರಿ? ಅದನ್ನು ಓದಿಯಾದರೂ ನೋಡಿರಿ, ಸ್ವಲ್ಪ ತಥ್ಯವಿದೆ' ಎಂದ. 'ನಿಜ; ತಥ್ಯವಾದ್ದನ್ನೆ ನಾ ತೆಗೆದುಕೊಂಡು ಡಬ್ಬಿಯಲ್ಲಿಟ್ಟುಕೊಂಡೆ'

ಎಂದರು ಗಾಂಧೀಜೀ. ಇದನ್ನು ಕೇಳಿ ಹಡಗಿಗೆ ಹಡಗೆ ನಗೆಯ ಭಾರದಿಂದ ಬಳುಕಿತು.

ಆ ಮನುಷ್ಯ ಮತ್ತೆ ಅತ್ತ ಹಾಯಲಿಲ್ಲ.

* * *

ಲಾಯಿಡ್ ಜಾರ್ಜ್ ಗಾಂಧೀ ದರ್ಶನಕ್ಕೆ ಬಂದಿದ್ದರು. "ನನಗೆ ನೀವು ಕೊಟ್ಟಷ್ಟು ತೊಂದರೆ ನಾನೇನು ನಿಮಗೆ ಕೊಡಲಿಲ್ಲ" ಎಂದು ಲಾಯಿಡ್ ಜಾರ್ಜ್ ಗಾಂಧೀಜಿಗೆ ಹೇಳಿದರು.

"ಈ ವಿಷಯ ನನಗೆ ಗೊತ್ತೇ ಇಲ್ಲವಲ್ಲ" ಎಂದರು ಗಾಂಧೀಜೀ. ಇಬ್ಬರೂ ನಕ್ಕುಬಿಟ್ಟರು.

* * *

ಗಾಂಧೀಜೀ ಇಂಗ್ಲೆಂಡಿಗೆ ಹೋಗಿದ್ದಾಗ ಆಕ್ಸ್‌ಫರ್ಡ್ ವಿದ್ಯಾರ್ಥಿಗಳ ಸಭೆಯೊಂದಕ್ಕೆ ಹೋಗಿದ್ದರು. ಹುಡುಗರು ನಾನಾ ಪ್ರಶ್ನೆ ಕೇಳಿದರು. ಗಾಂಧೀಜೀ ಎಲ್ಲಕ್ಕೂ ನಗುನಗುತ್ತಾ ಉತ್ತರ ಕೊಟ್ಟರು.

ಒಬ್ಬ ವಿದ್ಯಾರ್ಥಿ ಕೇಳಿದ: 'ಕುಡಿಯುವವರನ್ನು ಕಂಡರೆ ನಿಮಗೇಕೆ ಇಷ್ಟು ನಿರ್ದಯೆ ?'

ಗಾಂಧೀಜೀ ಹೇಳಿದರು: 'ಅದರಿಂದ ಸಂಕಟಪಡುವವರನ್ನು ಕಂಡರೆ ಪೂರಾ ದಯೆ. ಆದ್ದರಿಂದ!'

* * *

ಎಷ್ಟೋ ಜನಕ್ಕೆ ಗಾಂಧೀಜೀ ಇಷ್ಟು ಕೆಲಸದ ನಡುವೆ, ಇಷ್ಟು ಗೊಂದಲದ ನಡುವೆ ಸಮಚಿತ್ತರಾಗಿರುತ್ತಾರಲ್ಲಾ ಎಂದು ಆಶ್ಚರ್ಯ. ಒಬ್ಬ ಹೆಂಗಸು 'ನಿಮಗೆ ಎಂದಾದರೂ ಸಿಟ್ಟು ಬಂದಿದೆಯೋ?' ಎಂದು ಕೇಳಿದಳು.

ನೇರಾಗಿ ಬಂತು ಉತ್ತರ: 'ಕಸ್ತೂರಿಬಾನ್ನು ಕೇಳು. ಆಕೆ ಹೇಳುತ್ತಾಳೆ: ಜಗತ್ತಿನ ಸಂಗಡ ನಾ ಬಲು ಚೆನ್ನಾಗಿ ನಡೆದುಕೊಳ್ಳುತ್ತೇನೆ, ಆದರೆ ಆಕೆಯ ಸಂಗಡ ಮಾತ್ರ ಹಾಗಿಲ್ಲ.'

ಆ ಹೆಂಗಸು ಗಾಂಧೀಜಿಯ ಉತ್ತರಕ್ಕೆ ಬೆರಗುಹೊಂದಿದಳಾಗಲಿ 'ನನ್ನ ಗಂಡ ನನ್ನ ಸಂಗಡ ಬಹಳ ಚೆನ್ನಾಗಿದಾನೆ' ಎಂದಳು.

ಗಾಂಧೀಜೀ ಥಟ್ಟನೆ ಹೇಳಿದರು: 'ಹಾಗಾದರೆ ನಿನ್ನಗಂಡ ನಿನಗೇನೋ ಲಂಚ ಕೊಟ್ಟಿದಾನೆ.'

* * *

ಗಾಂಧೀಜೀ ದಿಲ್ಲಿಯಲ್ಲಿದ್ದರು. ಪ್ರಾರ್ಥನೆಯ ಕಾಲ ಅವರ 'ಧರ್ಮ ದರ್ಶನ'ದ ಕಾಲ ತಾನೆ. ಒಂದು ದಿನ ಒಬ್ಬ ಯುವಕ ಬಂದಿದ್ದ. ಗಾಂಧೀ ಜಿಯ ಹಸ್ತಾಕ್ಷರ ಬೇಡಿದ. ಗಾಂಧೀಜೀ ಹಿಂದಿಯಲ್ಲಿ ಬರೆದರು. ಆ ಯುವಕ ತಮಿಳರವನು. ಹಿಂದೀ ಜೊತೆಗೆ ತಮಿಳಿನಲ್ಲೂ ರುಜುಮಾಡಿ ಕೊಡುತ್ತೀರಾ ಎಂದು ಬೇಡಿದ.

'ನೋಡುತ್ತೇನೆ. ಆದರೆ ಅದಕ್ಕಾಗಿ ಇನ್ನೈದು ರೂಪಾಯಿ ಕೊಡ ಬೇಕು' ಎಂದರು ಗಾಂಧೀಜೀ. 'ಆಗಲೇ ಹತ್ತುಕೊಟ್ಟಿದೇನೆ ಮಹಾತ್ಮಾಜೀ' ಎಂದ ಆ ಯುವಕ ನಗುತ್ತ.

ಮರೆತು ಹೋಗಿದ್ದ ಆ ತಮಿಳು ಲಿಪಿಯನ್ನು ತಲೆ ಕೆರೆದುಕೊಳ್ಳುತ್ತ ಒಂದೊಂದಕ್ಷರವನ್ನೆ ನೆನಪು ಮಾಡಿಕೊಂಡು ಬರೆದರು ಗಾಂಧೀಜೀ. ಹಸ್ತಾ ಕ್ಷರದಲ್ಲಿ ಕೊಂಚವೂ ತಪ್ಪಿರಲಿಲ್ಲ. ಯುವಕನಿಗೆ ಬಲು ಸಂತೋಷವಾಯಿತು. ಕೊಂಚವೂ ತಪ್ಪಿಲ್ಲ. 'ಮಹಾತ್ಮಾಜೀ ನಿಮ್ಮ ಜ್ಞಾಪಕಶಕ್ತಿ ಅದ್ಭುತವಾದ್ದು ಎಂದ.' ಹೀಗೆಂದು ಇನ್ನೊಂದು ಹತ್ತುರೂಪಾಯಿ ನೋಟು ಕೊಟ್ಟ

'ಹಾಗಾದರೆ ನನ್ನ ಜ್ಞಾಪಕಶಕ್ತಿಯ ಪ್ರದರ್ಶನಕ್ಕೇನೂ ಇಲ್ಲವೊ' ಎಂದರು ಗಾಂಧೀಜೀ ನಗುತ್ತ.

ಮೂರನೆ ಸಲ ಮತ್ತೆ ಹತ್ತುರೂಪಾಯಿ ನೋಟು ಹೊರಕ್ಕೆ ಬಂತು. 'ಒಂದು ಗಳಿಗೆಯಲ್ಲಿ ಹರಿಜನ ಸೇವೆಗಾಗಿ ೩೦ ರೂಪಾಯಿ. ಓ, ಅವರು ನಿನ್ನನ್ನು ಸದಾ ಹರಸುತ್ತಾರೆ' ಎಂದರು ಗಾಂಧೀಜೀ ಸಂತೋಷದಿಂದ ಮುಖವರಳಿಸಿ.

* * *

ದಕ್ಷಿಣ ಆಫ್ರಿಕದಲ್ಲೊಂದು ಸಲ ಕಸ್ತೂರಬಾಗೆ ಸೆರೆಮನೆಯಲ್ಲಿದ್ದಾಗ ತುಂಬಾ ಕಾಯಿಲೆಯಾಯಿತು. ಆಂಡ್ರೂಸರು ಆಕೆಯನ್ನು ನೋಡಲು ತವಕಿಸಿದರಾಗಲಿ ಆಕೆಯ ಅನಾರೋಗ್ಯದಲ್ಲಿ ಅದೂ ಸಾಧ್ಯವಿರಲಿಲ್ಲ. ಕೆಲವು ಕಾಲದ ಮೇಲೆ ಸಂಧಾನದ ಸಫಲವಾಗಿ ಎಲ್ಲರನ್ನೂ ಬಂಧನದಿಂದ

ಬಿಟ್ಟಾಗ ಆಕೆಯನ್ನೂ ಬಿಟ್ಟರು. ಆದರೆ ಆಕೆಯ ಆರೋಗ್ಯ ಉತ್ತಮ ಗೊಳ್ಳಲಿಲ್ಲ; ದಿನೇ ದಿನೇ ಕ್ಷೀಣವಾಯಿತು.

ಆದರೆ ಗಾಂಧೀಜಿಗೆ ಮಾತ್ರ ಪ್ರಿಟೋರಿಯಾ ಬಿಡುವುದಾಗಲಿಲ್ಲ. ಸಂಧಾನವಿನ್ನೂ ಮುಗಿದಿರಲಿಲ್ಲ. ದೀನಬಂಧು ಆಂಡ್ರೂಸ್, ಅವರು ಇಬ್ಬರೂ ಅಲ್ಲೇ ಇದ್ದರು. ಯಾವ ಗಳಿಗೆಯಲ್ಲಿ ಸಂಧಾನ ಮುರಿದೀತೋ ಎಂಬ ಭಯವಿದ್ದೇ ಇತ್ತು.

ಕೊನೆಗೆ ಸಂಧಾನವೆಲ್ಲ ಮುಗಿದು ಜನರಲ್ ಸ್ಮಟ್ಸ್ ರುಜುಮಾಡು ವುದು ಒಂದು ಉಳಿಯಿತು. ಆ ಕೆಲಸ ಬೇಗ ಆಗುವಂತಿರಲಿಲ್ಲ. ನಾಲ್ಕಾರು ದಿನ ಹಿಡಿಯಬಹುದೆಂದು ಹೇಳಿದರು.

ಅಷ್ಟುಹೊತ್ತಿಗೆ ಸರಿಯಾಗಿ ಗಾಂಧೀಜಿಗೊಂದು ತಂತಿ ಬಂತು: 'ಕಸ್ತೂರಬಾ ಮೃತ್ಯುಮುಖದಲ್ಲಿ.'

'ಕೂಡಲೆ ಊರಿಗೆ ಹೊರಡಿ' ಎಂದರು ದೀನಬಂಧು. ಇನ್ನಿಲ್ಲದಷ್ಟು ಬಲವಂತ ಮಾಡಿದರು. 'ನಾನೆಲ್ಲ ಸ್ಮಟ್ಸ್‌ರ ರುಜುಮಾಡಿಸಿಕೊಂಡು ಬರು ತ್ತೇನೆ' ಎಂದರು.

ಗಾಂಧೀಜೀ ಒಪ್ಪಲಿಲ್ಲ. ಮನೆಯ ಮಾತಿಗಾಗಿ ಸಾರ್ವಜನಿಕ ಕೆಲಸ ವನ್ನು ತಪ್ಪಿಸಬಹುದೆ? ಇಲ್ಲ. ದೀನಬಂಧು ಎಷ್ಟು ಪ್ರಯತ್ನಮಾಡಿದರೂ ಗಾಂಧೀಜೀ ಅಲುಗಾಡಲಿಲ್ಲ; ಕಲ್ಲಿನಂತೆ ನಿಶ್ಚಲರಾಗಿದ್ದರು. ಆದರೆ ಆ ಎದೆಯಲ್ಲಿ ತುಂಬಿದ್ದ ನೋವನ್ನು ಮಾತ್ರ ವರ್ಣಿಸತೀರದು.

ಆವೊತ್ತು ದೀನಬಂಧುವಿಗೆ ನಿದ್ದೆ ಬರಲಿಲ್ಲ. ನಸುಕಿನಲ್ಲೆ ಸ್ಮಟ್ಸ್ ಬಳಿಗೆ ಹೋಗಿ ತಾವೇ ಆ ರುಜು ಪಡೆದು ತರಬೇಕೆಂದು ಯೋಚಿಸಿದರು.

ಬೆಳಗ್ಗೆ ದೀನಬಂಧು ಸಂಧಾನ ಪತ್ರಕ್ಕೆ ಸ್ಮಟ್ಸ್ ರುಜುಹಾಕಿಸಿ ತಂದರು. ಮರು ಗಳಿಗೆಯೆ ಇಬ್ಬರೂ ದರ್ಬಾನಿಗೆ ಕಸ್ತೂರಬಾನ್ನು ನೋಡಲು ಹೊರ ಟರು. ಬಾ ಗೆ ಗುಣವಾಗಿತ್ತು.

* * *

ಗಾಂಧೀಜಿಗೆ ನೋವು ಎಂದರೆ ಆಗದು. ಎಂಥ ಕ್ಷುದ್ರಪ್ರಾಣಿಯೇ ಆಗಲಿ ಸಂಕಟಪಡುತ್ತಿದ್ದರೆ ಅವರ ಕಣ್ಣಿಂದ ಕರುಣೆ ಕೋಡಿ ಹರಿಯುತ್ತದೆ.

ಆ ಕರುಣೆ ಅವರ ನಿರಂತರ ಸತ್ಯಶೋಧನೆಯ, ದೈವಸಿದ್ಧಿಯ ಪ್ರಯತ್ನದ ಒಂದು ಅಂಗ.

ಒಂದು ದಿನ ದೀನಬಂಧು ಗಾಂಧೀಜೀ ಇಬ್ಬರೂ ಒಂದು ಕಾಲುವೆಯ ದಡದಲ್ಲಿ ಕೂತಿದ್ದರು; ಪ್ರೆಟೋರಿಯಾದಲ್ಲಿ. ದೊಡ್ಡ ಜೀವ ಸಣ್ಣ ಜೀವವನ್ನು ತಿನ್ನುವುದು, ತಿಂದು ಬದುಕುವುದು ಪ್ರಕೃತಿ ನಿಯಮ; ಮನುಷ್ಯ ಮಾಂಸಾಹಾರಿಯಾದರೆ ತಪ್ಪೇನಲ್ಲ ಎಂದು ದೀನಬಂಧು ವಾದಿಸಿದರು.

ಗಾಂಧೀಜೀ ರೇಗಿದ ನಾಗರದಂತೆ ಹೆಡೆಮರಳಿ 'ನೀನು ಕ್ರಿಸ್ತಾನ, ನೀನೂ ಈ ಮಾತಾಡುವುದೆ? ಏಸು ಅವತರಿಸಿದ್ದು ಜೀವನಾಶಕ್ಕಲ್ಲ, ಜೀವ ರಕ್ಷಣೆಗೆ ಎಂದು ನೀನು ನಂಬಿಲ್ಲವೇನು? ಏಸುವಿನ ಬಾಳು ತ್ಯಾಗದ್ದು; ಹಿಂಸೆಯದಲ್ಲ. ನಿನಗಾಗಿ, ಜಗತ್ತಿಗಾಗಿ ಆತ ತ್ಯಾಗಮಾಡಲಿಲ್ಲವೆ. ಜೀವ ಹರಣವಲ್ಲ ದೈವೀಗುಣ; ಜೀವತ್ಯಾಗ ಅಲ್ಲವೆ?'

ಗಾಂಧೀಜಿಯ ಬಳಿಗೆ ಬರುವ ಜನ ನಾನಾವಿಧದವರು. ಔಷಧಿಗಾಗಿ ಬರಲಿ, ಆಧ್ಯಾತ್ಮ ಪ್ರಯೋಜನಕ್ಕಾಗಿ ಬರಲಿ, ರಾಜಕೀಯಕ್ಕಾಗಿ ಬರಲಿ ಎಲ್ಲರದೂ ಒಂದೇ ಆಸೆ. ತಮ್ಮನ್ನು ಮುತ್ತಿದ ಕತ್ತಲೆಯಿಂದ ಗಾಂಧೀಜೀ ಪಾರುಮಾಡಲಿ, ಬೆಳಕಿಗೊಯ್ಯಲಿ; ಅಸತ್ಯದಿಂದ ಸತ್ಯಕ್ಕೊಯ್ಯಲಿ; ಪ್ರಸತ್ತಿ ನೀಡಲಿ.

* * *

ಒಮ್ಮೆ ಒಬ್ಬರು ಬಂದಿದ್ದರು. 'ಇದೋ ಹರಿಜನರಿಗಾಗಿ ನೂರು ರೂಪಾಯಿ; ಜಮನಾಲಾಲಜೀ ತೆರೆದ ವಿಧವಾಶ್ರಯಕ್ಕೆ ನೂರು ರೂಪಾಯಿ' ಎಂದು ೨೦೦ ರೂಪಾಯಿ ಗಾಂಧೀಜಿಯ ಬಳಿ ಇಟ್ಟರು.

'ನಿಮ್ಮಲ್ಲಿ ಹಣ ಹೆಚ್ಚಾಗಿದ್ದಂತಿದೆ. ಆದರೆ ಜಮನಾಲಾಲಜೀಗೇನು ಹಣ ಬೇಕಾಗಿಲ್ಲ. ಅವರ ಏರ್ಪಾಡು ಅವರು ಮಾಡಿಕೊಂಡಿದ್ದಾರೆ' ಎಂದರು ಗಾಂಧೀಜೀ.

'ಹಾಗಾದರೆ ನಿಮ್ಮ ಮನಸ್ಸಿಗೆ ತೋರಿದ್ದಕ್ಕೆ ವಿನಿಯೋಗಮಾಡಿ. ನನ್ನ ಬಾಳಿನಲ್ಲಿ ನಾನೊಂದು ನಿಯಮ ಹಾಕಿಕೊಂಡಿದ್ದೆ: ನನ್ನ ಅಗತ್ಯ ವೆಚ್ಚಕ್ಕಿಂತ ಹೆಚ್ಚಾಗಿ ಉಳಿದದ್ದನ್ನೆಲ್ಲ ಅದೃಷ್ಟಹೀನರಾದ ಅಣ್ಣತಮ್ಮಂದಿರಿಗಾಗಿ ಎಂದು ಕೂಡಿಟ್ಟಿದೇನೆ. ಒಟ್ಟು ೩೫ ಸಾವಿರ ರೂಪಾಯಿ ಆಗಿದೆ. ಈಗ ತಿಂಗಳಿಗೆ

೧,೦೦೦ ರೂಪಾಯಿ ಮಿಗಿಸುತ್ತಿದೇನೆ. ನಿಮಗೆ ಇಷ್ಟವಾದ ಯಾವ ಕೆಲಸಕ್ಕಾದರೂ ಈ ಹಣವನ್ನು ಬಳಸಿ. ರಾಜಕೀಯದಾದ್ದಕ್ಕೆ ಮಾತ್ರ ಬೇಡ; ನಾನು ಸರಕಾರಿ ಉದ್ಯೋಗಿ.'

'ಹಾಗಾದರೆ ನಿಮ್ಮ ತಿಂಗಳ ಉಳಿತಾಯದ ಹತ್ತರಲ್ಲೊಂದು ಪಾಲು ಕೊಡುತ್ತಾ ಇದೀರಿ. ಅದು ನಡೆಯದು. ನಿಮ್ಮ ಇಷ್ಟದಂತೆಯೇ ಆಗಲಿ. ರಾಜಕೀಯವಲ್ಲದ ಕೆಲಸ ನೂರಾರು ಇವೆ' ನಗುತ್ತಾ ಹೇಳಿದರು ಗಾಂಧೀಜೀ.

'ಆದರೆ ಈ ಹಣವನ್ನು ಹೇಗೆ ವಿನಿಯೋಗಿಸಲಿ ಬಾಪು. ತಾವು ದಾರಿ ತೋರಬೇಕು.'

ಒಂದು ಗಳಿಗೆ ನಿಧಾನಿಸಿ ಗಾಂಧೀಜೀ ಹೇಳಿದರು: 'ಇದು ಕೆಟ್ಟಕಾಲ. ಯಾವ ಗಳಿಗೆಗೇನೋ ಯಾರು ಬಲ್ಲರು! ಎಲ್ಲವನ್ನೂ ಒಂದು ಧರ್ಮನಿಧಿ ಮಾಡಿಬಿಡಿ; ........ರನ್ನು ಧರ್ಮದರ್ಶಿಗಳಾಗಿ ಮಾಡಿ.'

* * *

ಇನ್ನೊಬ್ಬರು ಮಹಿಳೆ. ಗಾಂಧೀಜಿಗೆ ಆಕೆ ಬಹಳ ದಿನದಿಂದ ಗೊತ್ತು. ಆದರೆ ವಿವರಗಳೇನೂ ಗೊತ್ತಿರಲಿಲ್ಲ. 'ನೀನು ವಿಧವೆಯಾದ್ದು ಯಾವಾಗ?' ಎಂದು ಸಹಜವಾಗಿ ಕೇಳಿದರು.

ಆಕೆ ಖೊಳ್ಳೆಂದು ನಕ್ಕಳು. 'ಅಲ್ಲ ಬಾಪು, ನಾನು ವಿಧವೆಯಲ್ಲ, ನನ್ನ ಗಂಡ ಇದಾರೆ.'

'ನನ್ನ ಅಜ್ಞಾನಕ್ಕೆ ಮಿತಿಯೇ ಇಲ್ಲ. ತಪ್ಪಾಯಿತು. ನಿನ್ನ ಗಂಡ ಎಲ್ಲಿದಾನೆ? ನಾನು ನೋಡಿಯೇ ಇಲ್ಲವಲ್ಲ ಆತನನ್ನು?'

'ಅವರು ನನ್ನ ಜೊತೆಗೆ ಸಂಸಾರ ಮಾಡುವುದಿಲ್ಲ.'

'ಸರಿ. ಹಾಗಾದರೆ ನೀನು ವಿಧವೆಯಾದ ಹಾಗೆಯೆ ಆಯಿತು. ಆದರೆ ನೀನೇ ಗಂಡನನ್ನು ಬಿಟ್ಟಿದೀಯೋ? ಆತನೇ ನಿನ್ನನ್ನು ಬಿಟ್ಟಿದಾನೋ?'

ಆಕೆ ನಾಚಲಿಲ್ಲ. ಮುಗ್ಧತನದಿಂದ ಹೇಳಿದಳು: 'ಆತ ಬಿಡಲಿಲ್ಲ ಬಾಪು: ನಾನೇ ಅವರನ್ನು ಬಿಟ್ಟೆ. ಅವರ ನಡತೆ ನನಗೆ ಸರಿತೋರಲಿಲ್ಲ. ಕುಡುಕತನ ಬೇರೆ ಕಲಿತಿದ್ದರು. ಎರಡನೆ ಮದುವೆ ಮಾಡಿಕೊಂಡಿದಾರೆ. ಯಾವಾಗಲಾದರೂ ನನ್ನ ಮನೆಗೆ ಬರುತ್ತಾರೆ. ಬಂದರೆ ಸಂತೋಷವೆ; ಆದರೆ ಒಟ್ಟಿಗೆ ಸಂಸಾರ ಮಾಡುವುದಿಲ್ಲ.'

'ಹಾಗಾದರೆ ನೀನಿರುವುದೆಲ್ಲಿ ?'

'ನಮ್ಮ ತಂದೆ ನನಗೆ ಕೊಟ್ಟ ಮನೆಯಲ್ಲಿ ಒಂದು ಭಾಗದಲ್ಲಿದೇನೆ. ಅವರಿಗೆ ತುಂಬಾ ಆಸ್ತಿಯಿತ್ತು. ಎಷ್ಟೋ ದಾನಧರ್ಮ ಮಾಡಿದರು. ಅಣ್ಣನ ಮಕ್ಕಳಿಗೆ ಆಸ್ತಿ ಹಂಚಿ ನನಗೂ ಸ್ವಲ್ಪ ಕೊಟ್ಟು ಸನ್ಯಾಸಿಯಾಗಿ ಹೋದರು. ಈ ಆಸ್ತಿಯನ್ನೆಲ್ಲ ನಿಮಗೊಪ್ಪಿಸುತ್ತೇನೆ. ಅಲ್ಲೊಂದು ಆಶ್ರಮ ಮಾಡಿ. ನಾನೂ ಬೇಕಾದರೆ ಅಲ್ಲಿಯೆ ಇರುತ್ತೇನೆ.'

'ನಿನ್ನ ಜೀವನ ?'

'ಈ ಆಸ್ತಿಯೆ. ಒಂದು ವರ್ಷದಿಂದ ನನ್ನ ಮನಸ್ಸು ಬದಲಾಗಿದೆ. ಈ ವರ್ಷದಲ್ಲಿ ಎರಡು ಸಲ ಸೆರೆಮನೆಗೆ ಹೋಗಿದೇನೆ. ಆಗಿನಿಂದಲೂ ನಿಮಗಿದನ್ನೆಲ್ಲ ಒಪ್ಪಿಸಬೇಕೆಂದು ಆಸೆಗೊಂಡಿದೇನೆ.'

'ಸರಿಯೆ. ನಾನು ಜಮನಾಲಾಲಜಿಯೊಡನೆ ಮಾತಾಡಿ ತರುವಾಯ ತಿಳಿಸುತ್ತೇನೆ. ನೀನು ಹೀಗೆಯೆ ಉಳಿದ ಶ್ರೀಮಂತಿನಿಯರಿಗೆ ತ್ಯಾಗಧರ್ಮ ಕಲಿಸು.'

* * *

ಬಾರ್ದೋಲಿಯ ಸತ್ಯಾಗ್ರಹ ತಿಳಿಯದ ಭಾರತೀಯನೂ ಉಂಟೆ? ಸರಕಾರದ ದೌರ್ಜನ್ಯಕ್ಕೆ ಗುರಿಯಾಗಿ ಎಷ್ಟೋ ಜನ ಊರುಬಿಟ್ಟರು ; ಹೊಲ ಮನೆ ಕಳೆದುಕೊಂಡರು. ಕೆಲವರಿಗೆ ಬಹು ದುಃಖವಾಯಿತು. ಕೆಲವರು ಇದೇ ಸಂದರ್ಭವೆಂದು ಲಾಭಮಾಡಿಕೊಂಡರು.

ಈ ಲಾಭಾಲಾಭಗಳ ಸುಖದುಃಖಗಳ ಜಂಜಡಕ್ಕೆ ಸಿಗದೆ ಒಂದು ವ್ಯಕ್ತಿ ಮಾತ್ರ ಬಿಡಿಯಾಗಿ ನಿಂತಿತ್ತು. ಊರುಬಿಟ್ಟು ನೆರೆಯ ಬರೋಡಾ ರಾಜ್ಯಕ್ಕೆ ಹೊರಟುಹೋಗಿದ್ದ ಆತ. ತಮ್ಮ ಹೊಲಮನೆ ಸಗೌರವವಾಗಿ ತಮಗೆ ಹಿಂದಿರುಗಿ ಬರುವತನಕ ಅಲ್ಲಿ ಕಾಲಿಡೆನೆಂದು ಶಪಥಮಾಡಿದ್ದ ಆತ. ಆ ವ್ಯಕ್ತಿ ವರದಗ್ರಾಮದ ಛಿತಾಭಾಯಿ.

ಏಳುವರ್ಷದ ಮೇಲೆ ಬಾರ್ದೋಲಿಯ ವಿಜಯ ಪೂರ್ಣವಾಯಿತು. ರೈತರ ಹೊಲಮನೆಗಳೆಲ್ಲ ಮತ್ತೆ ಅವರಿಗೆ ಕೊಡಲ್ಪಟ್ಟವು. ಸರದಾರ ವಲ್ಲಭಭಾಯಿಯ ಮುಂದಾಳುತನದಲ್ಲಿ ಆ ವಿಜಯೋತ್ಸವ ನಡೆಯಿತು.

ಛಿತಾಭಾಯಿಯನ್ನು ತನ್ನ ವನವಾಸ ಮುಗಿಸಿ ಸ್ವಗ್ರಾಮಕ್ಕೆ ಹಿಂದಿರುಗಿ ಬಾರೆಂದು ಕರೆಯಲು ಸರದಾರರನ್ನೆ ಮುಂದುಮಾಡಿಕೊಂಡು ಜನ ಅಲ್ಲಿಗೆ ಹೋದರು. ಭಾಯಿಯನ್ನು ಮೆರವಣಿಗೆ ಮಾಡಿಸಿಕೊಂಡು ವಿಜೃಂಭಣೆ ಯಿಂದ ಕರೆದುಕೊಂಡು ಬರುವ ಆಸೆ ಅವರದು.

ಭಾಯಿ ಇದ್ದ ಹಳ್ಳಿಗೆ ಸರಿಯಾದ ದಾರಿಯಿರಲಿಲ್ಲ. ಮೋಟಾರಂತೂ ಹೋಗುವ ಹಾಗೇ ಇಲ್ಲ. ಸರಿ, ನೂರಾರು ಗಾಡಿ ಬಂದವು. ಎರಡೇ ದಿನ ದಲ್ಲಿ ಕಣ್ಣುಕುಕ್ಕುವಂಥ ಮಾರ್ಗವಾಯಿತು. ಸರದಾರರ ಮೋಟಾರು ಅನಾಯಾಸವಾಗಿ ಹೋಗುವ ಹಾಗಾಯಿತು.

ಭಾಯಿ ಇದ್ದ ಸ್ಥಳ ಆತನ ಗೆಳೆಯನದು. ಆ ಮುರುಕು ಗುಡಿಸಿಲಲ್ಲೆ ಆತ ಭಾಯಿಗೂ ಆತನ ದನಕರುಗಳಿಗೂ ಈ ಏಳು ವರುಷ ಸ್ಥಳ ಕೊಟ್ಟಿದ್ದ. ಛಿತಾಭಾಯಿ ಬಡವನಲ್ಲ. ವರದಗ್ರಾಮದಲ್ಲಿ ಅವರ ಮನೆತನ ಹೆಸರಾದ್ದು, ಸಿರಿವಂತರದು. ಅಂಥವನು ತನ್ನ ಇಬ್ಬರು ಮಕ್ಕಳು, ಸೊಸೆಯರನ್ನು ಕಟ್ಟಿ ಕೊಂಡು ಇಂಥ ಮುರುಕು ಗುಡಿಸಿಲಿಗೆ ಬಂದು ಯಾರ ಹೊಲವನ್ನೊ ಕೋರಿಗೆ ಸಾಗುಮಾಡಿ ಬದುಕಿದುದು ಊಹೆಗೂ ಮೀರಿದುದು. ಆದರೆ ಛಿತಾಭಾಯಿ ಒಮ್ಮೆಯಾದರೂ ಮರುಗಲಿಲ್ಲ, ಮುಗ್ಗರಿಸಲಿಲ್ಲ. ತನ್ನ ಊರಿ ನಲ್ಲಿ ತನ್ನ ಮನೆ ಬಿದ್ದುಹೋಗುತ್ತಿತ್ತು. ಆದರೆ ತಾನು ಸೋತು ಹಿಂದಿರುಗೆ ನೆಂದು ಪ್ರತಿಜ್ಞೆಮಾಡಿದ್ದ. ತನ್ನ ಜೊತೆಯಲ್ಲಿ ಬಂದ ತನ್ನ ತಮ್ಮ ತೀರಿ ಹೋದ. ಆದರೂ ಭಾಯಿ ಧೃತಿಗೆಡಲಿಲ್ಲ. ಸರದಾರರು ಬಾರ್ಡೋಲಿಗೆ ಬಂದಾಗ ಅವರನ್ನು ನೋಡುವ ಆಸೆಯಾಗುತ್ತಿತ್ತು ಭಾಯಿಗೆ. ಬ್ರಿಟಿಷ್ ಗಡಿಯಲ್ಲಿ ಕಾಲಿಡದೆ ಸುತ್ತುಬಳಸಿ ಬರೋಡಾ ಸೀಮೆಯ ಗಡಿಯಲ್ಲಿ ಬಂದು ನಿಂತು ಅಲ್ಲಿಗೇ ಸರದಾರರನ್ನು ಬರಮಾಡಿಕೊಳ್ಳುತ್ತಿದ್ದ. ಭಾಯಿ ಸದಾ ಹರ್ಷಚಿತ್ತನಾಗಿರುತ್ತಿದ್ದ; ಕದನ ಎಷ್ಟು ನಡೆದರೂ ಆತನಿಗೆ ಲಕ್ಷ್ಯವಿರಲಿಲ್ಲ.

ತಾ ಬಂದು ಮನೆಮಾಡಿಕೊಂಡಿದ್ದ ಊರು ಅಂದು ಕಣ್ಣೀರ ಹೊಳೆ ಯಲ್ಲಿ ಮುಳುಗಿಹೋಯಿತು. ಭಾಯಿ ಅವರ ಬಲಭುಜ. ಅವರ ಜಗಳ ಗಳೆಲ್ಲ ಭಾಯಿ ನಿಸ್ವಾರ್ಥ ಹಿತವಚನದಿಂದ ಕೊನೆಗಂಡಿದ್ದವು. ಹೊತ್ತು ಮೂಡಿದಾಗಿನಿಂದ ಹೊತ್ತುಮುಳುಗುವ ತನಕ ದುಡಿದು ಅವರಿಗೊಂದು ಉದಾ ಹರಣೆಯಾಗಿದ್ದ ಭಾಯಿ. ಐದುಗಂಟೆ ಹೊಲಗೆಲಸ, ಎರಡುಗಂಟೆ ನೂಲು

ವುದು, ಮತ್ತೆ ಎರಡುಗಂಟೆ ಹೊಲದಲ್ಲಿ – ಇದು ಭಾಯಿಯ ನಿತ್ಯಕ್ರಮ. ತಾನು ಸ್ವಂತವಾಗಿ ನೂತ ನೂಲಿನ ಬಟ್ಟೆ ಉಡುತ್ತಿದ್ದ. ಆತನಿಗೆ ಹಗೆಗಳೆ ಇರಲಿಲ್ಲ. ಛಿತಾಭಾಯಿ ತಮ್ಮನ್ನಗಲಿವರೆ ತಮ್ಮ ಬದುಕಿನ ಬೆಳಕೆ ನಂದಿ ಹೋದಂತಾಯಿತು ಆ ಊರಿನ ಜನರಿಗೆ. ಎಲ್ಲರ ಕಣ್ಣೂ ಹನಿಗಣ್ಣು. ಊರವರೆಲ್ಲ ಸಭೆಸೇರಿ ಭಾಯಿಗೆ ಒಂದು ನೇಗಿಲನ್ನು ಕಾಣಿಕೆ ಕೊಟ್ಟರು. ಮಾರನೆದಿನ ವರದಗ್ರಾಮದವರೆಗೂ ಭಾಯಿಯ ಜೊತೆಗೆ ಬಂದು ಬೀಳು ಕೊಟ್ಟು ಹೋದರು. ನೂರು ಗಾಡಿಗಳ ಪರಿವಾರ ಅದು. ರೈತನನ್ನು ಗೌರವಿಸುವ ಬಗೆ ರೈತನಿಗೇ ಗೊತ್ತು.

ವಲ್ಲಭಭಾಯಿ ಹೇಳಿದರು : 'ವ್ರತವೇ ನಮ್ಮ ಜೀವಾಳ, ನಮ್ಮ ಕೀರ್ತಿ. ತಮ್ಮ ವ್ರತಕ್ಕಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡವರೆಂದಲ್ಲವೆ ಶ್ರೀರಾಮ, ಹರಿಶ್ಚಂದ್ರರನ್ನು ನಾವು ನೆನೆಯುವುದು? ಶ್ರೀರಾಮ ರಾಜ್ಯತ್ಯಾಗ ಮಾಡಿದ. ದೊರೆ ರಾಜ್ಯವನ್ನಾದರೂ ಬಿಟ್ಟಾನು, ರೈತ ಹೊಲಮನೆ ಬಿಡಲಾರ. ಛಿತಾ ಭಾಯಿಯ ತ್ಯಾಗ ಬಲು ದೊಡ್ಡದು. ವ್ರತಪರಿಪಾಲನಾ ಸಮರ್ಥರಿದ್ದೆಡೆ ದೇವರೇ ನೆಲೆಸುತ್ತಾನೆ.'

ಭಾಯಿಯ ಪುನರಾಗಮನದ ಮರುದಿನ ಗಾಂಧೀಜೀ ವರದಗ್ರಾಮಕ್ಕೆ ಹೋದರು. ಗಾಂಧೀಜಿಯ ಪಾದಧೂಳಿಯಿಂದ ಪುನೀತವಾಗದೆ ಭಾಯಿ ತನ್ನ ಮನೆಯಲ್ಲಿ ಕಾಲಿಡಲು ಒಪ್ಪಲಿಲ್ಲ. ಆ ಗೃಹಪ್ರವೇಶೋತ್ಸವ ರಸ ಮಯವಾಗಿತ್ತು. ಮನಸ್ಸನ್ನು ಮಿಡಿಯುತ್ತಿತ್ತು. ಆಶ್ರಮದ ಗೆಳತಿಯರು 'ದೇವರ ನಂಬಿ ಕೆಟ್ಟವರುಂಟೆ? ಆರ್ತತ್ರಾಣಪರಾಯಣ ಅವನು' ಎಂಬ ಅರ್ಥದ ಗೀತವನ್ನು ಹಾಡಿದರು.

ಛಿತಾಭಾಯಿಯ ಹಳೆಮನೆ ಬಿದ್ದುಹೋಗಿತ್ತು. ಕಾಂಗ್ರೆಸ್ ಕೆಲಸ ಗಾರರು ಹೊಸಮನೆ ಕಟ್ಟಿದ್ದರು ಭಾಯಿಗಾಗಿ. ಆದರೆ ಭಾಯಿ ಕಾಂಗ್ರೆಸ್ ಸಹಾಯ ತೆಗೆದುಕೊಳ್ಳುವವನಲ್ಲ. ಆತನ ಅರಣ್ಯವಾಸದಲ್ಲಿ ಗೆಳೆಯರು ಅಷ್ಟೋ ಇಷ್ಟೋ ಸಹಾಯ ಕಳಿಸಿದ್ದರು. ಅದನ್ನೆಲ್ಲ ಭಾಯಿ ಹಿಂದಿರುಗಿಸಿದ್ದ.

ಮಹದೇವ ದೇಸಾಯಿ ಕೇಳಿದರು : 'ಏನು ಭಾಯಿ, ಪುನರಾಗಮನ ಸಂತೋಷವೆ?' 'ಸಂತೋಷವೆ, ಆದರೆ ಈ ಮನೆ ಕೊಂಚ ದುಬಾರಿ

ಯಾಯಿತು. ಸಾಲವೆಂದರೆ ನನಗೆ ಶೂಲವಿದ್ದಂತೆ.' ಭಾಯಿ ಓದು ಕಲಿತವನಲ್ಲ; ಸಾದಾ ಸೀದಾ ರೈತ. ದೈವಭೀರು; ಮಾನಧನ.

ಗಾಂಧೀಜೀ ಆ ಮನೆಯ ಹೊಸಲು ಮೆಟ್ಟಿದಾಗ ಛಿತಾಭಾಯಿ ಅವರ ಕೈಯಲ್ಲಿ ನೋಟುಗಳ ಕಟ್ಟೊಂದನ್ನು ತುರುಕಿದ. 'ಇದೇನು ಈ ದಾನ, ಈ ಕಷ್ಟದ ಬದುಕಿನಲ್ಲಿ ಇದು ಹೇಗೆ ಸಾಧ್ಯ?' ಮಹದೇವ ದೇಸಾಯಿ ಬೆರಗಾದರು.

'ದಾನವಲ್ಲ ಇದು, ಸಾಅ. ಕಾಂಗ್ರೆಸ್ಸಿನಿಂದ ನನಗೇನೂ ಸಹಾಯ ಸಿಗದಿದ್ದರೂ ಅವರಿವರಿಂದ ಯಾವುದೋ ರೂಪದಲ್ಲಿ ನೆರವು ಬಂದಿದೆ. ಅದರ ಮೊತ್ತ ೨೨೫ ರೂಪಾಯಿ. ಅದರ ಬಡ್ಡಿ ೨೫. ಒಟ್ಟು ೨೫೦ ರೂಪಾಯಿ ಸಾಲ ತೀರಿಸಿದೆನಲ್ಲ ಎಂಬುದೇ ನನ್ನ ಆನಂದ.'

* * *

ಗಾಂಧೀಜಿಯ ದರ್ಶನಕ್ಕಾಗಿ ಆಸೆಪಡದವರು ಯಾರು? ಸಾವಿರಾರು ಮೈಲು ದೂರದಿಂದ ಜನ ಬರುತ್ತಾರೆ. ಕೆಲವರು ಕೇವಲ ದರ್ಶನಕ್ಕಾಗಿಯೇ ಬರುತ್ತಾರೆ. ಅವರು ಮಾತು ಕೂಡ ಆಡುವುದಿಲ್ಲ. ಒಂದು ಸಲ ಹಣ್ಣು ಹಣ್ಣು ಮುದುಕಿ ಒಬ್ಬಾಕೆ ಅವರ ದರ್ಶನಮಾಡಿಕೊಂಡಳು. ಆಕೆಯ ಭಕ್ತಿಯೇ ಆಕೆಗೆ ಆ ಪುಣ್ಯ ಒದಗಿಸಿತು. ಇಲ್ಲದಿದ್ದರೆ ಆ ಸಂದರ್ಭದಲ್ಲಿ ಅದು ಯಾವ ರೀತಿಯಿಂದಲೂ ಸಾಧ್ಯವಿರಲಿಲ್ಲ.

ಸಂಯುಕ್ತ ಪ್ರಾಂತದಲ್ಲಿ ಗಾಂಧೀಜೀ ಪ್ರವಾಸ ಮಾಡುತ್ತಿದ್ದರು. ಬಿರುಗಾಳಿಯಂತೆ ಗಂಟೆಗೆ ಒಂದು ಹಳ್ಳಿ ದಾಟುತ್ತ ಪ್ರಯಾಣ ನಡೆದಿತ್ತು. ದಾರಿಯಲ್ಲಿ ಒಂದು ಬಯಲು ಬಂತು. ಆಗ ಮೋಟಾರಿನ ವೇಗ ಹೆಚ್ಚಿಸಿದರು. ಕೊಂಚ ದೂರ ಹೋದಮೇಲೆ ಛಟ್ಟನೆ ಟೈರು ಹರಿಯಿತು. ಆಗ ಸಣ್ಣಾಗಿ ಮಳೆ ಹನಿ ಉದುರುತ್ತಿತ್ತು. ಟೈರು ಸರಿಮಾಡಬೇಕಾಗಿದ್ದುದರಿಂದ ಗಾಡಿಯಲ್ಲಿ ಇದ್ದವರೆಲ್ಲ ಇಳಿದರು. ಆಗ ಒಬ್ಬ ಮುಪ್ಪಿನ ಮುದುಕಿ ಕೈಯಲ್ಲಿ ಕೊಡೆ ಹಿಡಿದು, ಕೋಲು ಊರಿಕೊಂಡು ಮೆಲ್ಲಗೆ ಹೆಜ್ಜೆ ಇಡುತ್ತ 'ಮಗು, ನಿಮ್ಮಲ್ಲಿ ಯಾರು ಮಹಾತ್ಮಾ ಗಾಂಧೀ?' ಎಂದು ಕೇಳುತ್ತ ಬಂದಳು. ಯಾರೂ ಉತ್ತರ ಕೊಡಲಿಲ್ಲ. ಆಕೆ ಮತ್ತೆ ಕೇಳಿದಳು. ಆಗ ಗಾಂಧೀಜಿಯೇ ಕೇಳಿದರು: 'ಏಕೆ ತಾಯಿ, ಆತನನ್ನು ಯಾಕೆ ಹುಡುಕುತ್ತೀಯಮ್ಮ?'

ಆಕೆ ಹೇಳಿದಳು: 'ಅಯ್ಯಾ! ನನಗೆ ಈಗ ನೂರಾನಾಲ್ಕಾಯಿತು. ಕಣ್ಣು ಮಂದವಾಗಿವೆ. ನಾನು ಅನೇಕ ತೀರ್ಥಯಾತ್ರೆ ಮಾಡಿದೇನೆ. ಬದರಿಕಾಶ್ರಮಕ್ಕೂ ಹೋಗಿದ್ದೆ. ನನ್ನ ಮನೆಯಲ್ಲೇ ಎರಡು ಗುಡಿ ಕಟ್ಟಿಸಿ ಅವಕ್ಕೆ ಹೊಲಮನೆ ದತ್ತಿಬಿಟ್ಟು ನಡೆಸುತ್ತಿದೇನೆ. ರಾಮ-ಕೃಷ್ಣರ ಅವತಾರ ವಿದ್ದಂತೆ ಈಗ ಮಹಾತ್ಮಾ ಗಾಂಧೀ ಅವತಾರ ಆಗಿದೆಯಂತೆ. ಆತನ ದರ್ಶನ ಆಗುವತನಕ ನನಗೆ ಸಾವು ಬಾರದಪ್ಪ.' ಮಾತಾಡುವಾಗ ಆಕೆಯ ಕಣ್ಣಿನಲ್ಲಿ ಹನಿ ತುಂಬಿತು. ಇದುರಿಗೆ ನಿಂತಿದ್ದಾತನೇ ಆತ ಎಂಬುದು ಆಕೆಗೆ ಹೊಳೆ ಯಿತು. ತಾನು ಯಾರ ದರ್ಶನ ಬಯಸಿದಳೋ ಆತನೇ ಆಕೆಯೊಡನೆ ಮಾತಾಡುತ್ತಿದ್ದ. ಆಕೆಯ ಆನಂದಕ್ಕೆ ಮೇರೆ ಉಂಟೆ? ಇಂಥ ಹೊತ್ತಿನಲ್ಲಿ ಅಲ್ಲದೆ ಮತ್ತೆ ಯಾವಾಗ ತನ್ನ ಬಾಳಿನ ಮಹಾಸಮಸ್ಯೆ ಬಿಡಿಸಬೇಕು. 'ಸ್ವಾಮಿ, ಈ ಆಸೆ, ಈ ದಾಹವನ್ನು ಶಮನಮಾಡುವುದು ಹೇಗೆ?' ಎಂದು ಕೇಳಿದಳು. ಆ ನೂರಾನಾಲ್ಕು ವರ್ಷದ ಮುದುಕಿಯೂ ಈ ಪ್ರಶ್ನೆ ಕೇಳ ಬೇಕೆ! ಗಾಂಧೀಜೀ ನಕ್ಕರು. 'ಹೌದು ತಾಯಿ. ಸುಖದ ಆಸೆ ಸಾಯದೆ ಕರ್ಮಬಂಧನ ತಪ್ಪದು' ಎಂದು ಆಕೆಯ ಸ್ವಂತ ಸುದ್ದಿ ವಿಚಾರಿಸಿದರು. ಆಕೆ ಹನ್ನೆರಡನೆ ವಯಸ್ಸಿಗೇ ವಿಧವೆಯಾದಳಂತೆ. ಆಗಿನಿಂದಲೂ ನಿಯಮ ವಾಗಿ ಬಾಳಿದಳು. ಆ ನೇಮ - ಆ ತಪಸ್ಸು ಎಲ್ಲಾ ಹೇಳಿದಳು. ಸದ್ಯ ದಿನಕ್ಕೊಂದು ಸಲ ದರ್ಭೆ ಹುಲ್ಲಿನ ರಸದ ಪಾನಕ ಒಂದು ಲೋಟ ಕುಡಿಯು ತ್ತಿದ್ದಳು.

ಆ ದಿನ ಬೆಳಗಿನಿಂದ ಅದೇ ಮರದ ಕೆಳಗೆ ಗಾಂಧೀಜಿಯ ದರ್ಶನ ಕ್ಕಾಗಿಯೆ ಆಕೆ ಕಾದು ನಿಂತಿದ್ದಳು. ಓಡಾಡಲು ಆಕೆಗೆ ಬಲವಿರಲಿಲ್ಲ. ಕೊಡೆ ಹಿಡಿದು ಹಾಗೇ ನಿಂತಿದಾಳೆ. ಗಾಂಧೀಜಿಯ ಮೋಟಾರು ಅಂಬಿನ ವೇಗದಿಂದ ಹೋಗುತ್ತಿತ್ತು. ಟೈರು ಹರಿಯದಿದ್ದರೆ ಗಾಡಿ ನಿಲ್ಲುವ ಸಂಭವವೇ ಇರಲಿಲ್ಲ. ಆ ಮರದ ಅಡಿಯಲ್ಲಿ ಹರಿಯದೆ ಸ್ವಲ್ಪ ದೂರದಲ್ಲಿ ಹರಿದಿದ್ದರೂ ಆ ಮುದುಕಿಗೆ ದರ್ಶನ ಆಗುತ್ತಿರಲಿಲ್ಲ. ಹತ್ತೇ ಹೆಜ್ಜೆಯಾದರೂ ನಡೆದು ಅಲ್ಲಿಗೆ ಹೋಗಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಆಕೆಯ ನಿರ್ಮಲ ಬಲವೇ ಆಕೆಗೆ ಆ ಭಾಗ್ಯ ಕೊಟ್ಟಿತು. ಯಾದೃಶೀ ಭಾವನಾ ಯತ್ರಸಿದ್ಧಿ ರ್ಭವತಿ ತಾದೃಶೀ—ಅಲ್ಲವೆ!

ಒಂದು ಸಲ ಕೆಲವರು ಹೆಂಗಸರು ಗಾಂಧೀಜಿಯ ಭೇಟಿಗೆ ಬಂದಿದ್ದರು. ಅವರೆಲ್ಲರೂ ಹಣವಂತರ ಮನೆಯವರು. ನಗೆಮಾತು ನಾಲ್ಕು ನಡೆದ ಮೇಲೆ ಅವರಲ್ಲಿ ಹಿರಿಯಳಾಗಿದ್ದಾಕೆ ಖಾದೀ ಉಡುವುದಾಗಿ ಮಾತು ಕೊಟ್ಟಳು. ಗಾಂಧೀಜೀ ಕೇಳಿದರು: 'ನಿನಗೆ ಮದುವೆ ಆಗಿದೆಯೇನಮ್ಮ?'

'ಹೂಂ. ಆಗಿದೆ.'

ಪ್ರಶ್ನೆಗೆ ಮೊದಲಾಯಿತು. ನಿನ್ನ ಗಂಡ ಖಾದೀ ಹಾಕುತ್ತಾನೆಯೆ?'

'ಇಲ್ಲ.' ಈ ಮಾತು ಹೇಳುವಾಗ ಆಕೆಗೆ ತುಂಬ ನಾಚಿಕೆ; ಕೆನ್ನೆ ಕೆಂಪೇರಿತ್ತು.

'ಹಾಗಾದರೆ ನಿನ್ನ ಗಂಡ ನಿನ್ನನ್ನು ಖಾದೀ ತೊಡಗೊಡುತ್ತಾನೆಯೋ ಇಲ್ಲವೋ?'

ಇಕ್ಕಟ್ಟಿನ ಪ್ರಶ್ನೆ; ಏನು ಹೇಳಬೇಕು. 'ಅವರು ಹೇಳಿದಹಾಗೆ ಮಾಡುತ್ತೇನೆ.' ಗರತಿಯಾದವಳ ಉತ್ತರ ಅದು.

ಆದರೆ ಗಾಂಧೀಜೀ ಬಿಡಬೇಕಲ್ಲ. 'ಹಾಗಾದರೆ ನೀನು ಕೊಟ್ಟ ಮಾತಿನ ಗತಿಯೇನಮ್ಮ?' ನಗುತ್ತ ಕೇಳಿದರು.

ಆಕೆಗೆ ದಿಕ್ಕುತೋರದೆ ಕಕ್ಕಾಬಿಕ್ಕಿ ಆದಳು.

ಬಾಪುವೇ ದಾರಿ ತೆಗೆದರು. ಆಕೆಗೆ ಹೇಳಿಕೊಟ್ಟರು: 'ನಿನ್ನ ಗಂಡನನ್ನು ಒಪ್ಪಿಸಲಾರೆಯೇನು ನೀನು?'

ಅಂಜುತ್ತ ಅಂಜುತ್ತ ಆಕೆ ನುಡಿದಳು, 'ಹೂಂ.'

'ಒಂದು ವೇಳೆ ಆತ ಖಾದೀ ತೊಡಬೇಡ ಎಂದರೆ ಆತನ ಮಾತು ಮೀರುತ್ತೀಯೆ ಅಲ್ಲವೆ?'

ಉತ್ತರವಿಲ್ಲ; ಮೌನ.

ಮತ್ತೆ ಇವರೇ ಮಾತು ಸಾಗಿಸಿದರು. 'ಸೀತಾದೇವಿ ಶ್ರೀರಾಮಚಂದ್ರನ ಮಾತು ಮೀರಿದಾಳೆ; ಗೊತ್ತೇ ತಾಯಿ ನಿನಗೆ.'

ಆಕೆಗೆ ಆ ಕಥೆ ಹೊಳೆಯಲಿಲ್ಲ.

'ಕೇಳು. ಶ್ರೀರಾಮಚಂದ್ರ ಅಡವಿಗೆ ಬರಬೇಡ ಎಂದು ಸೀತೆಗೆ ಹೇಳಿದಾಗ ಆಕೆ ಅವನ ಮಾತು ಕೇಳಿದಳೆ! ಇಲ್ಲ. ಆತನನ್ನು ಹಿಂಬಾಲಿಸುವುದೇ ತನ್ನ ಧರ್ಮ ಎಂದು ಆಕೆಗೆ ಗೊತ್ತು. ಆಕೆಯ ಹಾಗೆ ನೀನೂ ನಿನ್ನ

ಗಂಡನಿಗೆ ಪೂಜೆಮಾಡು. ಆದರೆ ನಿನ್ನ ಧರ್ಮಕ್ಕೆ ಆತ ಅಡ್ಡಿಬಂದರೆ ಮರ್ಯಾದೆಯಾಗಿ ಆತನ ಮಾತು ಮೀರಬೇಕು. ತಿಳಿಯಿತೇನಮ್ಮ?'

ಆಕೆಯ ಗಂಡ ಬೇಡ ಎಂದರೂ ಖಾದೀ ತೊಡದೆ ಬಿಡುತ್ತಾಳೆಯೆ ಆಕೆ ಇನ್ನು! ಈಕೆಯನ್ನು ನೋಡಿ ಆತನೂ ತೊಡಬೇಕಷ್ಟೆ.

*   *   *

ಡಾಕ್ಟರ್ ಮಾಡ್ ರಾಯಡನ್ ಒಬ್ಬ ಆಂಗ್ಲ ವಿದುಷೀಮಣಿ. ಆಕೆಗೊಮ್ಮೆ ಗಾಂಧೀಜಿಯ ಸೌಜನ್ಯ ಅನುಭವಕ್ಕೆ ಬಂತು. ಲಂಡನ್ನಿನಲ್ಲಿ ಒಂದು ದೊಡ್ಡ ಸಭೆ. ಆ ಸಭೆ ಮುಗಿಸಿಕೊಂಡು ಗಾಂಧೀಜೀ ಮತ್ತೊಂದು ಸಭೆಗೆ ಹೋಗಬೇಕಾಗಿತ್ತು. ಇಲ್ಲಿಂದ ಆ ಸಭೆಗೆ ತನ್ನ ಮೋಟಾರಿನಲ್ಲಿ ಕರೆದುಕೊಂಡು ಹೋಗುವುದಾಗಿ ಆಕೆ ಗಾಂಧೀಜಿಗೆ ಹೇಳಿಕೊಂಡಿದ್ದಳು. ಸಭೆ ಮುಗಿದು ಹೊರಗೆ ಬಂದಾಗ ಜನದ ಗೆದ್ದಲವೋ ಗದ್ದಲ. ಸಾಗರದ ಅಲೆಗಳಂತೆ. ಆಕೆಗೆ ಆ ಗದ್ದಲಲ್ಲಿ ತನ್ನ ಕಾರು ಕಾಣಲಿಲ್ಲ. ಊರಿನ ಮೋಟಾರುಗಳೆಲ್ಲ ಅಲ್ಲೇ ಸುಳಿದಾಡುತ್ತಿದ್ದವು. ಆಕೆಯೇ ಹೇಳಿದಾಳೆ. 'ಲಂಡನ್ನಿನ ಕಾರುಗಳೆಲ್ಲ ತಮ್ಮ ಸಾರಥಿಗೆ ಆ ವರ–ಗಾಂಧೀಜೀ ತಮ್ಮ ಕಾರಿನಲ್ಲಿ ಕೂತುಕೊಳ್ಳುವ ಭಾಗ್ಯ- ಸಿಗಲಿ ಎಂದು ಅಲ್ಲೇ ಸುಳಿದಾಡಿದವು. ಗಾಳಿ ತಂಪಾಗಿತ್ತು. ಸ್ವಲ್ಪ ಮಳೆಯೂ ಬಂದಿತ್ತು. ಗಾಂಧೀಜಿಗೆ ಮೈ ತುಂಬ ಅರಿವೆಯಿರಲಿಲ್ಲ. ಇಂಥ ಪ್ರಸಂಗದಲ್ಲಿ ಅವರನ್ನು ಕಾಯಿಸಬಾರದು ಎನಿಸಿ ದುಃಖವಾಯಿತು. ನೀವು ಮತ್ತೊಂದು ಕಾರಿನೊಳಗೆ ಹತ್ತಿಬಿಡಿರಿ, ನನ್ನ ಕಾರಿಗಾಗಿ ಕಾಯಬೇಡಿ ಎಂದೆ. ಬೇಡ ಬೇಡ; ನಿನ್ನ ಕಾರಿಗಾಗಿ ಕಾಯುತ್ತೇನೆ ಎಂದರು ಗಾಂಧೀಜೀ. ನನಗಂತು ತಲೆಯ ಮೇಲೆ ಒಂದು ಕಿರೀಟ ಇಟ್ಟಹಾಗೆ ಅನಿಸಿತು.' ಕೃಷ್ಣನ ಅರಮನೆಯ ವೈಭವವನ್ನು ಕಂಡು ಕುಚೇಲ ತಾನು ತಂದಿದ್ದ ಅವಲಕ್ಕಿಯ ಗಂಟು ನಾಚಿಕೆಯಿಂದ ಮರೆ ಮಾಚಲು ಯತ್ನಿಸಿದನಂತೆ. ಕೃಷ್ಣನ ಚುರುಕುಗಣ್ಣಿಗೆ ಅದು ಬಿತ್ತು. ಕುಚೇಲನ ನಡುಗುವ ಕೈಯಿಂದ ಅದನ್ನು ಕಸಿದುಕೊಂಡು ಗಬಗಬ ಆ ಅವಲಕ್ಕಿ ಮುಕ್ಕಿದನಂತೆ. ಆ ದಿನ ಅವನಿಗೆ ದೇವರು ಅನುಗ್ರಹ ಕಿರೀಟ ಇಟ್ಟಾಗ ಇಂಥದೇ ಆನಂದ ಅನುಭವವಾಗಿರಬೇಕು.

*   *   *

ಚೀನೀ ದಳಪತಿ ಚಿಯಾಂಕೈಷೆಕ್, ಅವರ ಸತಿ ಇಬ್ಬರೂ ಹಿಂದುಸ್ತಾನಕ್ಕೆ ಬಂದಿದ್ದರು. ಇಷ್ಟುದೂರ ಬಂದು ಹಿಂದುಸ್ತಾನದಲ್ಲಿ ನಾಲ್ಕುದಿನ ಇದ್ದು, ಗಾಂಧೀಜಿಯ ದರ್ಶನಮಾಡದೆ ಹಾಗೆಯೆ ಹಿಂದಿರುಗುವುದೆ ? ಚೀನೀ ದಳಪತಿ ಸೇವಾಗ್ರಾಮಕ್ಕೆ ಹೋಗಿ ಗಾಂಧೀಜಿಯನ್ನು ನೋಡಬಯಸಿದರು. ಹಾಗೆ ಜವಾಹರಲಾಲರು ಗಾಂಧೀಜಿಗೆ ತಿಳಿಸಿದರು. ವರ್ಧಾ ಜಿಲ್ಲಾಧಿಕಾರಿಯೂ ನಿಮಗೆ ಬಿಡುವಿದೆಯೆ ಎಂದು ವಿಚಾರಿಸಿದ. ಆದರೆ ಏಕೋ ಏನೋ ದಳಪತಿಗೆ ಸೇವಾಗ್ರಾಮಕ್ಕೆ ಬರಲಾಗಲಿಲ್ಲ. 'ನೀವೇ ದಿಲ್ಲಿಗೆ ಬನ್ನಿ ಎಂದು ಕರೆಯಲಾರೆ. ನಿಮ್ಮನ್ನು ನೋಡದೆ ಹೋಗಬೇಕಲ್ಲ ಎಂದು ಬಲು ದುಃಖವೇನೊ ಆಗುತ್ತಿದೆ' ಎಂದು ತಿಳಿಸಿದರು. 'ಉಂಟೆ ? ಎಲ್ಲಿಗೆ ಬೇಕಾದರೂ ಬಂದು ನಿಮ್ಮನ್ನು ನೋಡುತ್ತೇನೆ' ಎಂದು ಗಾಂಧೀಜೀ ಮಾರು ಬರೆದರು. ಕೊನೆಗೆ ಕಲ್ಕತ್ತೆಯಲ್ಲಿ ಭೇಟಿಯಾಗಲು ನಿರ್ಣಯವಾಯಿತು. ಫೆಬ್ರವರಿ ೨೦, ೧೯೪೨.

ಗಾಂಧೀಜೀ ಕಲ್ಕತ್ತೆ ತಲಪಿದ ಒಂದು ಗಂಟೆಯೊಳಗಾಗಿಯೆ ಚೀನೀ ದಂಪತಿಗಳು ಬಿರಲಾ ಪಾರ್ಕಿಗೆ ಬಂದರು. ಅದೇ ಗಾಂಧೀಜಿಯ ಬಿಡಾರ. ಆಗ ಸುಮ್ಮನೆ ದರ್ಶನಮಾಡಿಕೊಂಡು ಹೋಗಿ ತರುವಾಯ ಮಧ್ಯಾಹ್ನ ಮತ್ತೆ ಬರೋಣವೆಂದು ಅವರ ಯೋಚನೆ. 'ಸರಕಾರಿ ಬಿಡಾರಕ್ಕೆ ಬನ್ನಿ ಎಂದು ನಿಮ್ಮನ್ನು ಕರೆಯಲಾರೆ. ನಿಮ್ಮ ಊಟ ವಿಶ್ರಾಂತಿ ಆದಮೇಲೆ ಮತ್ತೆ ಬರುತ್ತೇವೆ' ಎಂದರು ದಳಪತಿ.

'ನಾನು ಇಲ್ಲಿರುವಷ್ಟು ಹೊತ್ತೂ ನಿಮ್ಮ ಜೊತೆಯಲ್ಲೇ ಇರೋಣವೆಂದು ಬರುವಾಗ ದಾರಿಯಲ್ಲಿ ರೈಲಿನಲ್ಲೆ ಊಟ ಮುಗಿಸಿಬಿಟ್ಟೆ. ನಿಮಗೆ ತೊಂದರೆಯಾಗದಿದ್ದರೆ ಇಲ್ಲೇ ನಮ್ಮ ಜೊತೆಯಲ್ಲಿದ್ದು ಹಿಂದುಸ್ತಾನಿ ಊಟದ ರುಚಿ ನೋಡಿ. ಆಮೇಲೆ ನಾನು ಹಿಂದಿರುಗುವ ಕೊನೆಯ ನಿಮಿಷದವರೆಗೂ ನಾವು ಮಾತುಕತೆ ಆಡಬಹುದು. ಅದರಿಂದ ಹೋಗಿಬರುವ ಹೊತ್ತು ವೃಥಾ ಕಳೆಯದೆ ಅನುಕೂಲವಾಗುತ್ತದೆ.'

ಚೀನೀ ದಂಪತಿಗಳು ಅದಕ್ಕೊಪ್ಪಿದರು. ಬಿರಲಾ ಕುಟುಂಬದ ಅತಿಥಿಗಳಾಗಿ ಅಲ್ಲೇ ಉಳಿದರು. ಗಾಂಧೀಜೀ ರೈಲಿಗೆ ಹೊರಡುವ ತನಕ ಇದ್ದರು.

ಗಾಂಧೀಜೀ ಅವರಿಗೆ ಸತ್ಯಾಗ್ರಹ, ಅಸಹಕಾರಗಳ ಹುಟ್ಟು - ಬೆಳವಣಿಗೆಗಳನ್ನು ವಿವರಿಸಿದರು. ತಮ್ಮ 'ಮಹಾಸ್ತ್ರ'ವನ್ನು ಪ್ರಯೋಗಿಸಿ ತೋರಿಸಿದರು. 'ಈ ಅಸ್ತ್ರಪ್ರಯೋಗದಲ್ಲಿ ಸದ್ದಿಲ್ಲ, ಸಾವಿಲ್ಲ; ಏನಾದರೂ ಫಲವಾದರೆ ಅದು ಜೀವದಾನ.' ದಳಪತಿಯ ಸತಿ ಧನುಷ್ತಕಲಿಯ ಪ್ರಯೋಗವನ್ನು ನೋಡಿ "ನೀವಿದನ್ನು ನನಗೆ ಕಲಿಸಬೇಕು" ಎಂದರು. "ಸೇವಾಗ್ರಾಮಕ್ಕೆ ಬನ್ನಿ, ನಿಮಗಿದನ್ನು ಹೇಳಿಕೊಡುತ್ತೇನೆ. ತಮ್ಮ ರಾಯಭಾರಿಯಾಗಿ ದಳಪತಿ ನಿಮ್ಮನ್ನಿಲ್ಲಿ ಬಿಡಲಿ; ಮಗಳಂತೆ ನಾನು ದತ್ತುತೆಗೆದುಕೊಳ್ಳುತ್ತೇನೆ" ಎಂದರು ಗಾಂಧೀಜೀ. ಅಷ್ಟುಬೇಗನೆ ಆ ಆತ್ಮೀಯತೆ, ಆ ಸಲಿಗೆ! ಗಾಂಧೀಜೀ ಇದರಲ್ಲಿ ಬಹು ಕುಶಲರು.

ಅರ್ಧಗಂಟೆ ಹೊತ್ತು ಚೀನೀ ದುಬಾಸಿ ಗಾಂಧೀಜೀ ಹೇಳಿದುದನ್ನು ದಳಪತಿಗೆ, ದಳಪತಿಯ ಮಾತನ್ನು ಗಾಂಧೀಜಿಗೆ ಭಾಷಾಂತರಿಸಿ ತಿಳಿಸಿ ಹೇಳಿದ. ದಳಪತಿಗೆ ಇಂಗ್ಲೀಷು ಬಾರದು. ಗಾಂಧೀಜೀ ಹೇಳಿದರು: "ನಮ್ಮದೇನು ಒಣ ಸಂಪ್ರದಾಯದ ಮಾತಲ್ಲ; ದಳಪತಿಯ ಸತಿಯೆ ಏಕೆ ತಾವು ಹೇಳಿದ್ದನ್ನು ಭಾಷಾಂತರಿಸಬಾರದು?"

"ಸರ್ವನಾಶ. ನಿಮ್ಮ ಮಂತ್ರಕ್ಕೆ ಎಲ್ಲರೂ ಹೇಗೆ ಮುಗ್ಧರಾಗುತ್ತಾರೋ ನಾ ಬಲ್ಲೆ. ನನ್ನ ಪತಿ ಬಹಳ ತೊಂದರೆ ಕೊಡುತ್ತಾರೆ. ಯಾವುದಾದರೂ ಕ್ಲಿಷ್ಟವಾದ್ದನ್ನು ತಿಳಿಸಿ ಹೇಳಬೇಕಾದರೆ, ಸೂಕ್ಷ್ಮವಾದ ವಿಚಾರತರಂಗ ಯಾವದನ್ನಾದರೂ ಅರ್ಥಮಾಡಿ ಹೇಳಬೇಕಾದರೆ, ಇವರ ಭಾವವನ್ನು ನಾನೇ ಇತರರಿಗೆ ತಿಳಿಸಬೇಕು. ಆದರೆ ಈಗ ಒಂದು ವರ್ಷವಾಯಿತು. ಈ ದುಬಾಸಿಯ ಕೆಲಸವನ್ನು ಅಧಿಕಾರಿಯೆ ಮಾಡುತ್ತಿದಾನೆ; ನಾನು ಕೆಲಸವಿಲ್ಲದೆ ಹಾಯಾಗಿ ಕಾಲ ಕಳೆದೆ" ಎಂದರು ಶ್ರೀಮತಿ ಚಿಯಾಂಗ್.

"ಹಾಗಾದರೆ ನೀನು ಪತಿವಿಧೇಯಳಲ್ಲದ ಸತಿ" ಎಂದರು ಗಾಂಧೀಜೀ ನಗುತ್ತ.

"ಉಂಟೆ? ಅವರೇನು ದುಬಾಸಿಯನ್ನು ಮದುವೆಯಾದರೆ? ಹೆಣ್ಣನ್ನು ಮದುವೆಯಾದರು" ದಳಪತಿಯ ಸತಿ ಚುರುಕಾಗಿ ಹೇಳಿದಳು. ಹೀಗೆ ಸಲಿಗೆಯ ಸಲ್ಲಾಪಬೆಳೆದು ಕೆಲವು ಹೊತ್ತಿನಮೇಲೆ ಆಕೆ ನಗುತ್ತ ಹೇಳಿದಳು: 'ಎಷ್ಟೋ ಜನರನ್ನು ನೋಡಿದೇನೆ. ಯಾರಿಗೂ ನಾನು ಮರುಳಾಗಲಿಲ್ಲ.

ಈ ಮಹಾತ್ಮ ಮಾತ್ರ ನನ್ನನ್ನು ಮರುಳುಮಾಡಿಬಿಟ್ಟ.'' ಹೀಗೆ ನಡೆಯಿತು ಮಾತುಕತೆ. ಚೀನಾಕ್ಕೆ ಹಿಂದಿರುಗುವಾಗ ಧನುಷ್ ತಕಲಿ ತೆಗೆದುಕೊಂಡು ಹೋಗಲು ಆಕೆ ಮರೆಯಲಿಲ್ಲ.

* * *

ಕಾಲದ ವಿಷಯದಲ್ಲಿ ಗಾಂಧೀಜಿಯದು ಕಪಿಮುಷ್ಟಿ. ಒಂದು ನಿಮಿಷ ವಾದರೂ ತಡವಾಗಕೂಡದು. ಹೇಳಿದ ಗಳಿಗೆಯಲ್ಲೇ ಆಗಿ ಮುಗಿಯಬೇಕು. ಆ ಹಟ ಅವರಿಗೆ ಧರ್ಮ.

ಒಂದು ಸಲ ಬೊಂಬಾಯಲ್ಲಿದ್ದಾಗ ದೆಹಲಿಗೆ ಹೋಗಬೇಕಾಯಿತು. ಯಾರೋ ಒಬ್ಬರು ಕಾರು ಕೊಡುತ್ತೇವೆ ಸ್ಟೇಷನ್ನಿಗೆ ಹೋಗಲು ಎಂದರು. 'ಆಗಲಿ ಹೊತ್ತಿಗೆ ಸರಿಯಾಗಿ ಮಣಿಭವನಕ್ಕೆ ಕಳಿಸಿಬಿಡಿ' ಎಂದರು.

ಮಧ್ಯಾಹ್ನದ ಹೊತ್ತು. ಎಲ್ಲಾ ಕೆಲಸ ಎರಡು ನಿಮಿಷ ಮುಂಚೆಯೇ ಮುಗಿಸಿಕೊಂಡು ಕಾದಿದ್ದರು ಕಾರಿಗೆ; ಕೈಯಲ್ಲಿ ಆ ಗಡಿಯಾರ! ಕಾರು ಬರಬೇಕಾದರೆ ಹೊತ್ತಾಯಿತು. ಹೊತ್ತು ಮೀರಿತು. ಮಾತಾಡದೆ ಗಾಂಧೀಜೀ ಕೈಯಲ್ಲಿ ಕೋಲುಹಿಡಿದು ಹೊರಟುಬಿಟ್ಟರು. ಉರಿಬಿಸಿಲು, ಬರಿದಲೆ. ಮಹದೇವ ಭಾಯಿಯ ಒದ್ದಾಟ ಹೇಳತೀರದು. ಬೇರೆ ಕಾರು ತರಿಸುತ್ತೇವೆಂದರೂ ನಿಲ್ಲಲಿಲ್ಲ. ಸರಸರ ಹಾರುಗಾಲು ಹಾಕಿಬಿಟ್ಟರು ಸ್ಟೇಷನ್ನಿನತ್ತ.

ಒಂದೆರಡು ನಿಮಿಷದಲ್ಲಿ ಕಾರುಬಂದಿತು. ಡ್ರೈವರ್ ನಡೆದದ್ದು ಕೇಳಿ ಪೆಚ್ಚಾದ, ತಲ್ಲಣಿಸಿಹೋದ. ಒಂದೇ ವೇಗದಲ್ಲಿ ಹಿಂಬಾಲಿಸಿದ ಗಾಂಧೀಜಿಯನ್ನು. ಗಿಜಿಗಿಜಿಯಾಡುವ ಜನರ ಗುಂಪಿನಲ್ಲಿ ಅತ್ತ ಇತ್ತ ನೋಡದೆ ತಲೆ ತಗ್ಗಿಸಿ ಹೋಗುತ್ತಿದ್ದರು ಗಾಂಧೀಜೀ. ಅವರ ಹತ್ತಿರ ಕಾರು ನಿಲ್ಲಿಸಿ ಹೇಳಿದ ಡ್ರೈವರ್: 'ನನ್ನದು ಘೋರ ಅಪರಾಧ ಮನ್ನಿಸಬೇಕು. ನೀವು ನಡೆದುದು ಸಾಕು. ದಯವಿಟ್ಟು ಕಾರಿನಲ್ಲಿ ಕುಳಿತುಕೊಳ್ಳಿ' ಎಂತ. 'ಉಹು. ನಾನು ನಡೆದೇ ಹೋಗುತ್ತೇನೆ. ನಿನ್ನ ಪಾಪಕ್ಕಿದು ಪ್ರಾಯಶ್ಚಿತ್ತ. ನಾನು ಕಾರು ಹತ್ತುವುದಿಲ್ಲ. ಈಗ ನಾನು ಕಾರು ಹತ್ತಿಬಿಟ್ಟರೆ ನೀನು ನಿನ್ನ ಹೊತ್ತುಗಳ್ಳತನವನ್ನು ಮರೆಯುವುದಿಲ್ಲ'' ಎಂದು ನಡದೇಬಿಟ್ಟರು ಸ್ಟೇಷನ್ನಿಗೆ. ರೈಲೂ ಸಿಕ್ಕಿತು.

* * *

ದಕ್ಷಿಣ ಆಫ್ರಿಕದಲ್ಲಿ ಒಮ್ಮೆ ಸೆರೆಮನೆಯಿಂದ ಗಾಂಧೀಜೀ ಹೊರಗೆ ಬರುವ ಹೊತ್ತಿಗೆ, ಅವರ ಗೆಳೆಯ ಪೋಲಕ್‌ನ ಹೆಂಡತಿ ಮಿಲ್ಲೀ ಪೋಲಕ್ ತುಂಬಾ ಕೃಶವಾಗಿದ್ದಳು. ಚಳುವಳಿಯ ಜವಾಬದಾರಿ; ಸಾಲದ್ದಕ್ಕೆ ಬಾಣಂತಿ. ರಾತ್ರಿ ನಿದ್ದೆಬಾರದೆ ಮೈ ಬಳಲಿಹೋಗಿತ್ತು. ಮಗುವಿಗೆ ಎಂಟು ತಿಂಗಳು. ಎದೆಹಾಲು ಬತ್ತಿದರೂ ಮಗು ಮೊಲೆ ಬಿಡಲೊಲ್ಲದು. ಪಾಪ! ಆಕೆಗೆ ದಿಕ್ಕು ತೋರದಂತಾಗಿತ್ತು.

ಗಾಂಧೀಜೀ ಕೇಳಿದರು: 'ನಾಲ್ಕೆಂಟು ದಿನ ರಾತ್ರಿ ಆ ಮಗುವನ್ನು ಯಾರಾದರೂ ನೋಡಿಕೊಂಡರೆ ನೀನು ನಿದ್ದೆಮಾಡೀಯೋ?'

'ನಿದ್ದೆ ಬಂದೀತೋ ಬಾರದೋ, ಈಗಂತೂ ನನ್ನ ಅವಸ್ಥೆ ಮುಗಿಯುತ್ತ ಬಂತು.'

'ಮಗುವನ್ನು ನನ್ನ ಕೈಗೆ ಕೊಡುತ್ತೀಯಾ?' ಗಾಂಧೀಜೀ ಕೇಳಿದರು.

'ತೆಗೆದುಕೊಂಡು ಏನು ಮಾಡುತ್ತೀರಿ?'

'ನನ್ನ ಕೈಗೆ ಮಗುವನ್ನು ಕೊಡು. ನಾನೆಲ್ಲ ಮೊಲೆಹಾಲು ಬಿಡಿಸುತ್ತೇನೆ. ತಾಯಿಯನ್ನು ಬಿಟ್ಟು ದೂರ ಮಲಗುವಂತೆ ಮಗುವನ್ನು ನಾನು ರವಿಸುತ್ತೇನೆ.'

ಆಕೆ ಒಪ್ಪಿದಳು. ಆವೊತ್ತು ಏನೋ ಸಭೆ. ಸಭೆ ಮುಗಿಸಿಕೊಂಡು ಬಂದಮೇಲೆ – ೧೧ ಗಂಟೆಗೆ ಮುಂಚೆ ಸಾಧ್ಯವಿರಲಿಲ್ಲ – ಮಗು ಗಾಂಧೀಜಿಯ ಅಧೀನ ಎಂದು ಗೊತ್ತಾಯಿತು.

ರಾತ್ರಿ ಮನೆಗೆ ಬಂದಾಗ ಒಂದು ಗಂಟೆ. ಆಗ ಗಾಂಧೀಜೀ ಮಿಲ್ಲೀ ಕೊಠಡಿಗೆ ಹೋಗಿ ಮಗುವನ್ನೆತ್ತಿಕೊಂಡು ಹೋಗಿ ತನ್ನ ಚಾಪೆಯ ಪಕ್ಕದಲ್ಲಿ ಮಲಗಿಸಿಕೊಂಡರು. ಮಗು ಅತ್ತರೆ ಕುಡಿಸಲು ನೀರಿರಲಿ ಎಂದು ಒಂದು ತಂಬಿಗೆ ನೀರು, ಲೋಟ ಇಟ್ಟುಕೊಂಡರು.

ಮಗು ರಾತ್ರಿ ಏಳಲೇ ಇಲ್ಲ; ಹಾಯಾಗಿ ನಿದ್ದೆಮಾಡಿತು. ಹೀಗೆ ೧೫ ದಿನ ನಡೆವ ಹೊತ್ತಿಗೆ ಬಾಣಂತಿಗೂ ನಿದ್ದೆ ಬರುವಂತಾಯಿತು; ಮಗುವೂ ಮೈಯಿಟ್ಟಿತು.

* * *

ಜೋಹಾನೆಸ್‌ಬರ್ಗ್‌ನಲ್ಲಿ ಒಂದು ಸಭೆ. ಜನ ಕಿಕ್ಕಿರಿದಿತ್ತು. ಗಾಂಧೀಜೀಯ ಭಾಷಣವೆಂದರೆ ಯಾವಾಗಲೂ ಅಷ್ಟೆ. ಭಾಷಣ ಮುಗಿದಮೇಲೆ ವೇದಿಕೆಯಿಳಿದು ಬಂದು ಅವರಿವರೊಡನೆ ಮಾತಾಡಿ ಗಾಂಧೀಜೀ ಮನೆಗೆ ಹೊರಟರು. ಶ್ರೀಮತಿ ಮಿಲ್ಲೀಯೂ ಜೊತೆಗಿದ್ದಳು. ಸಭಾಭವನದ ಹೊರಗೆ ಬಂದಾಗ ಹೊರಬಾಗಿಲ ಮರೆಯಲ್ಲಿ ಯಾರೋ ನಿಂತಿದ್ದುದು ಕಂಡಿತು. ಗಾಂಧೀಜೀ ಅದನ್ನು ನೋಡಿದರು. ಅವನ ಬಳಿಗೆ ಹೋಗಿ ಹೆಗಲಮೇಲೆ ಕೈಹಾಕಿ ಮೆಲುದನಿಯಲ್ಲಿ ಗಂಭೀರವಾಗಿ ಏನೋ ಮಾತಾಡಿದರು. ಆ ಮನುಷ್ಯ ಮೊದಲು ಗಾಂಧೀಜಿಯ ಜೊತೆಗೆ ಬರಲು ಅನುಮಾನಿಸಿದ; ತರುವಾಯ ಬಂದ. ಇನ್ನೊಂದು ಪಕ್ಕದಲ್ಲಿ ಮಿಲ್ಲೀ ನಡೆಯುತ್ತಿದ್ದಳು. ಆ ಮಾತುಕತೆ ತೀರಾ ಮೆಲು, ಮೆದು; ಪಕ್ಕದಲ್ಲಿದ್ದ ಮಿಲ್ಲೀಗೂ ಕೇಳಲಿಲ್ಲ. ಬೀದಿಯುದ್ದಕ್ಕೂ ಹೀಗೆ ನಡೆದಮೇಲೆ ಆ ಮನುಷ್ಯ ಗಾಂಧೀಜಿಯ ಕೈಗೆ ಏನನ್ನೋ ಕೊಟ್ಟು ಹೊರಟುಹೋದ.

ಮಿಲ್ಲೀಗೆ ಎಲ್ಲಾ ಸೋಜಿಗವಾಗಿತ್ತು. ನಡೆದದ್ದೇನೆಂದು ಕೇಳಿದಳು. 'ಅಂಥಾದ್ದೇನು ಬೇಕಾಗಿತ್ತು ಅವನಿಗೆ?' ಎಂದಳು.

'ಹೌದು, ನನ್ನನ್ನು ಕೊಲ್ಲಬೇಕಾಗಿತ್ತು.'

'ಕೊಲ್ಲಬೇಕಾಗಿತ್ತು; ನಿಮ್ಮನ್ನು ಕೊಲ್ಲಬೇಕಾಗಿತ್ತೆ? ಏನು ವಿಪರೀತ! ಅವನಿಗೇನು ಹುಚ್ಚೆ?'

'ಇಲ್ಲ; ನಮ್ಮ ಜನಕ್ಕೆ ನಾ ದ್ರೋಹಮಾಡಿದೇನೆಂದು ಅವನು ತಿಳಿದಿದಾನೆ; ಸರಕಾರದೊಡನೆ ಸೇರಿ ಜನಕೆ ವಿರುದ್ಧ ಒಳಸಂಚು ನಡೆಸುತ್ತಿದೇನೆಂದೂ ಮೇಲೆ ಮಾತ್ರ ಅವರ ನಾಯಕತನ ನಟಿಸುತ್ತಿದೇನೆಂದೂ ಅವನ ಭಾವನೆ.'

'ಇದೆಲ್ಲಾ ದುಷ್ಟತನ; ಘೋರ!' ಮಿಲ್ಲೀ ಗಡುಸಾಗಿ ಹೇಳಿದಳು. 'ಅವನಿಂದ ವಿಪತ್ತು ಬಂದೀತು. ಅವನನ್ನು ದಸ್ತಗಿರಿ ಮಾಡಿಸಬೇಕು. ಅಂಥವನನ್ನು ಹಾಗೆ ಬಿಟ್ಟುಬಿಡುವುದೆ? ಅದು ಹುಚ್ಚು!'

'ಹುಚ್ಚಲ್ಲ, ಭ್ರಾಂತಿ. ನೋಡಲಿಲ್ಲವೆ; ನಾನು ಒಂದೆರಡು ಮಾತು ಆಡಿದಮೇಲೆ ನನ್ನನ್ನು ತಿವಿಯಲು ತಂದಿದ್ದ ಚಾಕುವನ್ನೆ ನನಗೆ ಕೊಟ್ಟು ಹೋದನಲ್ಲ.'

'ಕತ್ತಲಲ್ಲಿ ನಿಮ್ಮನ್ನು ಇರಿದುಬಿಡುತ್ತಿದ್ದ, ಪಾಪಿ.'

'ಈ ವಿಷಯವಾಗಿ ಅಷ್ಟು ಚಿಂತಿಸಬೇಡ. ನನ್ನನ್ನು ಕೊಲ್ಲಬೇಕೆಂದು ಅವನು ಭಾವಿಸಿದ್ದ; ಆದರೆ ಧೈರ್ಯ ಸಾಲಲಿಲ್ಲ. ಅವನು ತಿಳಿದಹಾಗೆ ನಾನು ಅಷ್ಟು ದುಷ್ಟನಾದರೆ ನಾನು ಸಾಯಬೇಕಾದ್ದೇ. ಆ ಪ್ರಸಂಗ ಮುಗಿಯಿತು. ಇನ್ನು ಅದರ ವಿಚಾರವೆ ಬೇಡ. ಮತ್ತೆ ಅವನು ಹಾಗೆ ಮಾಡಲಾರ. ಅವನನ್ನು ನಾನು ದಸ್ತಗಿರಿ ಮಾಡಿಸಿದ್ದರೆ ಅವನು ನನಗೆ ಹಗೆಯಾಗುತ್ತಿದ್ದ. ಈಗ ಗೆಳೆಯನಾಗುತ್ತಾನೆ.'

* * *

ಗಾಂಧೀಜಿಗೆ ಒಳ್ಳೆ ವಕೀಲರೆಂಬ ಕೀರ್ತಿಯಿತ್ತು. ನ್ಯಾಯಾಲಯಕ್ಕೂ ಅವರನ್ನು ಕಂಡರೆ ಎಷ್ಟೋ ಗೌರವ. ಅಪರಾಧ ಮಾಡಿದವನ ಪರವಾಗಿ ನಿರಪರಾಧಿಯೆಂದು ಗಾಂಧೀಜೀ ವಾದಿಸರೆಂಬುದು ಎಲ್ಲರಿಗೂ ಗೊತ್ತಿತ್ತು. ಅಜ್ಞಾನ, ದುಡುಕು - ಹತ್ತು ಕಾರಣ ಹೇಳಿದರೂ ಅಪರಾಧಿಯಲ್ಲ ತನ್ನ ಕಕ್ಷಿಗಾರ ಎಂದು ಸುಳ್ಳು ಮಾತ್ರ ಹೇಳುತ್ತಿರಲಿಲ್ಲ. ಕಕ್ಷಿಗಾರ ಅಪರಾಧಿಯಾಗಿದ್ದೂ ನಿರಪರಾಧಿಯೆಂದು ಹೇಳಿ ತನಗೆ ಮೋಸಮಾಡಿದ ಎಂದು ಎಂದು ಗೊತ್ತಾದರೆ ಆ ಕಡತವನ್ನು ಬಿಸುಟು ಮೊಕದ್ದಮೆಯ ಮಧ್ಯದಲ್ಲೆ ನ್ಯಾಯಾಸ್ಥಾನ ಬಿಟ್ಟು ಹೊರಟು ಹೋಗುತ್ತಿದ್ದರು ಗಾಂಧೀಜೀ.

ಒಂದು ಸಲ ಕಳವಿಗಾಗಿ ಒಬ್ಬನನ್ನು ಹಿಡಿದರು. ಆ ಮೊಕದ್ದಮೆ ಗಾಂಧೀಜಿಯ ಕೈಗೆ ಬಂತು. ಕಕ್ಷಿಗಾರನನ್ನು ನೋಡಿದರು; ಪರೀಕ್ಷಿಸಿದರು. ಆ ತರ್ಕಕ್ಕೆ ಸೋತು ತನ್ನ ತಪ್ಪನ್ನು ಅವನು ಒಪ್ಪಿಕೊಂಡ.

'ಕದ್ದರೆ ಶಿಕ್ಷೆಯಾಗುತ್ತದೆ ಎಂದು ಗೊತ್ತಿರಲಿಲ್ಲವೆ? ಏಕೆ ಕದ್ದೆ? ನೀನು ಮಾಡುವುದು ತಪ್ಪು ಎಂದು ಗೊತ್ತಿರಲಿಲ್ಲವೆ?'

'ನಾನೇನು ಮಾಡಲಿ? ಹೊಟ್ಟೆಪಾಡು. ಬದುಕಬೇಕಲ್ಲ' ಬೇರೆ ಪ್ರಶ್ನೆಗೆ ಅವಕಾಶವೇ ಇಲ್ಲದಂತೆ ಹೇಳಿದ.

'ಬದುಕಬೇಕಲ್ಲ!' ಗಾಂಧೀಜೀ ಆ ಮಾತನ್ನು ಮೆಲಕು ಹಾಕಿದರು. ಒಡನೆಯೆ ಕೇಳಿದರು : 'ಏಕೆ?'

ಅದು ಗಾಂಧೀಜಿಯ ಸತ್ಯಶೋಧನೆ. ಏಕೆ ಬದುಕಬೇಕು? ಜಗತ್ತಿಗೆ ನಿನ್ನಿಂದ ಏನಾದರೂ ಪ್ರಯೋಜನವುಂಟೆ? ಈ ಪ್ರಶ್ನೆ ಸದಾ ಅವರ

ಮನಸ್ಸಿನಿದಿರು ಹಾಯುತ್ತಿರುತ್ತದೆ.

* * *

ಗಾಂಧೀಜೀ ನಂದಿಯಲ್ಲಿದ್ದಾಗ ಒಂದು ದಿನ ಇಬ್ಬರು ಪಾನಶಾಖಾಧಿಕಾರಿಗಳು ದರ್ಶನಕ್ಕೆ ಬಂದರು. ಅವರಲ್ಲಿ ಒಬ್ಬರು ಹಾಲಿ; ಒಬ್ಬರು ಮಾಜಿ. ಮಾಜಿ ಅಧಿಕಾರಿಗಳು 'ಈಗ ನನಗೆ ವಿಶ್ರಾಂತಿಯಾಗಿದೆ, ಆ ಕೆಲಸದಲ್ಲಿಲ್ಲ. ಈಗ ಇವರು ಇದಾರೆ; ಅವರಿಗೆ ಕೊಂಚ ತಾವು ಬಿಸಿ ತಗುಲಿಸೋಣಾಗಲಿ' ಎಂದರು.

'ಸರಿಯೆ. ಆದರೆ ನಿಮ್ಮ ವಿಶ್ರಾಂತಿವೇತನದಲ್ಲಿ ಅರ್ಧ ನನಗೆ ಕೊಡುತ್ತೀರೇನು ಹಾಗಾದರೆ?' ಎಂದುಬಿಟ್ಟರು ಗಾಂಧೀಜೀ.

* * *

ಒಬ್ಬ ನ್ಯಾಯಾಧಿಕಾರಿ. ಗಾಂಧೀಜಿಯ ದರ್ಶನಮಾಡಿ 'ತಾವು ಈ ನಂದೀ ಬೆಟ್ಟದಲ್ಲಿ ದೀರ್ಘಕಾಲವಿದ್ದು ಪೂರಾ ಗುಣವಾಗಿ ಹೋಗಬೇಕು. ಅದರಿಂದ ನಮ್ಮ ಬೆಟ್ಟದ ಕೀರ್ತಿಹೆಚ್ಚಿ ಹೆಚ್ಚು ಜನ ಬರುವಂತಾದೀತು' ಎಂದರು. 'ಅದಕ್ಕೇನು ಆಗಬಹುದು. ಅದರಿಂದ ಬರುವ ವರಮಾನದ ಆಧಿಕ್ಯದಲ್ಲಿ ಅರ್ಧ ನನ್ನ ಖಾದೀನಿಧಿಗೆ ಕೊಟ್ಟರೆ ಒಪ್ಪುತ್ತೇನೆ' ಎಂದರು ನಗುತ್ತ ಗಾಂಧೀಜೀ.

* * *

ಬೆಂಗಳೂರು ತಾತಾ ವಿಜ್ಞಾನಶಾಲೆಯ ವಿದ್ಯಾರ್ಥಿಗಳು ಗಾಂಧೀಜಿಯನ್ನು ತಮ್ಮ ಶಾಲೆಗೆ ಕರೆದರು. 'ನೀವು ಖಾದೀತೊಟ್ಟು ಕರೆದರೆ ಬರುತ್ತೇನೆ.' 'ನಮ್ಮಲ್ಲಿ ಕೆಲವರು ಖಾದೀ ತೊಡುತ್ತೇವೆ.' 'ಎಲ್ಲರೂ ಏಕೆ ತೊಡಬಾರದು? ಹಣ ಕೂಡಿಸಿ ಒಂದು ದಿನ ಕರೆಯಿರಿ.' 'ಹಣ ಕೂಡಿಸಿದೇವೆ. ನಾಳೆಯೇ ಸಿದ್ಧ ನಾವು.' 'ಹಣಕ್ಕಾದರೆ ಸಿದ್ಧ, ಖಾದೀ ತೊಡಲಿಕ್ಕೆ ಮಾತ್ರ ಇಲ್ಲವೆ?' 'ನಾವು ಕೂಡಿಸಿದ ಹಣ ಖಾದೀನಿಧಿಗೆ ಅಲ್ಲವೆ. ನಾವು ಖಾದಿ ತೊಡದಿದ್ದರೆ ತಾನೆ ಏನು?' ಎಂದ ಅವರಲ್ಲೊಬ್ಬ. ಒಡನೆಯೇ ಗಾಂಧೀಜೀ ಹೇಳಿದರು: 'ಕಾಸು ಕೊಟ್ಟರೆ ಮುಕ್ತಿ ದಕ್ಕೀತೆ? ಅವರವರ ಮೋಕ್ಷವನ್ನು ಅವರೇ ಗಳಿಸಬೇಕು.'

* * *

ಒಂದು ದಿನ 'ಕಸ್ತೂರಬಾ ನಿಮ್ಮ ತಾಯಿಯೇ' ಎಂದು ಯಾರೋ ಗಾಂಧೀಜಿಯನ್ನು ಕೇಳಿದರು. ಗಾಂಧೀಜಿಗೆ ಒಂದು ಕಡೆ ನಗು, ಒಂದು ಕಡೆ ಆನಂದ; ಹೌದು ಎಂದರು. ಮರುದಿನ ಬೆಳಗ್ಗೆ ಯಾವುದೋ ಒಂದು ಸಭೆ. ಅದಕ್ಕೆ ಕಸ್ತೂರಬಾ ಬಂದಿರಲಿಲ್ಲ. ತಾಯಿ ಬಂದಿಲ್ಲವೇಕೆ ಎಂದು ಜನ ಕೇಳಿದರು. ಗಾಂಧೀಜೀ ಹೇಳಿದರು: 'ನಿನ್ನೆ ರಾತ್ರಿ ಒಬ್ಬ ಗೃಹಸ್ಥ ಕಸ್ತೂರ ಬಾನ್ನು ನನ್ನ ತಾಯಿಯೆಂದು ತಪ್ಪುತಿಳಿದುಕೊಂಡ. ಆದರೆ ನನಗೂ ಆಕೆಗೂ ಅದೇನು ಅಂಥ ಅಪರಾಧವಲ್ಲ; ಸಂತೋಷವೇ ಎನ್ನಬೇಕು. ಎಷ್ಟೋ ವರ್ಷವಾಯಿತು; ಕಸ್ತೂರಬಾ ನಾನೂ ಮಾತಾಡಿಕೊಂಡು ನಮ್ಮ ದಾಂಪತ್ಯ ವನ್ನು ಬಿಟ್ಟುಬಿಟ್ಟದೇವೆ. ಅಂದಿನಿಂದ ಆಕೆ ನನಗೆ ಹೆಂಡತಿಯಾಗಿಲ್ಲ. ೪೦ ವರ್ಷದ ಕೆಳಗೆ ನಾನು ಅನಾಥನಾದೆ; ಸುಮಾರು ೩೦ ವರ್ಷದಿಂದ ಆಕೆ ನನ್ನ ತಾಯಾಗಿ ನಡೆದುಕೊಂಡಿದಾಳೆ. ತಾಯಿ, ಪರಿಚಾರಿಕೆ, ಬಾಣಸ ಗಿತ್ತಿ, ಕೆಲಸಗಿತ್ತಿ ಎಲ್ಲವೂ ಆಗಿದ್ದಾಳೆ. ನಮ್ಮ ಬಾಳು ಮೊದಲಾದಾಗಲೇ ನಾವು ಒಂದು ಏರ್ಪಾಡುಮಾಡಿಕೊಂಡೆವು: ಗೌರವವೆಲ್ಲ ನನಗೆ, ದುಡಿತವೆಲ್ಲ ಆಕೆಗೆ. ಇಲ್ಲದಿದ್ದರೆ, ಇಬ್ಬರೂ ಸಮವೆಂದು ಹೊರಟಿದ್ದರೆ ನನಗೆ ಹೊಟ್ಟೆ ಗಿಲ್ಲದೆ, ಉಡಲು ಬಟ್ಟೆಯಿಲ್ಲದೆ ಹೋಗುತ್ತಿತ್ತು. ಆಕೆಯ ವಿಷಯದಲ್ಲಿ ನೀವು ಆಡಿದ ಒಳ್ಳೆ ಮಾತನ್ನೆಲ್ಲ ನನ್ನ ಜೊತೆಗಾರರು ಆಕೆಗೆ ತಿಳಿಸುತ್ತಾರೆ; ನಾನು ಹೇಳಿದ ವಿವರಣೆ ಸಾಕಷ್ಟೆ ಈಗ.'

* * *

ಸಾಬರಮತಿ ಆಶ್ರಮದಲ್ಲಿ ಮಲೇರಿಯಾ ಹಾವಳಿ ಬಹಳ. ಇದನ್ನು ನಿವಾರಿಸುವುದು ಹೇಗೆಂಬುದು ದೊಡ್ಡ ಪ್ರಶ್ನೆಯಾಗಿತ್ತು. ಬಂದಬಂದ ವೈದ್ಯ ರನ್ನೆಲ್ಲ ಕೇಳಿಯಾಯಿತು. ಯಾರನ್ನು ಕೇಳಿದರೂ ಸೊಳ್ಳೆಪರದೆ ಉಪಯೋಗ ಮಾಡಿ ಎಂಬ ಸಲಹೆಯೆ. 'ಸೊಳ್ಳೆಪರದೆ ಎಲ್ಲರಿಗೂ ಸಿಕ್ಕೀತೆ? ಬಡವರಿಗೆ ಸಾಧ್ಯವಾದ ಉಪಾಯ ಹೇಳಿ' ಎಂದು ಗಾಂಧೀಜಿಯ ಸವಾಲು.

ಒಂದು ಸಲ ಯಾರೋ ಹೇಳಿದರು: 'ಮೈತುಂಬಾ ಹೊದ್ದುಕೊಂಡು ಮೋರೆಗೆ ಸೀಮೆಯೆಣ್ಣೆ ಸವರಿಕೊಂಡರಾಯಿತು.' ಗಾಂಧೀಜೀ ಮೊದ ಲಿಂದಲೂ ಸೊಳ್ಳೆಪರದೆ ಉಪಯೋಗಿಸುತ್ತಿದ್ದರು. ಈ ಸುದ್ದಿ ಕೇಳಿದ್ದೇ ತಡ, ದಿನವೂ ಮಲಗುವ ಮುಂಚೆ ಸೀಮೆಯೆಣ್ಣೆ ಸೇವೆ ಪ್ರಾರಂಭವಾಯಿತು.

ಹೀಗೆಯೆ – ಚಿಲ್ಲರೆ ವಿಷಯಗಳಲ್ಲೂ ಗಾಂಧೀಜಿಗೆ ತುಂಬಾ ಶ್ರದ್ಧೆ. ಗಾಂಧೀಜಿಯ ಕೊಠಡಿಯಲ್ಲಿ ಒಂದು ಕಿಟಕಿಯಿತ್ತು. ಕೂತುಕೊಳ್ಳುವ ಸ್ಥಳಕ್ಕೆ ಇದಿರಾಗಿದ್ದ ಕಿಟಕಿ; ಗಾಂಧೀಜಿಯ ಮೋರೆಗೆ ನೇರಾಗಿ ಬಿಸಿಲು ಬೀಳುತ್ತಿತ್ತು. ಬಿಸಿಲಿಗೆ ಅಡ್ಡವಾಗಿ ಏನಾದರೂ ಮಾಡಲು ಹೇಳಿದರು. ಆಶ್ರಮದವರು ಯಾರೋ ಒಬ್ಬ ಬಡಗಿಯನ್ನು ಕರೆತಂದು ಅದಕ್ಕೆ ಬಾಗಿಲು ಮಾಡಿಸುವ ಏರ್ಪಾಡು ಮಾಡಿದರು. ಮೊದಲು ಕೇಳಿದಾಗ ಗಾಂಧೀಜೀ ಅಸ್ತು ಎಂದರಾಗಲಿ ತರುವಾಯ ಏನೋ ತಪ್ಪುಮಾಡಿದವರಂತೆ ಅನಿಸಿತು. ಕಡೆಗೆ ಸಂಜೆಯ ಸಭೆಯಲ್ಲಿ ಹೇಳಿದರು: 'ಬಡತನದ ವ್ರತವನ್ನು ತೊಟ್ಟ ನಾವು ಹೀಗೆ ಮಾಡಿದುದು ತಪ್ಪು. ಈ ಬಾಗಿಲಿಗೆ ಎರಡು ರೂಪಾಯಿ ವೆಚ್ಚ ಮಾಡುವ ಬದಲು ಒಂದು ಗಜ ಖಾದಿಬಟ್ಟೆ ತೆರೆಹಾಕಿದ್ದರೆ ಸಾಕಾಗಿತ್ತು. ಎರಡು ಮೊಳೆ ಹೊಡೆದು ನಾವೇ ಅದನ್ನು ಮಾಡಿಬಿಡಬಹುದಾಗಿತ್ತು. ಬಡತನದ ವ್ರತ ಸುಲಭವಲ್ಲ; ಹೆಜ್ಜೆಹೆಜ್ಜೆಗೂ ಕಣ್ಣಿರಬೇಕು; ಕೃತಿ ಕೃತಿಯನ್ನೂ ತೂಗಬೇಕು' ಎಂದರು

* * *

ಅಸ್ಸಾಂ ಪ್ರಾಂತ ಬರೀ ಗುಡ್ಡಗಾಡಿನ ಸೀಮೆ; ಕಗ್ಗಾಡು. ಗಾವುದ ಗಾವುದ ನಡೆದರೂ ನರಪ್ರಾಣಿಯ ಸುಳಿವೇ ಇಲ್ಲ. ಅಂಥ ಗುಡ್ಡದಲ್ಲಿ ರೈಲು ಹೋಗುತ್ತದೆ. ಆ ಕೊರಕಲು ದಾರಿಯಲ್ಲಿ ಎಷ್ಟೋ ಸಲ ರೈಲುದಾರಿ ತಪ್ಪುತ್ತದೆ. ಒಂದೊಂದು ಸಲ ಅರ್ಧಕ್ಕರ್ಧ ಗಾಡಿಗಳು ಕಳಚಿಕೊಂಡು ಬಾಲವೇ ಬೇರೆ ತಲೆಯೇ ಬೇರೆ ಆಗುವುದುಂಟು. ಅತ್ತಕಡೆ ಇಳಿಜಾರು ಇದ್ದರೆ ಬಾಲ ಹಿಂದಕ್ಕೇ ಇಳಿದುಹೋಗಬಹುದು. ಗಾಡಿಗಳೂ ಪೆಟ್ಟಿಗೆಗಳಿದ್ದಹಾಗೆ.

ಒಂದು ಸಲ ಗಾಂಧೀಜೀ ಅಸ್ಸಾಂ ಪ್ರಾಂತದಲ್ಲಿ ಪ್ರವಾಸಮಾಡುತ್ತಿದ್ದರು. ರೈಲು ಗುಡ್ಡದ ಕಿಬ್ಬಿಗಳಲ್ಲಿ ಬುಸುಬುಸು ಹೋಗುತ್ತಿತ್ತು. ದಾರಿಯಲ್ಲಿ ಹತ್ತುವವರೂ ಇಳಿವವರೂ ಕಡಮೆ. ಎಲ್ಲರಿಗೂ ನಿದ್ದೆ ಹತ್ತಿತ್ತು.

ಇದ್ದಕ್ಕಿದ್ದಹಾಗೆ ನಡುರಾತ್ರಿಯಲ್ಲಿ ಏನೋ ಸಿಡಿಲು ಹೊಡೆದಂತಾಗಿ ಎಲ್ಲರೂ ಧಿಗ್ಗನೆ ಎದ್ದರು. ಇಂಜಿನ್ನಿಗೆ ಎರಡು ಗಾಡಿ ಇದಿರುಸಿಕ್ಕಿ ಢಿಕ್ಕಿಯಾಗಿತ್ತು. ಆ ದಾರಿಯಲ್ಲಿ ಹೋಗಿದ್ದ ಇನ್ನೊಂದು ರೈಲಿಂದ ಈ ಎರಡು

ಗಾಡಿ ಕಳಚಿಕೊಂಡು ಅಲ್ಲೇ ನಿಂತಿದ್ದವಂತೆ. ಅದು ವಿಷಯ. ಈ ಇಂಜಿನ್ ಇನ್ನೂ ಆ ಗಾಡಿಗಳನ್ನು ತಳ್ಳಬೇಕು; ಹಿಂದಿದ್ದವನ್ನು ಎಳೆಯಬೇಕು.

ಮತ್ತೆ ಎಲ್ಲರೂ ಮಲಗಿದರು. ಮತ್ತೊಂದು ಜಾವಹೊತ್ತು ಕಳೆಯಿತು. ಯಾವುದೋ ಒಂದು ಚಿಕ್ಕ ನಿಲುಮನೆ. ಗಾಂಧೀಜಿಯ ಪರಿವಾರದವರು ಇಳಿದು ಬಂದು ನೋಡಿದರೆ ಗಾಂಧೀಜೀ ಮಲಗಿದ್ದ ಗಾಡಿ ಪತ್ತೆಯೇ ಇಲ್ಲ; ಎಲ್ಲೋ ಕಳಚಿಕೊಂಡು ಬಿಟ್ಟಿತ್ತು.

ಎಲ್ಲರಿಗೂ ಸಿಡಿಲು ಬಡಿದಂತಾಯಿತು. ಗಾಂಧೀಜಿಗೆ ಆಗ ಕೃಷ್ಣ ದಾಸನೊಬ್ಬನೇ ಸರ್ವಪರಿವಾರ. ಎಂಥ ಪ್ರಮಾದವಾಯಿತಲ್ಲ ಎಂದು ಅವನಿಗೆ ಚಿಂತೆ. ಗಾಂಧೀಜೀ ಮಲಗಿದಾರೆ. ಯಾವ ಕಾರಡವಿಯಲ್ಲಿ ಗಾಡಿ ನಿಂತಿದೆಯೋ? ಯಾವ ಕ್ರೂರಮೃಗ ಬಂದು ಏನು ಮಾಡಿತೋ? ದೇವರೇ ಗತಿ ಎಂದು ಅವನ ತಳಮಳ.

ಗಾಂಧೀಜಿಯನ್ನು ಬಿಟ್ಟು ಗಾಡಿ ಹೇಗೆ ಮುಂದುವರಿದೀತು. ಹಿಂದಕ್ಕೆ ಪಯಣ ಹೊರಟಿತು. ಅರ್ಧಗಂಟೆಯಮೇಲೆ ಮತ್ತೆ ಢಿಕ್ಕಿ! ಕೃಷ್ಣದಾಸ ಎಲ್ಲರಿಗಿಂತ ಮೊದಲು ಇಳಿದು ಓಡಿದ.

ಗಾಂಧೀಜೀ ಕಿಟಕಿಯಿಂದ ಬಗ್ಗಿನೋಡುತ್ತ ನಗುತ್ತಿದಾರೆ. ಪ್ರಸನ್ನ ವಾಗಿದೆ ಮುಖ. ಹಿಂದಿನಿಂದ ಮತ್ತೊಂದು ಗಾಡಿ ಬಂದು ಮುಂದಕ್ಕೆ ನೂಕೀತು ಎಂದು ತಿಳಿದಿದ್ದೆ. ನೀವೇ ಬಂದಿರಲ್ಲ' ಎಂದರು.

ಆ ಘೋರಾರಣ್ಯದಲ್ಲಿ ಈ ವಿಚಿತ್ರ ವಿಪತ್ತಿಗೆ ಸಿಕ್ಕಾಗಲೂ ಗಾಂಧೀಜೀ ನಿರ್ಭೀತರು, ಸ್ಥಿರಚಿತ್ತರು.

*　　　*　　　*

ಸಾಬರಮತಿ ಆಶ್ರಮಕ್ಕೆ ವಿದ್ಯಾರ್ಥಿಗಳ ಗುಂಪೊಂದು ಬಂದಿತ್ತು. ಕೆಲವು ಕಾಲ ಬಾಪೂಜಿಯ ಸನ್ನಿಧಿಯಲ್ಲಿ ಕುಳಿತು ಮಾತಾಡಿದಮೇಲೆ ಅವರ ಉಪಾಧ್ಯಾಯ ವಿದ್ಯಾರ್ಥಿಗಳ ಪರವಾಗಿ ಒಂದು ಸಂದೇಶ ಕೇಳಿದ. ಅಂದು ಬಾಪೂಗೆ ಮೌನದಿನ. ಇದಿರಿಗಿದ್ದ ಕಾಗದದ ಚೂರೊಂದನ್ನು ತೆಗೆದುಕೊಂಡು

ನೂಲು ಹಿಂಜು ನೇಯಿ
ಹಿಂಜು ನೂಲು ನೇಯಿ
ನೇಯಿ ಹಿಂಜು ನೂಲು

ಎಂದು ಒಂದು ಚಿತ್ರಬಂಧ ಕವನ ಬರೆದರು. ಆ ಹುಡುಗರಿಗೂ ಅಲ್ಲಿದ್ದ ಇತರರಿಗೂ ಹೊಟ್ಟೆತುಂಬ ನಗೆ ಬಂತು.

* * *

ಗಾಂಧೀಜಿಗೆ ವಿನೋದದಲ್ಲಿ ಆಸಕ್ತಿ ಬಹಳ. ಯಾರೋ ಒಮ್ಮೆ ಅವರನ್ನು ಕೇಳಿದರಂತೆ: ಗಾಂಧೀಜೀ, ನಿಮಗೆ ನಗೆ ಸೇರುತ್ತದೆಯೆ ಎಂತ. 'ನನಗೆ ನಗೆ ಸೇರದಿದ್ದರೆ ಎಂದೋ ಮುಂದಿನ ಹೊಳೆಯೊಳಗೆ ಹಾರಿಕೊಳ್ಳುತ್ತಿದ್ದೆ' ಎಂದರಂತೆ ಗಾಂಧೀಜೀ ಅದಕ್ಕುತ್ತರವಾಗಿ.

ಆದರೆ ಗಾಂಧೀಜೀ 'ವಿನೋದಗಾರ'ರಲ್ಲ. ಅವರ ವಿನೋದದಲ್ಲಿ ಮನಃಪ್ರಸಾದದ ಲೀಲೆಯಿದೆ; ಉಪದೇಶದ ಮಿಂಚು ಇದೆ. ನಗುನಗುತ್ತಲೇ ಒಂದು ಪಾಠ ಹೇಳಿಕೊಡುತ್ತಾರೆ.

೧೯೨೭ರಲ್ಲಿ ಆರೋಗ್ಯಕ್ಕಾಗಿ ಗಾಂಧೀಜೀ ನಂದೀದುರ್ಗದಲ್ಲಿದ್ದರಲ್ಲ. ಆಗ ಬೆಂಗಳೂರಿನ ತರುಣರಿಗೆ ಅವರ ಸೇವಾಭಾಗ್ಯ ಲಭಿಸಿತ್ತು. ಗಾಂಧೀಜೀ ನಂದೀದುರ್ಗದಲ್ಲಿ ಬಿಡಾರಮಾಡಿದ ಮರುದಿನ ಒಬ್ಬ ತರುಣ ಬಚ್ಚಲು ಮನೆಯ ಹೊರಗೆ ಓಡಾಡುತ್ತಿದ್ದ. ಗಾಂಧೀಜೀ ಅವನನ್ನು ನೋಡಿದರು. ಹತ್ತಿರಕ್ಕೆ ಕರೆದು ಅವನು ಯಾರೆಂದು ವಿಚಾರಿಸಿದರು.

'ನಾನೊಬ್ಬ ಸ್ವಯಂಸೇವಕ, ಮಹಾತ್ಮಾಜೀ'

'ಸ್ವಯಂಸೇವಕನೇ! ಸರಿ. ಏನೇನು ಕೆಲಸಮಾಡುತ್ತೀ?'

'ಸಫಾಯಿ—ಇನ್ನೂ....'

'ಸಫಾಯಿ ಕೆಲಸವೆ? ಸಂತೋಷ. ನನಗಾ ವಿದ್ಯೆಯಲ್ಲಿ ತುಂಬಾ ಪರಿಶ್ರಮವಿದೆ; ತಿಳಿಯಿತೇ? ನೀನು ಸರಿಯಾಗಿ ಕೆಲಸಮಾಡಿದೀಯೋ ಇಲ್ಲವೋ ನೋಡಲು ಆಗಾಗ ನನ್ನ ಸಿ. ಐ. ಡಿ. ಇನ್‌ಸ್ಪೆಕ್ಟರನ್ನು ಕಳಿಸುತ್ತೇನೆ. ನಿನ್ನ ಕೆಲಸ ಸರಿಯಾಗಿರಲಿಲ್ಲವೋ ಇನ್‌ಸ್ಪೆಕ್ಟರ್ ಬಂದ ಅಂತಲೇ ತಿಳಿ....... ನನ್ನ ಇನ್‌ಸ್ಪೆಕ್ಟರ್ ಯಾರು ಗೊತ್ತೇ?'

'ಇಲ್ಲ....'

'ನೊಣ. ಚೊಕ್ಕಟವಿಲ್ಲದಿದ್ದರೆಯೇ ನೊಣ ಬರುವುದು.'

'ಇನ್‌ಸ್ಪೆಕ್ಟರ್ ನೊಣ! ಈಗದೊಂದು ವಿಶಿಷ್ಟಪ್ರಯೋಗ.

* * *

ಒಂದು ಸಲ ರಾಷ್ಟ್ರೀಯ ವಿದ್ಯಾಲಯಗಳ ಸಮ್ಮೇಳನ ನಡೆದಿತ್ತು. ಗಾಂಧೀಜೀ ಅಧ್ಯಕ್ಷರು. ಆ ವರ್ಷ ಗಾಂಧೀಜೀ ರಾಷ್ಟ್ರಪತಿ. ಆ ಕೆಲಸವೂ ನಡೆಯಬೇಕು. ಗೋರಕ್ಷಣಾ ಸಮ್ಮೇಲನ, ಮತ್ತೊಂದು ಮಗದೊಂದು - ಎಲ್ಲಕ್ಕೂ ಗಾಂಧೀಜೀ ಬೇಕು.

ಇಂಥದರಲ್ಲಿ ರಾಷ್ಟ್ರೀಯ ಶಾಲೆಗಳ ಉಪಾಧ್ಯಾಯರು ದೀರ್ಘವಾಗಿ ಚರ್ಚೆ, ವಾದಗಳಿಗೆ ಪ್ರಾರಂಭಮಾಡಿದರು. ರಾತ್ರಿ ೯ ಗಂಟೆಗೆ ಮೊದಲಾದ ಸಭೆ ೧೨ ಗಂಟೆಯಾದರೂ ನಡೆದಿತ್ತು.

ಅಷ್ಟುಹೊತ್ತಿಗೆ ಯಾವುದೋ ನಿರ್ಣಯದ ಚರ್ಚೆಮುಗಿದು ಮತ ತೆಗೆದುಕೊಳ್ಳುವ ಸಮಯ ಬಂತು. ಗಾಂಧೀಜೀ ಸಾವಧಾನವಾಗಿ ನಿರ್ಣಯ ವನ್ನೋದಿ ಮತಕೊಡಲು ಹೇಳಿದರು. ಎಷ್ಟೋಜನ ಸಭಿಕರಿಗೆ ಆಗ ಎಚ್ಚರಿಕೆ ಯಾಯಿತು. ತೂಕಡಿಕೆಯಿಂದ ಎದ್ದವನೊಬ್ಬನು 'ಆ ನಿರ್ಣಯವನ್ನು ದಯವಿಟ್ಟು ಓದಬೇಕು' ಎಂದ. ಎಲ್ಲರಿಗೂ ಬೇಸರವಾಯಿತು ಆ ಮಾತು ಕೇಳಿ.

'ಈಗ ತಾನೆ ಓದಿದ್ದಾಯಿತಲ್ಲ' ಎಂದರು ಗಾಂಧೀಜೀ.

'ನಾನು ಗಮನಿಸಲಿಲ್ಲ ಗಾಂಧೀಜೀ' ಎಂದ ಆ ಉಪಾಧ್ಯಾಯ.

ಏನು ಮಾಡಬೇಕು ಆ ನಿರ್ಭಾಗ್ಯನನ್ನು? ಎಲ್ಲರಿಗೂ ಸಿಟ್ಟು ಬಂತು. ಆದರೆ ಗಾಂಧೀಜೀ ನಗುನಗುತ್ತ 'ಗಮನವಿಲ್ಲದ ಉಪಾಧ್ಯಾಯ' ಎಂದು ಚುಚ್ಚಿದರು. ನಗೆಮಿಂಚು ಹೊಡೆದಂತಾಗಿ ಸಭೆಯೆಲ್ಲ ಎಚ್ಚೆತ್ತು ಗೊಳ್ಳೆಂದಿತು.

* * *

ಗಾಂಧೀಜೀ ನೈನಿತಾಲ್‌ಗೆ (ನೈನಿಕೆರೆ) ಹೋಗಿದ್ದರು. ನೈನಾದೇವಿ ಆ ಊರಿನ ಅಧಿದೇವಿ. ಆ ದೇವಿಯ ಗುಡಿಗೆ ಖಾದೀಧಾರಿಗಳಲ್ಲದವರು ಹೋಗುವಂತಿರಲಿಲ್ಲ. ೧೯೩೦ರಲ್ಲಿ ನೈನಿತಾಲ್ ಹೆಂಗಸರು ಗುಂಪು ಕಟ್ಟಿ ಕೊಂಡು ಗುಡಿಯ ಮಹಾದ್ವಾರದಲ್ಲಿ ನಿಂತು ಖಾದಿತೊಡದವರು ಗುಡಿ ಯೊಳಗೆ ಕಾಲಿಡದಂತೆ ನಿಷೇಧಿಸಿದರು. ಆಗ ಎಲ್ಲರೂ ಬೇಸರಗೊಂಡವರೇ. ಒಂದು ವರ್ಷ ಕಳೆವುದರೊಳಗೆ, ಗಾಂಧೀಜೀ ಅಲ್ಲಿಗೆ ಹೋಗುವುದರೊಳ ಗಾಗಿ ಅದೊಂದು ಸಂಪ್ರದಾಯವೇ ಆಗಿ ಅದು ಖಾದಿಗುಡಿಯಾಗಿತ್ತು.

ಪ್ರಧಾನಿ ಗೋವಿಂದ ವಲ್ಲಭಪಂತರು ಆ ಮಾತನ್ನೂ ಗಾಂಧೀಜಿಗೆ ತಿಳಿಸುತ್ತ, "ಎಲ್ಲರೂ ಸೇರಿ ಈ ಕೆಲಸ ನಡೆಸಿದರಾಗಲಿ ಇದರ ಶ್ರೇಯಸ್ಸೆಲ್ಲ ಮುಖ್ಯವಾಗಿ ಕಾಶೀಪುರದ ರಾಣಿ ವಿಮಲಾದೇವಿಗೆ ಸಲ್ಲಬೇಕು. ಆಕೆಯ ಗೆಳತಿಯರ ಗುಂಪು ನಮ್ಮೂರಿಗೊಂದು ಮಿಂಚಿನ ಗೊಂಚಲು. ಇದೆಲ್ಲ ಅವರ ಸೇವೆ" ಎಂದರು.

ತರುವಾಯ ರಾಣಿಯೇ ಬಂದು ಗಾಂಧೀಜಿಯನ್ನು ನೋಡಿದಳು. ಆಕೆ ಬರ್ಮಾ ಕುವರಿ. ಬ್ರಿಟಿಷರು ಬರ್ಮಾದೇಶವನ್ನು ವಶಪಡಿಸಿಕೊಳ್ಳುವ ಮೊದಲು ಷಾನ್‌ರಾಜ್ಯಗಳ ದೊರೆಯಾಗಿದ್ದಾತನ ಮಗಳು. ತಿಬೆಟ್ಟಿನ ದೊರೆಯ ಬಳಗ. ಷಾನ್ ದೊರೆಯನ್ನು ಹಿಡಿದು ಅಲಹಾಬಾದಿನಲ್ಲಿ ಸೆರೆಯಲ್ಲಿಟ್ಟಾಗ ಮಗಳೂ ತಂದೆಯೊಡನೆ ಬಂದಳು. ೧೯೨೫ರಲ್ಲಿ ಕಾಶೀಪುರದ ರಾಜನನ್ನು ಮದುವೆಯಾದಳು. ದಂಪತಿಗಳಿಬ್ಬರಿಗೂ ರಾಷ್ಟ್ರೀಯ ಚಳುವಳಿಯಲ್ಲಿ ಪ್ರೀತಿ. ಗಾಂಧೀಜೀ ಅಲ್ಲಿಗೆ ಹೋಗುವ ಕೆಲವುಕಾಲ ಮೊದಲು ಕಾಶೀಪುರದ ದೊರೆ ತ್ಯಾಗದ ಮಡುವಿನಲ್ಲಿ ಧುಮುಕಿದರು. ಎಲ್ಲ ಶ್ರೀಮಂತಿಕೆಯನ್ನೂ ಬಿಟ್ಟರು; ಸಿಗರೇಟನ್ನೂ ಬಿಟ್ಟರು. ಒಂದೂವರೆ ವರುಷ ಶಿಕ್ಷೆಯಾಯಿತು.

ಆತ ಸೆರೆಯಲ್ಲಿದ್ದಾಗ ಸರಕಾರ ರಾಣಿ ವಿಮಲಾದೇವಿಗೆ ಬಹಳ ಕಿರುಕುಳ ಕೊಟ್ಟಿತು. ಆಕೆಯ ಮನೆಯ ಮೇಲಿನ ರಾಷ್ಟ್ರಧ್ವಜಗಳನ್ನು ಕಿತ್ತುಹಾಕಿದರು; ಗದ್ದೆಯ ಭತ್ತವನ್ನೆಲ್ಲ ಮಾರಿಬಿಟ್ಟರು. ಇದಕ್ಕೆ ಆಕೆ ಜಗ್ಗಲಿಲ್ಲ. ಮನೆಯ ಗೋಡೆಗೆ ರಾಷ್ಟ್ರಧ್ವಜ ಚಿತ್ರಗಳನ್ನು ಬರೆದಳು. ಗೆಳತಿಯರ ಗುಂಪೊಂದನ್ನು ಕಟ್ಟಿ ಪರದೇಶೀ ವಸ್ತ್ರಬಹಿಷ್ಕಾರ, ಖಾದೀ ಪ್ರಚಾರ ನಡೆಸಿದಳು. ಆಕೆ ಏರ್ಪಡಿಸಿದ್ದ ಖಾದೀ ಪ್ರದರ್ಶನವೊಂದಕ್ಕೆ ಗಾಂಧೀಜೀ ಹೋಗಿ ನೋಡಿದರು.

ಪಂತರು ಗಾಂಧೀಜಿಗೆ ಹೇಳಿದರು : ನಿಮ್ಮ ಆತಿಥ್ಯಮಾಡುವ ಅಧಿಕಾರ ಎಲ್ಲರಿಗಿಂತ ಈಕೆಗೇ ಹೆಚ್ಚು. ಅಲ್ಲವೆ ಬಾಪು ?

* * *

ಖಾದಿಯ ವಿಷಯವಾಗಿ ಗಾಂಧೀಜೀ ಇಪ್ಪತ್ತು ವರ್ಷದಿಂದ ಮಾತಾಡುತ್ತಿದಾರೆ, ದುಡಿಯುತ್ತಿದಾರೆ. 'ನಾನು ಇಲ್ಲಿಗೆ ಬಂದಿರುವುದು

ಖಾದೀ ಮಾರಲಿಕ್ಕೆ, ಖಾದ್ಧಿಗಾಗಿ ಭಿಕ್ಷೆ ಬೇಡಲಿಕ್ಕೆ' ಎಂದು ಮನಸು ಬಿಚ್ಚಿ ಹೇಳಿದಾರೆ. ಒಂದು ಕಡೆ ಖಾದಿಭಂಡಾರ ಪ್ರಾರಂಭಿಸಬೇಕಾಗಿತ್ತು. ಗಾಂಧೀಜೀ ಬಂದರು. ಬಂದವರೇ ಗಜಕಡ್ಡಿ, ಕತ್ತರಿ, ಲೆಕ್ಕದ ಪುಸ್ತಕ ಮುಂದಿಟ್ಟುಕೊಂಡು ಮಾರಲಿಕ್ಕೆ ಕೂತರು. ಭಾಷಣವಿಲ್ಲ, ಸಂಭಾಷಣೆ ಇಲ್ಲ. ಮುಂದಿನ ಊರಿಗೆ ಹೋದಮೇಲೆ ಅಲ್ಲಿ ಹೇಳಿದರು. 'ಕೆಲಸವ್ವೇ ಮಾತು. ಅದಕ್ಕಾಗಿಯೇ ಅಲ್ಲಿ ಮಾತಾಡಲಿಲ್ಲ.' ಯಾರಾದರೂ ತಮ್ಮ ಹಸ್ತಾಕ್ಷರ autograph ಕೇಳಿದರೆ ಸರಿ; ಖಾದೀ ಉಟ್ಟುಕೊಂಡು ಬನ್ನಿ, ಕೊಡುತ್ತೇನೆ ಎಂದು ಹೇಳಿ ಅವರಿಗೆ ಖಾದೀ ಉಡಿಸಿಬಿಡುತ್ತಿದ್ದರು. ಎಷ್ಟೋ ಜನ ಶ್ರೀಮಂತಿಸಯರು, ಅಧಿಕಾರಿಗಳ ಮನೆಯವರು ಗಾಂಧೀಜಿಯ ಬಳಿಗೆ ಬಂದು ಹಿಂದಿರುಗುವಾಗ ಖಾದೀ ಉಟ್ಟುಕೊಂಡು ಹೋಗಿದಾರೆ. ಹೋದ ಹೋದ ಕಡೆ ಖಾದಿಯ ಬಗ್ಗೆ ಹಟ ಹಿಡಿದು ಸಾಧಿಸಿದಾರೆ. ಮೆತ್ತಗೆ ಖಾದಿ ಚೀಲ ತೊಡಿಸಿದ್ದರೆ ಕೂತಕಡೆ ಅದನ್ನು ಹರಿದು ಒಳಗಿನ ಮೆತ್ತೆ ಖಾದಿಯೋ ಅಲ್ಲವೋ ಪರೀಕ್ಷಿಸಿ ನೋಡಿದಾರೆ. ಬೇರೆ ಬೇರೆ ತರಗಳಲ್ಲಿ ಅದನ್ನು ನೋಡುತ್ತ ಬಂದಿದಾರೆ.

* * *

ಗಾಂಧೀಜೀ ಸೆರೆಮನೆಯಿಂದ ಒಂದು ಸಲ ಹೊರಗೆ ಬಂದಾಗ ಜನರೆಲ್ಲ ಅವರನ್ನು ಮುತ್ತಿದರು; ದೇಶಕ್ಕೆ ಏನು ಸಂದೇಶ ಎಂದು ಕೇಳಿದರು. ಅಂಥ ಹೊತ್ತಿನಲ್ಲಿ ಒಂದೇ ಮಾತು: 'ಮನೆಗೆ ಹೋಗಿ ದಾರ ತೆಗೆಯಿರಿ.' ಅವರಿಗೆ ಬೇಕಾದ ಕೋಟ್ಯಾಧೀಶರೊಬ್ಬರು ಅವರನ್ನು ಕೇಳಿದರು ಒಂದು ದಿನ: 'ನಿಮಗೆ ನನ್ನ ಹಣ ಬೇಕೋ ನಾನೇ ಬೇಕೋ ನಾಡಿನ ಸೇವೆಗೆ?' 'ನೀನೇ ಬೇಕು' ನೇರಾಗಿ ಬಂತು ಉತ್ತರ. 'ನನ್ನ ಉದ್ಯೋಗ ವ್ಯವಹಾರ ಎಲ್ಲಾ ಬಿಟ್ಟುಬಂದರೆ ಏನು ಕೆಲಸ ಹೇಳುತ್ತೀರಿ ನನಗೆ?' 'ನೂಲುವುದು.' ಆ ಲಕ್ಷ್ಯಶುದ್ಧಿಗೆ ಏಟು ತಪ್ಪುವುದೇ ಇಲ್ಲ.

* * *

ಗಾಂಧೀಜಿಯ ತುಟಿಯಲ್ಲಿ ನಗೆ ತುಳುಕುತ್ತಾ ಇರುತ್ತದೆ. ಸ್ವಲ್ಪ ಅವಕಾಶ ಸಿಕ್ಕರೆ ಸಾಕು ಹೊರಗೆ ಬಂದುಬಿಡುತ್ತದೆ. ಒಂದು ಸಲ ಸಂಯುಕ್ತ ಪ್ರಾಂತದಲ್ಲಿ ತಿರುಗಾಡುತ್ತಿದ್ದರು. ಒಂದು ಊರಿನಲ್ಲಿ ಒಂದು ವಿಚಿತ್ರ

ವಸ್ತು ಸಂಗ್ರಹಾಲಯ. ಅದರ ವ್ಯವಸ್ಥಾಪಕ ಬಂದು ಗಾಂಧೀಜಿಯನ್ನು ಕೇಳಿದ: ನಿಮ್ಮ ಬಲಗೈಯ ಅಚ್ಚುಗುರುತು ನಮಗೆ ಬೇಕು, ಅದನ್ನೂ ಇಲ್ಲಿ ಇಡುತ್ತೇವೆ. ಗಾಂಧೀಜಿಗೆ ಈ ವಿಲಕ್ಷಣ ಪ್ರಾರ್ಥನೆ ಕೇಳಿ ನಗು ಬಂತು. 'ಅಲ್ಲವಯ್ಯಾ, ಇಂಥವೆಲ್ಲ ಕಳ್ಳರು – ಕೆಟ್ಟಚಾಳಿಯ ಜನರು ಇವರಿಂದ ಪೋಲೀಸರು ತೆಗೆದುಕೊಳ್ಳುತ್ತಾರೆ. ನಿನಗೇಕೆ ಬೇಕು? ಹೋಗಲಿ ಕೈಯ ಬದಲು ನನ್ನ ಮೂಗಿನದೋ ಕಿವಿಯದೋ ಗುರುತು ತೆಗೆದುಕೊಳ್ಳಬಾರದೆ?' ಎಂದು ತೇಲಿಸಿಬಿಟ್ಟರು. ಇನ್ನೊಂದು ಸಲ ಇಂಗ್ಲೆಂಡಿನಲ್ಲಿ ಯಾರೋ ಅಮೆರಿಕದ ಹೆಂಗಸು ಭಕ್ತಿಯಿಂದ ತಮ್ಮ ದೇಶಕ್ಕೆ ಬರಬೇಕೆಂದು ಅವರನ್ನೂ ಆಹ್ವಾನಿಸಿದಳು. 'ಅಲ್ಲಿ ನೀವು ಅಂದರೆ ಎಲ್ಲರಿಗೂ ಹುಚ್ಚು' ಎಂದು ಸ್ತುತಿ ಮಾಡಿದಳು. ಗಾಂಧೀಜಿಯ ಮುಂದೆ ಈ ಆಟವೆ? 'ಸರಿಸರಿ. ನಾನೇ ಅಲ್ಲಿಗೆ ಬಂದವರೆ ನಿಮ್ಮವರು ಎಲ್ಲಾದರೂ ಒಂದು ಮೃಗಾಲಯಕ್ಕೆ ಕರೆದು ಕೊಂಡು ಹೋಗಿ ಸೇರಿಸಿಬಿಟ್ಟಾರು. ನನ್ನ ಸ್ನೇಹಿತರೆಲ್ಲ ಮೊದಲೇ ಎಚ್ಚರಿಕೆ ಹೇಳಿದಾರೆ' ಎಂದು ಇದ್ದವರನ್ನೆಲ್ಲ ನಗಿಸಿಬಿಟ್ಟರು.

* * *

ಗಾಂಧೀಜೀ ಲಂಡನ್ನಿಗೆ ಹೋದಾಗ ಲಂಡನ್ ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಾಪಕರು ನೋಡಲು ಬಂದಿದ್ದರು. ನನಗೆ ಭರತಖಂಡ ವೆಂದರೆ ಬಲು ಪ್ರೀತಿ ; ನಿಮ್ಮನ್ನು ಕಂಡರೆ ಬಹಳ ಗೌರವ' ಎಂದರು. 'ನೀವು ದೊಡ್ಡ ವಿದ್ವಾಂಸರೋ' ಎಂದು ಕೇಳಿದರು ಗಾಂಧೀಜೀ. ಆತ ಮುಗುಳುನಗೆ ನಕ್ಕರು. 'ಸಂಕೋಚಪಡಬೇಡಿ. ಹೇಳಿ, ಮ್ಯಾಕ್ಸ್‌ಮುಲ್ಲರ್ ಅಷ್ಟು ವಿದ್ವಾಂಸರೋ ನೀವು?' ಎಂದರು ಗಾಂಧೀಜೀ. 'ಹೌದು ಎಂದೇನು, ನನಗಷ್ಟು ಧೈರ್ಯವಿಲ್ಲದಿದ್ದರೆ ನಾನೀ ಕೆಲಸವನ್ನು ಒಪ್ಪಿಕೊಳ್ಳುತ್ತಲೇ ಇರ ಲಿಲ್ಲ. ನನಗೆ ಗೀತೆ ಸಂಪೂರ್ಣವಾಗಿ ಕಂಠಪಾಠ ಬರುತ್ತದೆ. ಉಪನಿಷ ತ್ತನ್ನೂ ಓದಿದೇನೆ' ಎಂದು ಉಪನಿಷತ್ ಶ್ಲೋಕವೊಂದನ್ನು ಹೇಳಿದರು.

ಅದನ್ನು ಕೇಳಿ ಗಾಂಧೀಜೀ ಹೇಳಿದರು ನಗುತ್ತ "ಅಂತೂ ಉಚ್ಚಾ ರಣೆಯಲ್ಲಿ ಇನ್ನೂ ಬಹಳ ಪಾಠ ಹೇಳಿಕೊಡಬಹುದು ನಾವು ನಿಮಗೆ" ಎಂದರು.

Dear Sumna, 11-8-46

I hope you will succeed in your venture.

Yours

Bapu